MR. SPEAKER.—The point is that the whole admission will go back by one month. Anyway, try to meet him in his chambers. The results were announced on 27th June 1981. Some of us and the students knew that last date was 30th June. The students should have approached the concerned authority and sought for the extension of time. That is what the Hon'ble Minister is making out. He has been suggesting that it would postpone the admission by one month. Of course, the matter is serious affecting 28 students. Please try to meet him in his chambers, so that he could consult the officers and oblige or something like that.

SRI K. BHASKAR NAIDU.—Let the Hon'ble Minister consult his Secretaries and take a decision.

MR. SPEAKER.—Why can't you meet him in his chambers ?

ಶ್ರೀ ಡಿ. ಟಿ. ರಾಮು.—ಸ್ವಾಮಿ, ಈಗಾಗಲೇ ಪಾಠಪ್ರವಚನಗಳು ಪ್ರಾರಂಭವಾಗಿದ್ದರೆ ಅವರು ಹೇಗೋ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ, ಆದುದರಿಂದ ಆ ೨೮ ಹುಡುಗರ ಮುಂದಿನ ಭವಿಷ್ಯದ ಪ್ರಶ್ನೆ ಇದರಲ್ಲಿ ಇದೆ. ಆದುದರಿಂದ ದಯಮಾಡಿ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—I do not know the details. Please meet the Hon'ble Minister in his Chambers. The Ruling Party Members are taking the Zero Hour.

ಶ್ರೀ ಬಿ. ಎನ್. ಕೆಂಗೇಗೌಡ.—ಅವರು ನಮ್ಮನ್ನು ಅವರ ಚೇಂಬರ್‌ಗೆ ಕರಿಸಿ ಮಾತುಕತೆ ನಡೆಸುವ ಬಗ್ಗೆಯಾದರೂ ಇಲ್ಲಿ ಭರವಸೆ ಕೊಡಬೇಕು ಸ್ವಾಮಿ. ಇಲ್ಲದಿದ್ದರೆ ಇಲ್ಲರ್ರಿ ಅಲ್ಲಿಯೇ ಅಸೆಂಬ್ಲಿ ಹಾಲ್‌ನಲ್ಲಿ ಉತ್ತರ ಕೊಟ್ಟು ಮುಗಿಸಿ ಬಿಡುತ್ತೇನೆಂದು ಹೇಳಿ ಬಿಡುತ್ತಾರೆ. ಆದುದರಿಂದ ಇದರ ಬಗ್ಗೆ ಅವರು ಸ್ಪಷ್ಟವಾದ ಭರವಸೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

MR. SPEAKER.—I do not think that he would deny you that opportunity.

ಶ್ರೀ ಬಿ. ಎನ್. ಕೆಂಗೇಗೌಡ.—ಅವರ ಚೇಂಬರ್‌ಗೆ ಕರೆಸುವ ಬಗ್ಗೆ ಅಷ್ಟಾದರೂ ಹೇಳಲಿ ಸ್ವಾಮಿ. Let him have a patient hearing and take a decision.

MR. SPEAKER.—Do not press him like that.

FINANCIAL BUSINESS

Discussion on the Voting Demands for Grants for 1981-82.

MR. SPEAKER.—Now I call the Hon'ble Member Sri C. A. Chandregowda to speak on Demand Nos. 34, 47, 33, 43, 44, 45, 46 and 63. He is given 15 minutes only. We have to call the Ministers for reply today.

† ಶ್ರೀ ಸಿ. ಎ. ಚಂದ್ರೇಗೌಡ (ಚಿಕ್ಕಮಗಳೂರು).— ಮಾನ್ಯ ಅಧ್ಯಕ್ಷರೇ, ಪಿ. ಡಬ್ಲ್ಯೂ. ಡಿ. ಮತ್ತು ಮೇಜರ್, ಮೈನರ್ ಇರಿಗೇಷನ್, ಪವರ್, ಫಿಶರೀಸ್ ಇತ್ಯಾದಿ ಬೇಡಿಕೆಗಳನ್ನು ಏನು ಸದನದ ಮುಂದೆ ಮಂಡಿಸಿದ್ದಾರೆ ಅವುಗಳನ್ನೆಲ್ಲಾ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಅಧ್ಯಕ್ಷರೇ, ಇವತ್ತು ನಾವು ಓಟ್ ಆನ್ ಅಕೌಂಟ್ ಆಗಲೀ ಅಥವಾ ಯಾವುದೇ ಒಂದು ಅಲೋಕೇಷನ್‌ಗೆ ಮಂಜೂರು ಮಾಡಿದರೆ ಅದು ಕೊನೆಯ ಪಕ್ಷ ಒಂದೆರಡು ತಿಂಗಳಲ್ಲಿ ಕಾರ್ಯಾರಂಭವಾಗಿರಬೇಕು. ಆದರೆ ಅದು ಆ ರೀತಿಯಾಗುತ್ತಿಲ್ಲ. ನಾನು ಇವತ್ತು ಒಂದು ಎಸ್ಟಿಮೇಟ್ ಕಮಿಟಿಯ ಸದಸ್ಯನಾಗಿರುವುದರಿಂದ ಕೆಲವು ಡಿಪಾರ್ಟ್‌ಮೆಂಟ್‌ಗಳಲ್ಲಿ ಆಗುತ್ತಿರತಕ್ಕಂಥ ಕೆಲಸಗಳನ್ನು ನೋಡಲು ಹೋದರೆ ಅಲ್ಲಿ ಸಾಮಾನ್ಯವಾಗಿ ಡಿಪಾರ್ಟ್‌ಮೆಂಟ್‌ನ ಅಪ್ರೂವಲ್ ಆಗಿ, ಫೈನಾನ್ಸ್ ಕನ್‌ಕರೆನ್ಸ್ ಆಗಿ ಟೆಕ್ನಿಕಲ್ ಸ್ಯಾಂಕ್ಷನ್ ಇವೆಲ್ಲಾ ಮುಗಿಯುವುದರೊಳಗಾಗಿ ನವೆಂಬರ್ ಡಿಸೆಂಬರ್ ಮುಗಿದು ಹೋಗಿರುತ್ತದೆ. ಹೀಗಾಗಿ ಆ ವರ್ಷದಲ್ಲಿ ಏನು ಹಣ ಮಂಜೂರಾಗಿರುತ್ತದೆ, ಅದನ್ನು ಉಪಯೋಗಿಸಿಕೊಂಡು ಆ ಕೆಲಸ ಕಾರ್ಯಗಳನ್ನು ಮಾಡಲು ಆಗದೆ ಅದು ಮುಂದಕ್ಕೆ ಹೋಗುತ್ತದೆ. ಇದರಿಂದಾಗಿ ಇವತ್ತು ಒಂದು ಲಕ್ಷ ರೂಪಾಯಿಗಳ ಯೋಜನೆಯು ವೆಚ್ಚ ಮುಂದಿನ ವರ್ಷಕ್ಕೆ ಹೋಗಿರುವುದರಿಂದ ಅದಕ್ಕೆ ಒಂದೂವರೆ ಲಕ್ಷ ತಗುಲುತ್ತದೆ, ಪುತ್ತೆ ಅದು ಮುಂದಿನ ವರ್ಷಕ್ಕೆ ಹೋದರೆ ಎರಡೂವರೆ ಲಕ್ಷಕ್ಕೆ ಹೋಗುತ್ತದೆ. ನೀವು ಏನು ಕೆಲಸ ಕಾರ್ಯಗಳ ಪಟ್ಟಿ ತಯಾರು ಮಾಡಿ ಸಂಬಂಧಪಟ್ಟ ಶಾಸಕರಿಗೆ ಕೊಡುತ್ತೀರಿ ಮತ್ತು ಸಂಬಂಧಪಟ್ಟ ಮಂತ್ರಿಗಳವರು ಈ ಸಭೆಯಲ್ಲಿ ಬೇಡಿಕೆಗಳನ್ನು ಮಂಡಿಸಿ ಹಣವನ್ನು ಈ ಸಭೆಯಲ್ಲಿ ಮಂಡಿಸಿ ಮಂಜೂರಾತಿ ಪಡೆದಿದ್ದನ್ನು ಸಂಬಂಧಪಟ್ಟ ಕೆಲಸಕಾರ್ಯಗಳಿಗೆ ವಿನಿಯೋಗಿಸದೇ ಹೋದರೆ, ಸಂಬಂಧಪಟ್ಟ ಮಿಷನರಿಗಳು ಕಾರ್ಯ ಚಟುವಟಿಕೆಗಳಲ್ಲಿ ಕಾರ್ಯೋನ್ಮುಖರಾಗದಿದ್ದರೆ, ಅದು ಶೀಘ್ರಗತಿಯಲ್ಲಿ ಕೆಲಸ ಮಾಡದಿದ್ದರೆ ನಾವು ಮಂಜೂರಾತಿ ನೀಡಿದ್ದು ಏನೂ ಪ್ರಯೋಜನವಿಲ್ಲದೆ ಹಾಳಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿ, ಅನೇಕ ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಇಲಾಖೆಗಳಲ್ಲಿಯೂ (ಪಿ.ಡಬ್ಲ್ಯೂ.ಡಿ., ಫಿಶರೀಸ್, ಸಣ್ಣ ಹಾಗೂ ದೊಡ್ಡ ನೀರಾವರಿ ಇಲಾಖೆಗಳು ಇತ್ಯಾದಿ) ಸಹ ತ್ವರಿತಗತಿಯಲ್ಲಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಭಾಷಣದಲ್ಲಿ ಹೇಳಿ ಕಾರ್ಯತಃ ಕೇಂದ್ರೀಕೃತ ಮಾಡುತ್ತಿದ್ದಾರೆ. ಇದು ಮೊದಲು ಹೋಗಬೇಕು. ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರ್ ಸೂಪರಿಂಟೆಂಡಿಂಗ್ ಇಂಜಿನಿಯರ್, ಚೀಫ್ ಇಂಜಿನಿಯರ್‌ಗಳಿಗೆ ಕೊಡತಕ್ಕ ಅಧಿಕಾರವನ್ನು ಅವರಿಗೆ ಕೊಡಬೇಕು. ಇವತ್ತಿನ ದಿವಸ ಏನಾಗಿದೆ ಎಂದರೆ, ೫ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಎಲ್ಲ ಕೆಲಸಗಳೂ ಸಹ ಮುಖ್ಯ ಇಂಜಿನಿಯರ್‌ರವರ ಲೆವಲ್ಲಿಗೆ ಬಂದು ಮಂಜೂರಾಗಿ ಆಮೆಯೋಪಾದಿಯಲ್ಲಿ ಹೋಗುತ್ತಿವೆ. ಈ ರೀತಿ ಆಗಬಾರದು. ಅವು ಯಾವತ್ತೂ ನಾಗಾಲೋಟದಿಂದಲೇ ಓಡಬೇಕು. ಇಲ್ಲದಿದ್ದರೆ ಜನತೆಯ ಹೆಚ್ಚಿನ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆಗುವುದಿಲ್ಲ. ಈ ಮೂಲಕ ಮಾನ್ಯ ಮಂತ್ರಿಗಳಿಗೆ ನಾನು ಒಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಯಾವ ಕೆಲಸಗಳೇ ಆಗಲಿ ಅವಕ್ಕೆ ಶೀಘ್ರಗತಿಯಲ್ಲಿ ಒಪ್ಪಿಗೆ ದೊರೆತು ಅವು ಜಾಗ್ರತೆ ಪೂರ್ಣಗೊಳ್ಳುವ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ರೆಡ್ಡಿಯವರು ಇಂಜಿನಿಯರ್ ಇದ್ದಾರೆ, ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆದರೆ ನಾನು ಆ ವಿಚಾರಗಳಿಗೆ ಹೋಗುವುದಿಲ್ಲ, ಅಡ್ಮಿನಿಸ್ಟ್ರೇಟೀವ್ ಲೆವೆಲ್‌ನಲ್ಲಿ ತಾಂತ್ರಿಕ ಜ್ಞಾನವುಳ್ಳವರೇ ಕಾರ್ಯದರ್ಶಿಗಳಾಗಿರಬೇಕೆಂದೂ ಮತ್ತು ಐ.ಎ.ಎಸ್. ಅಧಿಕಾರಿಗಳು ಸರಿಯಾಗಿ ಕೆಲಸವನ್ನು ಸರಿದೂಗಿಸುತ್ತಿಲ್ಲವೆಂದು ಹೇಳಿದ್ದಾರೆ. ಅವರು ಹೇಳಿದಂತೆ ಹೋದರೆ, ವ್ಯವಸಾಯಗಾರರೇ ವ್ಯವಸಾಯ ಮಂತ್ರಿಗಳಾಗಬೇಕು, ವೈದ್ಯರೇ ಆರೋಗ್ಯ ಮಂತ್ರಿಗಳಾಗಬೇಕು, ಇಂಜಿನಿಯರೇ ಲೋಕೋಪಯೋಗಿ ಮಂತ್ರಿಗಳಾಗಬೇಕು ಎಂದು ಹೇಳಬೇಕಾಗುತ್ತದೆ. ಐ.ಎ.ಎಸ್. ಪಾಸ್ ಮಾಡಿದವರು ಅಡ್ಮಿನಿಸ್ಟ್ರೇಷನ್‌ಗೆ ಸಂಬಂಧಪಟ್ಟ ಹಾಗೆ ಚೆನ್ನಾಗಿ ತಿಳಿದುಕೊಂಡಿರುತ್ತಾರೆ. ಐ.ಎ.ಎಸ್. ಅಧಿಕಾರಿಗಳು ಮುಖ್ಯ ಇಲಾಖೆಗಳಲ್ಲಿ ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಅವರಲ್ಲಿ ಅತಿ ಬುದ್ಧಿವಂತರಾದವರು ಇದ್ದಾರೆ. ಅವರಿಗೆ ವಿದ್ಯೆ ಬುದ್ಧಿ ಜಾಸ್ತಿ ಇದೆ.

ಅಧ್ಯಕ್ಷರು.— ಲೋಕೋಪಯೋ ಇಲಾಖೆಯ ವಿಚಾರಗಳಿಗೆ ಬನ್ನಿ.

ಶ್ರೀ ಸಿ. ಎ. ಚಂದ್ರೇಗೌಡ.— ಅಲ್ಲಿಗೇ ಬರುತ್ತೇನೆ. ಉದಾಹರಣೆಗೆ ಮಾನ್ಯ ಪುಟ್ಟಪ್ಪನವರನ್ನು ಮಾತನಾಡಿಸಿ ನೋಡಿದರೆ, (ನಾವು ೧೦ ಮಾತುಗಳನ್ನು ಆಡಿದರೆ ಅವರು ಒಂದು ಮಾತನಾಡುತ್ತಾರೆ)

ಅವರಲ್ಲಿರತಕ್ಕ ಅಪಾರ ಜ್ಞಾನ ವ್ಯಕ್ತವಾಗುತ್ತದೆ. ಅತಿ ಬುದ್ಧಿವಂತರು ಯಾವಾಗಲೂ ಹೆಚ್ಚು ಮಾತ ನಾಡದೆ ತಮ್ಮ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಇದೇ ರೀತಿ, ಉತ್ತಮ ರೀತಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಇದ್ದಾರೆಂಬ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಲೋಕೋಪ ಯೋಗಿ ಇಲಾಖಾ ವರದಿಯಲ್ಲಿ ೫ನೇ ಪಂಚವಾರ್ಷಿಕ ಯೋಜನೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಒದಗಿಸಿರ ತಕ್ಕ ಹಣವನ್ನು ನೋಡಿದರೆ ಅದರಿಂದ ಎಷ್ಟರಮಟ್ಟಿಗೆ ಎಂಥೆಂಥ ಕಾರ್ಯಗಳನ್ನು ಮಾಡಬಹುದೆಂದು ಊಹಿಸಬಹುದು ಮತ್ತು ಅದರಲ್ಲಿ ಇವರ ಫಿಸಿಕಲ್ ಮತ್ತು ಫೈನಾನ್ಸಿಯಲ್ ಅಚೀವ್‌ಮೆಂಟ್ಸ್‌ನ್ನು ಕೂಡ ನೋಡಬಹುದು. ೧೯೭೪-೮೦ರಲ್ಲಿ ಎಷ್ಟರಮಟ್ಟಿಗೆ ಅಚೀವ್‌ಮೆಂಟ್ ಆಗಿದೆ ಮತ್ತು ೧೯೮೦-೮೧ಕೆ ಎಷ್ಟು ಪ್ರೊಪೋಸ್ ಮಾಡಿದ್ದಾರೆಂಬುದನ್ನು ನೋಡಿದರೆ, ೩ ವರ್ಷಗಳ ಕಾಲಕ್ಕೆ ಅಂಕಿ ಅಂಶಗಳು ಎಷ್ಟು ಕೆಳಮಟ್ಟಕ್ಕೆ ಬಂದಿವೆ ಎಂಬುದನ್ನು ಕಾಣಬಹುದು ಬಡ್ಜೆಟ್ ಎಸ್ಟಿಮೇಟಿನಲ್ಲಿ ಒಂದೂವರೆ ಎರಡರಷ್ಟು ಹೆಚ್ಚಾಗುತ್ತಿದ್ದರೂ ಅಲೋಕೇಷನ್ ಮಾಡುವಾಗ ಕಡಿಮೆ ಹಣ ಕೊಡುತ್ತಾ ಹೋದರೆ ಎಷ್ಟರಮಟ್ಟಿಗೆ ಪ್ರಗತಿಯನ್ನು ತೋರಿಸಬಹುದೆಂಬುದನ್ನು ಆಲೋಚಿಸಬೇಕು. ಈ ರೀತಿಯಾದರೆ ಯಾವ ಕೆಲಸಕಾರ್ಯ ಗಳನ್ನು ಸರಿಯಾಗಿ ನಿರ್ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ಮಾತನ್ನು ವಿಷಾದದಿಂದ ಹೇಳಬೇಕಾಗಿದೆ ಉದಾಹರಣೆಗೆ ಒಂದೇ ಒಂದು ಸಣ್ಣ ವಿಚಾರವನ್ನು ತೆಗೆದುಕೊಂಡರೆ ಆಸ್ಫಾಲ್ಟಿಂಗೆ ಕೆಲಸಕ್ಕಾಗಿ ೫ ವರ್ಷ ಗಳಿಗೆ ಇಟ್ಟಿರುವ ಹಣ ೧೫೦ ಲಕ್ಷ ರೂಪಾಯಿಗಳು, ಅಂದರೆ ವರ್ಷಕ್ಕೆ ೩೦ ಲಕ್ಷ ರೂಪಾಯಿಗಳನ್ನು ಒದಗಿಸಿದಂತಾಯಿತು. ೩೦ ಲಕ್ಷ ರೂಪಾಯಿಗಳಲ್ಲಿ ಆಸ್ಫಾಲ್ಟಿಂಗ್ ಕೆಲಸವನ್ನು ಇಡೀ ಕರ್ನಾಟಕ ರಾಜ್ಯ ದಲ್ಲಿ ಎಷ್ಟು ಕಿಲೋಮೀಟರ್ ಮಾಡಬಹುದು ಎಂದರೆ (ಒಂದು ಲಕ್ಷಕ್ಕೆ ಎರಡೂವರೆ ಕಿಲೋಮೀಟರ್ ನಂತೆ) ೨೫-೮೦ ಕಿಲೋಮೀಟರ್ ಮಾಡಬಹುದು, ನನ್ನ ಒಂದೇ ಕ್ಷೇತ್ರದಲ್ಲಿ ೮೦ ಕಿಲೋಮೀಟರ್ ರಸ್ತೆ ಕೆಲಸದ ಪ್ರೊಪೋಸಲ್ ಇದೆ. ಹೀಗಿರುವಾಗ ಇನ್ನು ಉಳಿದ ಎಲ್ಲ ಶಾಸಕರ ಕ್ಷೇತ್ರಗಳನ್ನು ತೆಗೆದುಕೊಂಡರೆ ಎಷ್ಟಾಗಬಹುದೆಂಬುದನ್ನು ಲೆಕ್ಕ ಹಾಕಿದಾಗ ಈ ಬಾಬಿಗಾಗಿ ಇಟ್ಟಿರತಕ್ಕ ಹಣ 'ಆನೆಗೆ ಆಕಾಶದ ಮಜ್ಜಿಗೆ' ಅಂದ ಹಾಗೆ ಆಗಿದೆ. ನೀವು ಈ ಬಾಬಿಗಾಗಿ ಇಟ್ಟಿರತಕ್ಕ ಹಣ ಏನೇನು ಸಾಲದು ಎಂದು ಹೇಳುತ್ತೇನೆ. ಆದ್ದರಿಂದ, ಇದನ್ನೆಲ್ಲ ಪುನರ್‌ಪರಿಶೀಲನೆ ಮಾಡಿ ಬಹಳ ಕಾಲದಿಂದ ಪೆಂಡಿಂಗ್ ಇರತಕ್ಕ ಕೆಲಸಗಳನ್ನು ಜಾಗ್ರತೆ ಪೂರೈಸಲು ಸಾಕಷ್ಟು ಹಣವನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕೆಲಸ ಕಾರ್ಯಗಳಿಗೆ ಹಣವನ್ನು ಹಂಚುವಾಗ ಒಂದೊಂದು ಡಿವಿಜನ್ನಿಗೆ ಇಷ್ಟು ಹಣ ಒಂದೊಂದು ಬ್ಲಾಕಿಗೆ ಇಷ್ಟು ಹಣ, ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಇಷ್ಟು ಹಣ. ಸೂಪರಿಂಟೆಂಡೆಂಟ್ ಇಂಜಿನಿಯರ್‌ಗೆ ಇಷ್ಟು ಹಣ ಎಂದು ಹಂಚುತ್ತೀರಿ. ಈ ಪದ್ಧತಿಯನ್ನು ಮೊದಲು ಕೈಬಿಡಬೇಕು. ಇವತ್ತಿನ ದಿವಸ, ಕಳೆದ ೩೦ ವರ್ಷಗಳಿಂದಲೂ ಲೋಕೋಪಯೋಗಿ ಇಲಾಖೆ ಕಣ್ಣೆತ್ತಿಯೂ ನೋಡದೆ ಇರತಕ್ಕ ಹಳ್ಳಿಗಳನ್ನು ನಾವು ಕಾಣುತ್ತಿದ್ದೇವೆ. ಅಂಥ ಹಳ್ಳಿಗಳನ್ನು ಇವತ್ತಿಗೂ ಕಡೆಗಣಿಸುತ್ತಿದ್ದಿರಿ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಿಂದಲೂ ಹಿಂದುಳಿದ ಪ್ರದೇಶಗಳ ಅಂಕಿ ಅಂಶಗಳನ್ನು ತರಿಸಿಕೊಂಡು ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣದ ಅವಶ್ಯಕತೆ ಇದೆ ಎಂಬುದನ್ನು ನೋಡಿ ಹಣ ಕೊಡಬೇಕೇ ಹೊರತು ಸುಮ್ಮನೆ ಒಂದೊಂದು ತಾಲ್ಲೂಕಿಗೆ ಎರಡೆರಡು ಲಕ್ಷ ರೂಪಾಯಿಗಳೆಂದು ಕೊಡುತ್ತಿರುವುದರಿಂದ ಏನೇನು ಪ್ರಯೋ ಜನವಾಗುವುದಿಲ್ಲವೆಂದು ಹೇಳುತ್ತೇನೆ. ಉದಾಹರಣೆಗೆ ಚಿಕ್ಕಮಗಳೂರು, ಮೂಡಿಗೆರೆ ತಾಲ್ಲೂಕುಗಳನ್ನು ತೆಗೆದುಕೊಂಡರೆ ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವ ಹಾಗೆ ಇವತ್ತಿಗೂ ಅನೇಕ ಹಳ್ಳಿಗಳಿಗೆ ಯಾವ ಸಾರಿಗೆ ಸಂಪರ್ಕವೂ ಇಲ್ಲ, ರಸ್ತೆಗಳಿಲ್ಲ. ಸೇತುವೆಗಳಿಲ್ಲ, ಬೇಸಿಗೆ ಕಾಲದಲ್ಲಾಗಲೀ, ಮಳೆಗಾಲದಲ್ಲಾಗಲೀ, ಆ ಪ್ರದೇಶಗಳಿಗೆ ಹೋಗುವುದು ಕಷ್ಟ. ಬೇಸಿಗೆಯಲ್ಲಿ ಧೂಳು ಬರುತ್ತದೆ, ಮಳೆಗಾಲದಲ್ಲಿ ಕೆಸರು ಬರುತ್ತದೆ. ಅಂಥ ಹಳ್ಳಿಗಳಿರುವ ತಾಲ್ಲೂಕುಗಳನ್ನು ಮತ್ತು ಅಲ್ಪಸ್ವಲ್ಪವಾದರೂ ಅನುಕೂಲ ಹೊಂದಿರುವ ಇತರೆ ತಾಲ್ಲೂಕುಗಳನ್ನು ಒಂದೇ ರೀತಿಯಲ್ಲಿ ನೋಡಿದರೆ ಬಹಳ ಅನ್ಯಾಯವಾಗುತ್ತದೆ. ಆ ದೃಷ್ಟಿಯಿಂದ ಹಣ ಹಂಚಿಕೆ ಮಾಡುವಾಗ ತೀರಾ ಹಿಂದುಳಿದ ಪ್ರದೇಶಗಳನ್ನು ಹೊಂದಿರುವ ತಾಲ್ಲೂಕುಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇವರ ಬಡ್ಜೆಟ್ ಎಸ್ಟಿಮೇಟನ್ನು ನೋಡಿದರೆ ಕೆಮ್ಮಣ್ಣು ಮತ್ತು ಜೇಡಿ ಮಣ್ಣನ್ನು ಹೊಂದಿರತಕ್ಕ ಭಾಗವಾದ ಮಲೆನಾಡಿನ ಭಾಗಕ್ಕೆ ೨೫ ಪರ್ಸೆಂಟ್ ಹಣವನ್ನೂ ಮತ್ತು ಕಪ್ಪು ಮಣ್ಣನ್ನು ಹೊಂದಿರತಕ್ಕ ಬಯಲು ಸೀಮೆ ಭಾಗಕ್ಕೆ ೪೦ ಪರ್ಸೆಂಟ್ ಅನ್ನು ಕೊಡುತ್ತಿದ್ದಾರೆ ಅದಕ್ಕೂ ಇದಕ್ಕೂ ವ್ಯತ್ಯಾಸ ಇಲ್ಲವೇ ? ಕೆಮ್ಮಣ್ಣು, ಜೇಡಿಮಣ್ಣಿನ ಭೂಮಿ ಮಳೆಗಾಲದಲ್ಲಿ ಎರಡೆರಡು ಅಡಿ ಆಳ ಹೋಗುತ್ತದೆ. ಆದ್ದರಿಂದ, ಅವರಿಗೆ ಇರತಕ್ಕ ೪೦ ಪರ್ಸೆಂಟ್ ಮತ್ತು ಇವರಿಗೆ ಇರತಕ್ಕ ೨೫ ಪರ್ಸೆಂಟ್ ಈ ತಾರತಮ್ಯವನ್ನು ತೆಗೆದು ತಮ್ಮ ಆಯವ್ಯಯದಲ್ಲಿ ಕೆಮ್ಮಣ್ಣು ಮತ್ತು ಜೇಡಿಮಣ್ಣಿನ ಪ್ರದೇಶಗಳಾದ ಮಲೆನಾಡಿನ ಭಾಗಕ್ಕೂ ಸಹ ೪೦ ಪರ್ಸೆಂಟ್ ಹಣವನ್ನು ಕೊಡಬೇಕೆಂದು ಕೇಳಿಕೊಳ್ಳು

ತ್ತೇನೆ. ಇನ್ನು ಇವತ್ತು ಇವರು ೯೪೪ ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನನ್ನು ತೋರಿಸುತ್ತಿದ್ದಾರೆ. ಹಿಂದೆ ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದಾಗ ೮೦೦ ಕೋಟಿ ರೂಪಾಯಿಗಳ ಧನ ಸಹಾಯವನ್ನು ಕೊಡುತ್ತೇವೆಂದು ಹೇಳಿದ್ದರು. ನಾನು ೩-೪ ವರ್ಷಗಳಿಂದ ಶಾಸಕನಾಗಿ ನೋಡುತ್ತಿದ್ದೇನೆ. ಆದರಿಂದ ಏನು ಪ್ರಯೋಜನ ಆಗಿಲ್ಲ. ಈಗ ನೀವು ೯೪೪ ಕೋಟಿ ರೂಪಾಯಿಗಳ ಸಹಾಯವನ್ನು ತೆಗೆದುಕೊಂಡು ಯೋಜನೆ ಹಾಕಿಕೊಂಡಿದ್ದೇವೆಂದು ಹೇಳುತ್ತಿದ್ದೀರಿ. ಕೊನೇಪಕ್ಷ ೬ ಕೋಟಿ ರೂಪಾಯಿಗಳ ಒಂದು ಸಣ್ಣ ಅಂದಾಜನ್ನು ಏನು ತಯಾರಿಸಿದ್ದೀರಿ ಅದನ್ನಾದರೂ ಜಾಗ್ರತೆ ಕಾರ್ಯರೂಪಕ್ಕೆ ತನ್ನಿ ಎಂದು ಹೇಳುತ್ತೇನೆ. ಅದಕ್ಕೆ ಇವತ್ತಿನವರೆಗೂ ಹಣಕಾಸಿನ ಇಲಾಖೆಯ ಸಹಮತಿ ದೊರೆತಿಲ್ಲ. ಆದರೂ ಅದನ್ನು ಈ ಪುಸ್ತಕದಲ್ಲಿ ಮುದ್ರಿಸಿ ನಮ್ಮ ಸಮಾಧಾನಕ್ಕೆ ತೋರಿಸುತ್ತಿದ್ದೀರಿ. ದಯವಿಟ್ಟು ಅದನ್ನಾದರೂ ಜಾಗ್ರತೆ ಮಾಡಿಸಿ ಕೊನೇಪಕ್ಷ ಆ ಕಾರ್ಯವಾದರೂ ಶೀಘ್ರವಾಗಿ ಆಗುವಂತೆ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಬಿಲ್ಡಿಂಗ್ ವಿಚಾರವಾಗಿ ಹೇಳುವುದಾದರೆ, ಈ ಬಗ್ಗೆ ನಮ್ಮ ಲೋಕೋಪಯೋಗಿ ಇಲಾಖೆಯವರು ಬಹಳ ಉತ್ತಮವಾದ ಕಾರ್ಯಗಳನ್ನು ಮಾಡಿದ್ದಾರೆ. ಮಾಡಬೇಕಾದ ಕೆಲಸಗಳು ಇನ್ನೂ ಬಹಳ ಇವೆ. ಆದರೆ ಈ ಬಾಬಿಗಾಗಿ ಇಟ್ಟಿರತಕ್ಕ ಹಣ ಏನೇನು ಸಾಲದು. ಇದಕ್ಕೆ ನೀವು ಕೊಡತಕ್ಕ ಒಂದೆರಡು ಕೋಟಿ ರೂಪಾಯಿ ಸಾಲದು. ಈ ಒಂದು ಕಾರ್ಯಕ್ಕೆ ಅಧಿಕ ಹಣವನ್ನು ಒದಗಿಸಿ ಹೆಚ್ಚಿನ ರೀತಿಯಲ್ಲಿ ಕಾರ್ಯ ಮಾಡುವಂತೆ ಮಾಡಬೇಕು, ಜೊತೆಗೆ ಕಟ್ಟಡಗಳ ವಾರ್ಷಿಕ ರಿಪೇರಿಗೆ ಇಷ್ಟು ಪರ್ಸೆಂಟ್ ಹಣ ಎಂದು ಇಟ್ಟಿದ್ದೀರಿ. ಅದೂ ಕೂಡ ಏನೇನು ಸಾಲದು. ಇವತ್ತಿನ ನಿಮ್ಮ ಎಸ್ ಆರ್. ಏನಿದೆ ಅದಕ್ಕೆ ಹೋಲಿಸಿದರೆ ಬರೀ ಒಂದು ಸುಣ್ಣ ಹೊಡೆಯುವುದು ಅಲ್ಲ, ಹಳ್ಳಿಗಳ ಕಡೆ ಮನೆಗಳ ಗೋಡೆಗಳಿಗೆ ಜೇಡಿ ಮಣ್ಣು ಬಳಿಯುತ್ತಾರೆ ಅದಕ್ಕೆ ಕೂಡ ಸಾಕಾಗುವುದಿಲ್ಲ. ಆದ್ದರಿಂದ, ಈ ಒಂದು ಬಾಬಿಗೂ ಕೂಡ ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಅದನ್ನು ಆದಷ್ಟು ಹೆಚ್ಚಿಗೆ ಮಾಡಿ, ಒಟ್ಟು ಬಜೆಟ್ಟಿನಲ್ಲಿ ಮೈಂಟೆನ್ಸ್‌ಗೆ೨೫ ಪರ್ಸೆಂಟ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಅಪ್ರೂವಲ್ ಕೊಡುವಾಗ ಮೂರು ಪರ್ಸೆಂಟ್ ೮ ಪರ್ಸೆಂಟ್ ಕೊಡುತ್ತೀರಿ. ಇದು ಆಗಬಾರದು. ಮೆಂಟನೆನ್ಸ್‌ಗೆ ಎಷ್ಟು ಬೇಕಾಗುತ್ತದೆ, ಸಣ್ಣ ಪುಟ್ಟ ಕೆಲಸಗಳಿಗೆ ಎಷ್ಟು ಬೇಕಾಗುತ್ತದೆ, ಸ್ಪೆಷಲ್ ರಿಪೇರ್ಸ್‌ಗೆ ಎಷ್ಟು ಬೇಕಾಗುತ್ತದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಒಂದು ಶಾಲಾ ಕಟ್ಟಡದಲ್ಲಿ ೫೦೦ ಅಥವಾ ೧೦೦೦ ಹೆಂಚುಗಳು ಹೋಗಿದ್ದರೆ ಅದಕ್ಕೆ ಎರಡು ಸಾವಿರ ರೂಪಾಯಿ ಬೇಕಾಗುತ್ತದೆ. ಆದರೆ ನೀವು ಕೊಡತಕ್ಕ ಗ್ರ್ಯಾಂಟ್ ೮೦೦ ರೂಪಾಯಿಗಳು ಹಾಗಾದರೆ ಹೆಂಚುಗಳು ಹಾಕುವ ಹಾಗಿಲ್ಲ, ರಿಪೇರಿ ಮಾಡುವ ಹಾಗಿಲ್ಲ, ಹಾಗೇಯೇ ಬಿಡಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಮೈಂಟೆನೆನ್ಸ್ ಗ್ರ್ಯಾಂಟ್ ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ನ್ಯಾಷನಲ್ ಹೈವೇ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡದೇ ಕೆಲವು ಮಾತುಗಳನ್ನು ಮಾತ್ರ ಹೇಳುತ್ತೇನೆ. ಈ ರಸ್ತೆಗಳನ್ನು ಹಳ್ಳಿಗಾಡಿನಿಂದ ಬಂದಿರತಕ್ಕ ಜನ ನೋಡಿದರೆ ನಿಜವಾಗಿಯೂ ದುಃಖ ಮತ್ತು ಆಶ್ಚರ್ಯಪಡುತ್ತಾರೆ. ಅವರು ಹಾಕಿರತಕ್ಕ ಟಾರ್, ಕಾಂಕ್ರೀಟ್ ಕಿತ್ತುಹೋಗುತ್ತಿದೆ. ಹಳ್ಳಿಗಳಲ್ಲಿ ಗುಂಡಿಗಳನ್ನು ಮುಚ್ಚುವುದಕ್ಕೆ ಮಣ್ಣು ಹಾಕಿಸುವುದಕ್ಕೆ ದುಡ್ಡಿಲ್ಲ ಎಂದು ಹೇಳುತ್ತಾರೆ. ಆದರೆ ಈ ಹೈವೇಗಳನ್ನು ಸರಿ ಮಾಡುವುದಕ್ಕೆ ಹೆಚ್ಚಾಗಿ ಹಣ ಖರ್ಚು ಮಾಡುತ್ತಾರೆ. ಉತ್ತಮವಾದ ರಸ್ತೆಗಳನ್ನು ಅಗಲ ಮಾಡುವುದು, ಕರ್ವ್ ಮಾಡುವುದು ಏನು ಮಾಡುತ್ತಿದ್ದೀರಿ ಈ ಕೆಲಸವನ್ನು ಕಡಿಮೆ ಮಾಡಿ ಹಳ್ಳಿಗಾಡಿನಲ್ಲಿ ರಸ್ತೆಗಳನ್ನು ಸರಿಮಾಡಿ. ರಾಷ್ಟ್ರೀಯ ಹೆದ್ದಾರಿಯ ಜೊತೆಗೆ ರಾಜ್ಯ ಹೆದ್ದಾರಿಗಳೇನಿವೆ.........

ಅಧ್ಯಕ್ಷರು.—ರಾಷ್ಟ್ರೀಯ ಹೆದ್ದಾರಿ ಕೆಲಸ ಮಾಡಿಸುವುದು ಕೇಂದ್ರ ಸರ್ಕಾರದ ಫಂಡಿನಲ್ಲಿ.

ಶ್ರೀ ಸಿ, ಎ. ಚಂದ್ರೇಗೌಡ.—ಬೆಂಗಳೂರು ತುಮಕೂರು ರಾಷ್ಟ್ರೀಯ ಹೆದ್ದಾರಿ, ಏನಿದೆ ಅದನ್ನು ಡಬ್ಬಲ್ ರೋಡ್ ಮಾಡಬೇಕು. ಅಲ್ಲಿ ಟ್ರಾಫಿಕ್ ತುಂಬಾ ಜಾಸ್ತಿ ಇರುವುದರಿಂದ ಒನ್ ವೇ ಟ್ರಾಫಿಕ್ ಮಾಡುವುದಕ್ಕೆ ಅನುಕೂಲವಾಗುವಂತೆ ಡಬ್ಬಲ್ ರೋಡ್ ಮಾಡಬೇಕು. ಕರ್ವ್ಸ್ ತೆಗೆಯಬೇಕಾಗಿದ್ದಿಲ್ಲ, ಅಪ್ ತೆಗೆಯಬೇಕಾದ್ದಿಲ್ಲ, ಡಬ್ಬಲ್ ರೋಡ್ ಮಾಡಿದರೆ ಒಂದು ಕಡೆ ಹೋಗುತ್ತಾ ಇರುತ್ತಾರೆ, ಒಂದು ಕಡೆ ಬರುತ್ತಾ ಇರುತ್ತಾರೆ, ಈಗ ಈ ರಸ್ತೆಯಲ್ಲಿ ಅನೇಕ ಅಫಘಾತಗಳಾಗಿ ಸಾವಿರಾರು ಜನ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಕೈಕಾಲು ಮುರಿದುಕೊಳ್ಳುತ್ತಿದ್ದಾರೆ. ತಮಗೂ

(ಮಾನ್ಯ ಅಧ್ಯಕ್ಷರಿಗೆ) ಈ ಅನುಭವ ಆಗಿರಬಹುದು. ಆದ್ದರಿಂದ ಅಲ್ಲಿ ಒನ್ ವೇ ಮಾಡಿ ಡಬ್ಬಲ್ ರೋಡ್ ಮಾಡುವುದು ಉತ್ತಮ. ನೀರಾವರಿ ವಿಷಯದಲ್ಲಿ ಹೇಳುವುದಾದರೆ, ಭಾರಿ ನೀರಾವರಿಯಲ್ಲಿ ಬಹಳ ಉತ್ತಮವಾದ ಕಾರ್ಯಗಳನ್ನು ಮಾಡಿದ್ದಾರೆ. ನಾನು ಕಮಿಟಿ ಟೂರ್ ಹೋದಾಗ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ನೋಡಿ ಬಹಳ ಸಂತೋಷಪಟ್ಟೆ. ಉತ್ತಮವಾದ ಯೋಜನೆಗಳನ್ನು ಮಾಡಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆ ಬಗ್ಗೆ ನೀರಾವರಿ ಕಾಮಗಾರಿಗಳನ್ನು ಚೆನ್ನಾಗಿ ಮಾಡಿದ್ದಾರೆ, ಯೋಜನೆಗೆ ಆಗಿರತಕ್ಕ ಖರ್ಚೆಷ್ಟು ಮತ್ತು ನೀರಾವರಿ ಆಗತಕ್ಕ ಜಮೀನೆಷ್ಟು ಎಂಬುದನ್ನು ನೋಡುತ್ತಿದ್ದೇವೆ. ಆದರೆ ಶೇಕಡ ೧೦ ಪರ್ಸೆಂಟ್ ಕೂಡ ಅಚ್ಚುಕಟ್ಟಿಗೆ ಹೋಗಿಲ್ಲ. ಚಾನಲ್ ವರ್ಕ್ಸ್ ಆಗಿಲ್ಲ ಭಾರಿ ಅಣೆಕಟ್ಟುಗಳನ್ನು ಕಟ್ಟಿಸಿ ಗಾರ್ಡನ್ ಮಾಡಿಸಿ ನೋಟ ನೋಡುವುದಕ್ಕೆ ಮತ್ತು ಗೆಸ್ಟ್ ಹೌಸ್ ಕಟ್ಟಿಸಿ ಸಂತೋಷ ಪಡುವುದಕ್ಕೆ ಹೆಚ್ಚು ಹಣವನ್ನು ವಿನಿಯೋಗಿಸುತ್ತಿದ್ದೇವೆಯೋ ವಿನಹ ಚಾನಲ್‌ಗೆ ಗಮನ ಕೊಟ್ಟಿಲ್ಲ, ಆದ್ದರಿಂದ ಯಾರಿಗೆ ಇದರ ಪ್ರಯೋಜನ ದೊರೆಯಬೇಕೋ ಅವರಿಗೆ ದೊರೆಯುತ್ತಿಲ್ಲ ಸಾವಿರಾರು ಕೋಟಿ ರೂಪಾಯಿ ವ್ಯಯ ಮಾಡಿದರೂ ಪ್ರಯೋಜನವಾಗಿಲ್ಲ. ಆದ್ದರಿಂದ ಚಾಲನ್ ಮಾಡುವ ಬಗ್ಗೆ ಹೆಚ್ಚು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಸಣ್ಣ ನೀರಾವರಿಗಳ ಬಗ್ಗೆ ಹೇಳಬೇಕೆಂದರೆ ಅನೇಕ ಕೆರೆಕಟ್ಟೆಗಳು. ಸಣ್ಣ ಸಣ್ಣ ಅಣೆಕಟ್ಟುಗಳ ಅವಶ್ಯಕತೆ ಇದೆ. ಇದಕ್ಕೆ ನೀಡಿರುವ ಹಣ ಬಹಳ ಕಡಿಮೆ. ಇದಕ್ಕೆ ಆದಷ್ಟು ಹೆಚ್ಚು ಹಣ ಕೊಡಬೇಕು. ಜೊತೆಗೆ ತಾಲ್ಲೂಕು ಬೋರ್ಡಿಗೆ ಕೊಡತಕ್ಕ ಮೈನರ್ ಇರೀಗೇಷನ್ಸ್ ಮೈಂಟನೆನ್ಸ್ ಗ್ರ್ಯಾಂಟ್ ಕೂಡ ಬಹಳ ಕಡಿಮೆ. ಪಿ. ಡಬ್ಲ್ಯು.ಡಿ.ಗೆ ಕೆರೆ ಅಚ್ಚುಕಟ್ಟುಗಳಿಗೆ ಕೊಡತಕ್ಕ ಹಣಕ್ಕೂ ತಾಲ್ಲೂಕು ಬೋರ್ಡುಗಳಿಗೆ ಕೊಡುವ ಗ್ರ್ಯಾಂಟಿಗೂ ಬಹಳ ವ್ಯತ್ಯಾಸ ಇದೆ. ಆದ್ದರಿಂದ ತಾಲ್ಲೂಕು ಬೋರ್ಡುಗಳಿಗೆ ಹೆಚ್ಚು ಗ್ರ್ಯಾಂಟ್ ಕೊಟ್ಟು ಅವರ ಅಚ್ಚುಕಟ್ಟಿನಲ್ಲಿ ಇರತಕ್ಕ ಕೆರೆಕಟ್ಟೆಗಳ ಅಣೆಕಟ್ಟುಗಳ ರಿಪೇರಿ ಮಾಡಿಸುವುದಕ್ಕೆ ಅಥವಾ ಹೊಸದಾಗಿ ಮಾಡಿಸುವುದಕ್ಕೆ ಅನುಕೂಲವಾಗುವಂತೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಡಿ–ಸಿಲ್ಟಿಂಗ್ ಬಗ್ಗೆ ಹೇಳಬೇಕೆಂದರೆ ಬಯಲು ಸೀಮೆಯಲ್ಲಿ ಇದರ ಪ್ರಯೋಜನವಾಗಲಾರದು. ಆದರೆ ಮಲೆನಾಡಿನಲ್ಲಿ ಇದರ ಅವಶ್ಯಕತೆ ಇದೆ; ೧೮೦, ೨೦೦ ಇಂಚಿನಷ್ಟು ಮಳೆಯಾಗುವ ಕಡೆಗಳಲ್ಲಿ ಕೆರೆಗಳು ಎರಡು ವರ್ಷಕ್ಕೆ ತುಂಬಿಹೋಗುತ್ತವೆ. ಅಲ್ಲಿ ಡಿ–ಸಿಲ್ಟಿಂಗ್ ಕಾರ್ಯ ಮುಖ್ಯವಾಗಿ ನಡೆಯಬೇಕು. ಉದ್ಯೋಗ ಸ್ಥಿರೀಕರಣ ಯೋಜನೆಯಲ್ಲಿ ಈ ಕೆಲಸ ಮಾಡಿ ಎಂದು ತಾವು ಹೇಳುತ್ತೀರಿ. ಆದರೆ ತಾವು ಕೊಡತಕ್ಕ ೫ ರೂಪಾಯಿ ಕೂಲಿಗೆ ಯಾರು ಬರುವುದಿಲ್ಲ, ಆದ್ದರಿಂದ ೭–೮ ರೂಪಾಯಿ ಲೋಕಲ್ ಕೂಲಿಗಳನ್ನು ಡಿಕ್ಲೇರ್ ಮಾಡಬೇಕು.

ವಿದ್ಯುಚ್ಛಕ್ತಿ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಇದರಲ್ಲಿ ಬಹಳ ಉತ್ತಮ ಕಾರ್ಯ ಮಾಡಿದ್ದಾರೆ. ನಮ್ಮ ಅಖಿಲ ಭಾರತ ಮಟ್ಟದ ವಿಚಾರ ತೆಗೆದುಕೊಂಡರೆ ಸಾಧನೆ ಬಹಳ ಉತ್ತಮವಾಗಿದೆ. ೭೬ ಪರ್ಸೆಂಟ್ ಗ್ರಾಮಾಂತರ ಜನಸಂಖ್ಯೆಗೆ ಲಾಭವಾಗಿದೆ. ಇದು ಸಂತೋಷದ ವಿಚಾರ. ಆದರೆ ೭೨ ಸಾವಿರ ಹಳ್ಳಿಗಳಿಗೆ ಟಾರ್ಗೆಟ್ ಇಟ್ಟುಕೊಂಡಿದ್ದರೆ ಕೇವಲ ೧೬ ಸಾವಿರ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಪೂರೈಸಿ ಕೆಲಸ ಮಾಡಿದ್ದೀರಿ: ಇನ್ನೂ ೧೦ ಸಾವಿರ ಹಳ್ಳಿಗಳು ದೀಪ ಕಾಣದೇ ಇರುವ ಪರಿಸ್ಥಿತಿಯಲ್ಲಿರುವುದು ಶೋಚನೀಯವಾದ ವಿಚಾರ. ೧೯೮೦ ರಲ್ಲಿ ೭೫೦ ಹಳ್ಳಿಗಳಿಗೆ ಟಾರ್ಗೆಟ್ ಹಾಕಿಕೊಂಡು ಪೂರೈಸಿರುವುದು ೩೫೦ ಹಳ್ಳಿಗಳು ಮಾತ್ರ. ಈ ತರಹ ಹೋದರೆ ಎಷ್ಟರಮಟ್ಟಿಗೆ ಪ್ರಗತಿಯನ್ನು ತೋರಿಸಬಹುದು ಎಂದು ಯೋಚನೆ ಮಾಡಬೇಕು. ಮೆಟೀರಿಯಲ್ಸ್ ಅಭಾವದಿಂದ ಕೆಲಸ ಆಗಿಲ್ಲ ಎಂದು ಹೇಳಿದ್ದಾರೆ ಮೆಟೀರಿಯಲ್ಸ್ ಕೊಳ್ಳುವುದಕ್ಕೆ ಹಣ ಕೊಡುವುದಿಲ್ಲ. ಮೆಟೀರಿಯಲ್ಸ್ ಅಭಾವದಿಂದ ಕೆಲಸ ಆಗಿಲ್ಲ ಎಂದು ಹೇಳುತ್ತಾರೆ. ಇದರಿಂದ ಹರಿಜನ ಬಸದಿಗಳು ಮುಂತಾದ ಕಡೆಗಳಿಗೆ ವಿದ್ಯುಚ್ಛಕ್ತಿ ಅನುಕೂಲ ಕೊಡುವುದಕ್ಕೆ ಆಗಿಲ್ಲ. ಆದ್ದರಿಂದ ಸರ್ಕಾರದವರು ಅವರಿಗೆ ಕೊಡುವುದಕ್ಕೆ ಏನು ಹಣ ಇಟ್ಟಿದ್ದೀರಿ ಅದನ್ನು ಕೊಟ್ಟು ಅವರ ಬೇಡಿಕೆಗಳನ್ನು ಈಡೇರಿಸಲು ಹೆಚ್ಚು ಹಣವನ್ನು ಕೊಟ್ಟು ನೀವು ಮಾಡಿಕೊಂಡಿರುವ ಟಾರ್ಗೆಟ್ ಮುಟ್ಟುವುದಕ್ಕೆ ಅನುಕೂಲ ಮಾಡಿಕೊಡಿ. ಹರಿಜನ ಬಸದಿಗಳಿಗೆ ವಿದ್ಯುತ್ತೀಕರಣ ಮಾಡುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿದ್ದೇನೆ ಯೋಜನೆಯನ್ನೇನೊ ಮಾಡಿದ್ದೀರಿ ಆದರೆ ಸರಿಯಾದ ಅನುಕೂಲಗಳಿಲ್ಲದೆ ಅದನ್ನು ಕಾರ್ಯಗತ ಮಾಡಲಿಕ್ಕೆ ಆಗಿಲ್ಲ. ಸೆಂಟ್ರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮಿನಲ್ಲಾಗಲೀ, ಸ್ಟೇಟ್ ಎಲೆಕ್ಟ್ರಿಫಿಕೇಷನ್ ಸ್ಕೀಮಿನಲ್ಲಾಗಲೀ ಅನುಕೂಲ ಮಾಡಿಕೊಡಬೇಕು. ಆ ಕಡೆ ಈ ಕಡೆ ಎರಡು ಗ್ರಾಮಗಳಿಗೆ ವಿದ್ಯುಚ್ಛಕ್ತಿ

ಇದೆ, ಆದರೆ ಮಧ್ಯೆ ಇರುವ ಹರಿಜನರ ಬಸದಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಇಲ್ಲ. ಇದಕ್ಕೆ ಭಾಗ್ಯ ಜ್ಯೋತಿ ಇಲ್ಲ, ಬೀದಿ ದೀಪ ಇಲ್ಲ, ಯಾವುದೂ ಇಲ್ಲ. ಈ ರೀತಿ ಮಾಡಿರುವುದು ಸಮಾಜದಲ್ಲಿ ತಾರತಮ್ಯ ತೋರಿಸದಂತಾಗಿದೆ. ಯಾರಿಗೂ ಕೊಡದಿದ್ದರೆ ಅದು ಬೇರೆ ವಿಚಾರ. ಆದರೆ ಎರಡು ಹಳ್ಳಿಗಳಲ್ಲಿ ಉತ್ತಮವಾಗಿ ಇದ್ದು ಮಧ್ಯಮದಲ್ಲಿರುವವರಿಗೆ ಇಲ್ಲ ಎಂದರೆ ಅದು ಶೋಚನೀಯವಾದ ವಿಚಾರ. ಆದ್ದರಿಂದ ಈ ರೀತಿ ತಾರತಮ್ಯ ಆಗದಂತೆ ನೋಡಿಕೊಳ್ಳಬೇಕು. ಭಾಗ್ಯಜ್ಯೋತಿ ಒಂದು ಉತ್ತಮವಾದ ಯೋಜನೆ. ಇದರಲ್ಲಿ ಕೆಲವು ಕಾನೂನಿನ ಅಡಚಣೆಗಳಿದ್ದು ಅದನ್ನು ಪರಿಹಾರ ಮಾಡಬೇಕು. ಮೂರು ವೈರ್ ಇದ್ದರೆ ಕೊಡುತ್ತೇವೆ. ಎರಡು ವೈರ್ ಇದ್ದರೆ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಮೂರನೆ ವೈರನ್ನು ಡಿಪಾರ್ಟ್‌ಮೆಂಟಿನಿಂದ ತಂದು ಹಾಕಿ ತನ್ಮೂಲಕ ಭಾಗ್ಯ ಜ್ಯೋತಿ ಯೋಜನೆಯ ಪ್ರಯೋಜನವನ್ನು ಪ್ರತಿಯೊಬ್ಬರಿಗೂ ಕೊಡಿ. ದೊಡ್ಡವರ ಕಾರ್ಯಕ್ರಮ ವನ್ನು ಕಡಿಮೆ ಮಾಡಿ ಬಡವರ ಕಾರ್ಯಕ್ರಮಕ್ಕೆ ಹೆಚ್ಚು ಗಮನ ಕೊಟ್ಟು ಟಾರ್ಗೆಟ್ ಪ್ರಕಾರ ವೇಗ ವಾಗಿ ಕೆಲಸ ಮಾಡಬೇಕೆಂದು ಹೇಳಬಯಸುತ್ತೇನೆ. ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಹೇಳುವು ದಾದರೆ ಬರತಕ್ಕ ಅದಾಯ ಜಾಸ್ತಿ. ಹೆಚ್ಚಿನ ಲಾಭ ಬರುತ್ತಿದೆ. ಆದರೆ ನೌಕರರಿಗೆ ಕೊಡತಕ್ಕ ಸೌಕರ್ಯ ಕಡಿಮೆ. ನೌಕರರಿಗೆ ಕೊಡುವ ಸಂಬಳ, ಭತ್ಯಗಳನ್ನು ಹೆಚ್ಚಿಸಬೇಕು. ಅಪಘಾತದಲ್ಲಿ ಈಡಾಗಿರುವವರಿಗೆ ಎರಡು ವರ್ಷ ಮೂರು ವರ್ಷವಾದರೂ ಸಹಾಯಧನ ಕೊಟ್ಟಿಲ್ಲ ಇದು ಬಹಳ ವಿಷಾದನೀಯವಾದ ಸಂಗತಿ. ಸಾರ್ವಜನೀಕರೇ ಆಗಿರಲೀ, ಪಶುಗಳೇ ಆಗಿರಲೀ, ಇಲಾಖೆಯವರೇ ಆಗಿರಲೀ ಯಾರು ಅಪಘಾತಕ್ಕೆ ಈಡಾಗುತ್ತಾರೆ ಅವರಿಗೆ ಶೀಘ್ರಗತಿಯಲ್ಲಿ ಪರಿಹಾರ ಕೊಡಬೇಕು. ನಾನು ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಕಾಲಾವಕಾಶ ಕಡಿಮೆ ಇರುವು ದರಿಂದ ಕೆಲವು ಮುಖ್ಯವಾದ ವಿಷಯಗಳನ್ನು ಮಾತ್ರ ಹೇಳುತ್ತೇನೆ. ಲೋಕೋಪಯೋಗಿ ಇಲಾಖೆ ಯಲ್ಲಿ ರೆಗ್ಯುಲೇಟ್ ಮಾರ್ಕೆಟ್‌ನಿಂದ ೧ ಪರ್ಸೆಂಟ್, ಮೋಟಾರ್ ವೆಹಿಕಲ್ ಇಲಾಖೆಯಿಂದ ೧೦ ಪರ್ಸೆಂಟ್ ಸರ್‌ಚಾರ್ಜ್ ಹಣ ವಸೂಲಿ ಮಾಡಿ ಆದನ್ನು ಹಳ್ಳಿಗಾಡಿನ ಕೆಲಸ ಕಾರ್ಯಗಳಿಗೆ ಉಪಯೋಗಿಸ ಬೇಕೆಂದಿದೆ. ಬರತಕ್ಕ ಹಣ ಮಾತ್ರ ಹೆಚ್ಚು, ಖರ್ಚು ಮಾಡುವುದು ಮಾತ್ರ ಕಡಿಮೆ, ಈ ರೀತಿ ವಸೂಲು ಮಾಡಿದ ಹಣವನ್ನು ಹಳ್ಳಿಗಾಡಿನ ಕೆಲಸಕಾರ್ಯಕ್ಕೆ ಎಲ್ಲಾ ಮೂಲೆ ಮೂಲೆಗಳಿಗೂ ತಲಪು ವಂತೆ ಮಾಡಬೇಕು. ಈ ಹಣವನ್ನು ಬೇರೆಯದಕ್ಕೆ ಉಪಯೋಗಿಸಬಾರದು. ಬ್ಲಾಕ್ ಕಾಟನ್ ಸಾಯಿಲ್ ಏರಿಯಾಕ್ಕೆ ನಾನು ಮೊದಲೇ ಹೇಳಿದ ಹಾಗೆ ೨೫ ಪರ್ಸೆಂಟಿನಿಂದ ೪೦ ಪರ್ಸೆಂಟಿಗೆ ಏನು ಹೆಚ್ಚಿಗೆ ಮಾಡಿದ್ದೀರಿ ಅದೇ ರೀತಿ ಮಲೆನಾಡು ಭಾಗಗಳಿಗೂ ೪೦ ಪರ್ಸೆಂಟಿಗೆ ಹಣ ಹೆಚ್ಚು ಮಾಡಬೇಕು. ಈ ರೀತಿ ಜಾಸ್ತಿ ಮಾಡಿ ರಸ್ತೆ ಕಾಮಗಾರಿಗಳು ಚೆನ್ನಾಗಿ ಆಗುವುದಕ್ಕೆ ವ್ಯವಸ್ಥೆ ಮಾಡಬೇಕು. ಆಸ್ಫಾ ಲ್ಟಿಂಗ್, ಟಾರ್ ಮುಂತಾದವುಗಳನ್ನು ಮಾಡಿಸಿ ಶಾಶ್ವತವಾದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡ ಬೇಕೆಂದು ಹೇಳಿ ಇಷ್ಟು ಮಾತನಾಡಲು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

2-30 p. m.

MR. SPEAKER.—We have to close the demands to-day. The Ministers will have to commence their reply at 4 O'Clock.

* SRI C. M. ARUMUGHAM (K.G.F.).—Any time you ask me I will close. I will not continue. I know there are a number of Members who desire to participate on this demand. Very major demands are there. There are four Ministers in charge of this demand. They also require a lot time to reply. I agree. I will not take much time.

Sir, I will touch point by point on some of these demands. Firstly, I take up the Shipping Corporation. Sir, the Karnataka Shipping Corporation was established in the year 1975 under the Companies Act. The authorised capital of this Corporation is Rs. 5 crores and the working capital in 1978 was Rs. 10 crores. This Corporation has suffered continuous loss. During the year 1977-78 the loss is Rs 1 crore 3 lakhs, in 1978-79 the loss was round about Rs. 1 crore 16 lakhs. Sir, may I know who is the Minister in charge of the Shipping Corporation ?

SRI D.B. PAWAR.—I am in charge of Ports.

SRI C. M. ARUMUGHAM.—What about the Karnataka Shipping Corporation ? Kindly find out from your Secretary before you answer. Sir, in 1979-80 the loss was Rs. 33 lakhs.

MR. SPEAKER.—I think you will have to postpone your discussion for sometime more, because it comes under the Minister for Industries.

SRI C. M. ARUMUGHAM.—The Minister was in doubt.

MR. SPEAKER.—Some more study you can make.

SRI C. M. ARUMUGHAM.—He is saved that much of botheration. Coming to the Fisheries Department, Sir....

MR. SPEAKER.—Are you interested in the fish ?

SRI C. M. ARUMUGHAM.—Very much. Without fish I cannot pass a day. We always take fried fish and the boiled fish water. It is good for health.

MR. SPEAKER.—Do you want to fry the fish of the Department?

SRI C. M. ARUMUGHAM.—Sir, first of all, I want to impress upon the Government and the Member that the Director of Fisheries is not a qualified man to head the Fisheries Department. Kindly see that you appoint a qualified person, proper person in proper places. Do not put unqualified person because of political influence. If you

have courage, if you have conviction, you must appoint a qualified man for this Department. An Electrical Engineer cannot be a Director of Fisheries. The person who has passed M.Sc (Zoology) is a competent man. In the colleges they have also started M.Sc. (Fisheries) in the post-graduation. Another thing is that if you want this Director to be the Director of Fisheries you can appoint a Tahsildar who passed B.A. Because he is not qualified, he is notable to improve. Every country which has coastal line, has approached the World Bank for loan. There is a proposal from the Government of India asking the Karnataka State to suggest scheme for getting the World Bank loan. But, he is not able to prepare the scheme. If a scheme is prepared and it is established at Malpe, probably it would affect his relatives who are engaged in fisheries. What do you say for this ?

SRI D. B. PAWAR.—Our Director is qualified in the Engineering also.

MR. SPEAKER.— No. I do not think.

SRI C. M. ARUMUGHAM.—And then Sir, in the report there is mention about the place called Aiz Bazaar, where they want to have a Sea Bar-to be dredged. dredging to allow the travellers and to allow the Persesceine boats to go ? It has not been done by the Fisheries Department. But, here there is a request from the Director of Fisheries to pay Rs. 6,25,000. Suppose, it has been executed by the Ports Department, dredging has not been done. According to the South Canara District Co-operative Fish Marketing Federation, dredging has not been done. But, the Ports Officers says it has been executed. If it is executed, the money should have been spent by the Ports Department only, and not by the Fisheries Department. There is a question from the Secretary to the Government to the Director. They put this question "Whether the dredging at the cost of Rs. 6.25 lakhs has been included in the estimate sanctioned for the self-contained harbour at Mangalore ?" How did the Mangalore Port Officer execute the work without the sanction of the State Government ? The work costing Rs. 6,25,000 for dredging operation has been done, according to them, by the Ports Department. But, the Secretary

questions the Director. How can that be done without the sanction of the Government? I am asking the Minister and the Government, as to how they permitted him to recommend to the Government to pay it from the Fisheries Deparment. The Fisheries Department is different from the Ports Department. Further, the Co-operative Society says dredging has not been done. But, the Director recommends for payment. He asks the Government on behalf of the Ports Department. The Ports Department might have executed the work in good faith that the estimates would be sanctioned. He recommended to the Government in good faith. Whether it be in good faith or bad faith, how can they do so without the sanction of the Government? Rs. 6,25,000 is not a small amount. I demand the Government to take action against the Director of Fisheries for having recommended the work which has not been executed and a work which has been done by the Ports Department, asking the Government to pay the amount from out of the Fisheries Deparment budget..

Sir, there are about 280 Purse Sein boats at present at an estimated cost of Rs. 14.55 crores, each costing about Rs. 5.20 lakhs. All these boats are not coming to the poor fishermen. They have been used by the very rich persons in this area of Mangalore, South Canara and North Canara and by nobody else. You must also permit other to do fishing. Catching fish has become the monopoly of certain individuals. It cannot be like that.

Sir, there is a Corporation called, Karnataka Fisheries Development Corporation, which was established in the year 1970. The Government's share capital is about Rs. 300 lakhs. assets transferred to the Corporation by the Government is about Rs. 110 lakhs; financial assistance obtained by the Corporation is about Rs. 114 lakhs; export earnings by the Corporation from 1971 to 1977 is about Rs. 270 lakhs and miscellaneous assistance obtained is about Rs. 100 lakhs. Totally, there is about Rs. 897.09 lakhs. The present Director was the first Managing Director, and you know how the Corporation was ruined. Is it necessary to invest so much amount? Is it working on profit? Is it helpful to the people of that area? If not, why has it not been streamlined and why has it not been properly admini-

stered ? These are the points for the Government to enquire into. Sir, these is lot of criticism. At one stage the Government thought that he should be transferred. There should be a proper qualified person. What qualification is required for an officer is to be decided by the Expert Committee. Now everything is in chaos. Any body can be posted to any place. A lecturer has been appointed for avery big post in the Engineering Department. Like that it is going on. This department should be streamlined so that it becomes more useful. They confine only to South Kanara and North Kanara. They never bother about the development of fisheries in the entire State of Karnataka, because of vested interests. A person who is interested in himself should not be placed. He has vested interests. In fact he recommended to the Defence Department to purchase fish from

one of his relatives. But the Defence Department rejected it. How can he recommend to the Defence Department ? But he did it. Kindly go through it. Sir, another point is, the poor people are not only deprived in this area, but even in the recruitment of staff they have been deprived of than chance. Supposing you are interested in developing fisheries and if he confines himself to North Kanara and South Kanara districts, you must shift him to that area only. Where is the necessity for him to remain in Bangalore ? Where is the need to locate his office in Bangalore and every time going to that area and coming back ? It is unnecessary expenditure. He has got his own staff and his own people coming from that area. So you must shift the office to that area. I appeal to the Hon'ble Minister to take action and rectify this Fisheries Department.

Sir, coming to the Public Works Department, the roads were established some years back and there is not much improvement in roads. According to the figures available, in Karnataka we have got about 56,071 surface roads and about 43,935 unsurfaced roads. For the last five or six years the department is not concentrating on these roads. In fact they were neglected and the funds provided for roads have been divered for irrigation purposes. Therefore what we are seeing today is, roads are not properly maintained,

What has been laid some years back, the same thing continues even now. Sir, there are five types of roads in our State,—(1) National Highways (2) State Highways (3) Major District Roads (4) Other district roads and (5) village roads.

So far as these National Highways are concerned, the total length is about 1,968 KMs. Compared to other States it is not much. These National Highways are statutory roads and must be useful for emergency purposes, because one has to move throughout the country as fast as possible. The National Highway No. 9 running from Bombay to Hyderabad via Bhalki/Bidar in Karnataka has not been maintained properly. But the Andhra Pradesh Government have very well maintained them. The portion of road belonging to Bombay, has been maintained very well. But the portion pertaining to Karnataka has not been maintained properly and they get hundred per cent grant for these National Highways. Why action has not been taken, when there are so many engineers in Public Works department? There are so many Assistant Executive Engineers and Chief Engineers. The position is such that a Chief Engineer can be purchased in the market. So, I only suggest that you must repuest the Government of India to include certain roads under National Highways connecting Karnataka to Tamilnadu, Andhra Pradesh, and Kerala. Certain State Highways must be upgraded as National Highways and similarly certain major district roads as State Highways, because by conversion you will get get mantaintenace grants, so that they can be maintained properly. The village roads are so rotten that nobody bothers about them. Not even a single officer goes to a village. If the officers go to villages in their car they will have the feeling and will take some interest to repair the roads. But when they go in Jeeps they will not feel it. Once during the election period they go and make some repairs and after that for the next five years they forget about it. Sir, I am only asking how long it will take them to develop these village roads and to improve the existing roads. Then as I said, how long will it take them to request Government of India to upgrade certain State Highways as National Highways? It is necessary because civilisation

depends on roads. When you go to a country or any place the roads should be good. To know whether a country is civilised or not, it all depends on roads. If you take a foreigner to our villages, he will say it is not a civilised country. Even after 30 years of independence, the roads are muddy and bad. What is the Public Works department doing with all these officers?

Therefore Sir, I urge upon the Government to take up the work of rural roads immediately in the State. We are all aware that in most of the villages there are no roads and villagers find it very difficult to go from one place to another. So, Government must give priority to this work. Then Sir, so far as roads standard is concerned I must say that the Department of Public Works has not maintained that standard. As a general rule, the national highways or State highways should be 100′ in width but it is not there and nowadays this width is being reduced at so many places, we do not know the reasons for that. The P.W.D. has formed 100′ road in M.G. Road Bangalore. It is a road for all people to move and meant for shopping. But what about the district major roads, talukas and at villages. They are not of that standard. Nobody has bothered about forming good roads there. I do not know what our engineers are doing. Why did they not think of this? What is their performance? What is their efficiency in building roads in our State? Due to their inefficiency in most of the national highways and at district headquarters accidents take place now and then. Not a day passes without an accident. Therefore, the Public Works Department should take steps to improve these roads and maintain them according to standards prescribed. Now I want to know whether our engineers are doing their job efficiently. I don't think so. What is the use if a Chief Engineer of our State tells that he has put in 35 years of service in the Department? If he is really a good engineer he should have really written a book on this after his retirement. Are they contributing in that way? No, they are not doing. So, I suggest to the Government to call the Chief Engineers in charge of communications and buildings to have a discussion on this atleast once a year. They must also discuss about the

village roads and try to build as many as roads in the villages of our State as possible. If I remember, last time a master plan was prepared and the Government was awaiting the World Bank assistance to take up roads in our State. I do not know what has happened to that. So, my submission to the Government is, let not our schemes and plans lie at one place without any scrutiny. Let us have a definite plan that can be implemented within 25 or 30 years time. Another point is, most of the works are given to contractors. Due to this, nearly 30 per cent of the money goes to the packets of contractors. The works which have been done by the contractors are not at all good and they are not according to the standards prescribed in the agreement. These contractors swallow most of the money set apart for a particularwork. If you go to a village and if there is a big building with a car and a garden you can easily come to the conclusion that it is a residence of a P.W.D. contractor. If you see a man moving on the road in a Benz car you can immediately identify him as P.W.D. contractor. These are all because the money instead of going for the development of roads and other works, goes to contractors. Our Hon'ble Chief Minister was good enough to say that the Government has sanctioned so much of amount for the development of roads. If 80 per cent of the amount sanctioned goes to the development of roads we can see better roads. But it is not so. I understand that in Paris roads are very fine. I have not seen Paris. Some of my colleagues have seen Paris and they are fortunate people. They get chance to visit Paris London, New York and Tokyo. These people after visiting those countries should suggest to the Government to build similar type of roads in Karnataka. Why don't they do so? Likewise I also wanted to know the contribution made by our engineers in the Department. Sir, a primary school teacher who has put in 35 years of service must be able to teach high school students. He should improve in that way. He must contribute something to the profession. Likewise the Superintendent Engineers, the Chief Engineers of the Public Works Department should contribute something for the development of village roads, district major roads and national highways. They should do something in the matter, and they should contribute their talent in their field.

Then Sir, I have been making repeated representations eversince 1957, i.e., my entry into politics, and also in my speech every year about the representation of Scheduled Castes and Scheduled Tribe candidates in various categories of posts in the Department. For the last 20 years the Department has not made any direct recruitment for the posts of Chief Engineers and Execuive Engineers. That means, somebody is against the direct recruitment to these posts. On account of this the Scheduled caste and Scheduled Tribe candidates did not get chance to get into the Department and their quota has not been filled up. Here I would like to ask when other are getting their due share in each category and when they are getting promotions why not the Scheduled Castes and Scheduled Tribe candidates get their due share? Now there is a general say that there are no qualified candidates amongst the Scheduled Castes. That is not correct. I have got figures. There are graduates in Civil Engineering, Mechanical Engineering and Electrical Engineering. Inspite of this I do not know who is that man who is blocking their entry into the Department. You must find out the person responsible for this state of affair.

In Kerala, there were direct recruitments for SCs/STs to the posts of executive engineers. You must overlook all rules. Rules are made to help people. If the rule is not good, you amend it. Rule is not drafted by God, it is drafted by human beings. What is required is, they have to put good english here and there, not in a confusing manner. Draft it, and put it before the Minister, he will approve it. Where is the time for a Minister to read it. So, there is inadequate representation in all categories in the P.W. Department. One funny thing is happening in the P.W.D. I told you sometime back that there shall not be any consideration for confidential reports pertaining to SCs/STs. I term the Confidential Report as a Communal or Caste Report. If I am the top man and if the next subordinate belongs to my community, I write him 'excellent'. We are all human beings. 99% of the Confidential Reports are communal reports. When a man goes to the top, he becomes more communal. That is how it is happening. Recently, some Superintendenting Engineers were pro-

moted as Chief Engineer. The basis is Confidential Reports Sir, can a SC man who has been oppressed in the society and who is working in the Public Works Department, expect his superiors to write in his Confidential Report 'excellent'? Even if they write, that paper will be torn; that is what is happening. If a person is a fith man, he becomes first for promotion. This is the formula they have adopted in the Public Works Department to deprive the seniority of SCs/STs. This is the way the S.Es were promoted. What is the yardstick to asses a man's performance, intelligence, and efficiency ? You give him the work of a dam and ask him to complete it within a stipulated time. If he completes it within that time, then, you give him a certificate that he has finished such and such a dam wihin a the stipulated period. And then, you assess his ability, capacity and intelligence. Do not assess his intelligence according to your whims and fancies. If a tap Officer has quarrled with his wife, he will come and write a bad report against SCs/STs subordinate officers. Where do you get it examined ; how do you get it ; and what do you mean by 'excellent' ? Why not an 'excellent' Confidential Report be purchased ? It can be purchased. He writes like that and on that basis, they have promoted the Superintenting Engineers. Six Under Secretaries were promoted recently. At that time, they have maintained seniority. Unless you provide him some opportunity and prove him that he is worth and upto the mark, he cannot be promoted. Somebody sits on the top and writes confidential reports. I do not know whether any Minister has seen it or even talked of it. Whether there is any Government of India direction with regard to it ? In case of SCs/STs officer they write only 'satisfactory'. For others ,the write, excellent, very good etc etc. Weaker sections and SCs/STs must be given privilege and perference according to articles 16 (4) and 46 of the Constitution. They say, SCs/STs people should be economically uplifted. When you cannot promote an Assistant Engineer or when you deprive him the opportunity of promotion, how can he improve his economic condition ? Unless you promote an assistant Executive Engineer or an Executive Engineer to the next higher grade, he will not draw Rs. 1,000. Here, writing of Confidential Reports by some persons works against the insterest of SCs/STs officers and officials. Those who are sitting

at the helm of affairs are violating Constitutional provisions i.e., articles 16 (4) and 46. Government job should not become the monopoly of any section of the society. It is open to all. Jobs in the Public Works Department are not opened to some people only.

Sub-standard persons are occupying important positions. There may be some exceptions. Let anybody come before me from any field. I will question him and if he answers properly, I will resign from the Assembly and go away. If the answer given by the officer is wrong, he must resign and go home leaving his pension, service gratuty and everything. Let somebody judge us. You are chip of the same block The former Supreme Court Judge has said "Merit will not suffer". If you take 5 to 10% from the Scheduled Caste/Scheduled Tribe, efficiency will not come down. Because they are chip of the same block. In the society, about 90% are merritorious people. These officers come from this society. By taking five or six persons, your merit will not suffer. That is what the Supreme Court Judge has said. Why do you consider this merit ? That is my point. If you take merit into account and condemn this Scheduled Caste/Scheduled Tribe people, then you are going against the judgement of the Supreme Court ; You are going against the Constitutional provision. Therefore, do not take merit into consideration. They are trying to introduce this merit system without anybody's notice. If they introduce it, they will be spoiling all others. I would only suggest to the Government that it is high time that the procedure is changed in all the departments generally and in the P.W.D., particularly. The rules should be changed with regard to recruitments and promotions. Sometimes what has happened is until the aggrieved person goes to the Supreme Court, he has not been promoted. A Deputy Engineer appointed by the Assistant Engineer or the Executive Engineer in Bombay Karnataka and Hyderabad Karnataka became the Chief Engineer here. He was not selected by the Public Service Commission. The officer must be selected by the Public Service Commision. Then only must become the Gazetted officer. A person who was appointed in Bombay, when it was merged with Karnataka, became the Chief Engineer. Over and above in the appointment of Assistant Engineers by the Public

Service Commission they some tricks. The P.W.D., always plays lot of tricks in order to accommodate their favourites. They have done it in post and this time also they want to do it. I want you to see that their plan does not get through. It has been done in the case of Superintending Engineer and Chief Engineers. In other categories also, they want to apply the same trick. If they want to apply the same trick,they will be depriving the have-nots who are working there for the last many years, on the basis of their outstanding reports. You must call for their reports. I do not know whether the Minister is competent to call for their reports. You can call for the reports and you are competent. Once it so happened that the former Minister Sri Rachaiah called for the Confidential Report of the Chief Secretary. The Chief Secretary said, "I do whatever you want. But don't call for my Confidential Report". This is what he was written. Therefore, you must ask the explanation from the persons who have written Confidential/Outstanding Reports, of anybody as to how he has written, what was the basis and the information and how it is measured. Toknow the depth of a well, you must measure it. In order to write the outstanding report of a person, you must have certain knowledge, the background and the 'yardstick. In this way, they are trying to ruin us and dominate the society occuping important positions in the P.W.D., I would only appeal to the Government not to yield to the pressure of the bureaucrats. The bureaucrats have not changed their style of functioning. Until they change their style, the Ministers and the representatives of the Government must be very careful and help us.

About the Karnataka Electricity Board, again I have got the same old complaint that there is inadequate representation of the Scheduled Caste/Scheduled Tribe people. In fact, they have not even framed the Cadre and Recruitment Rules for several years. The present Minister of State for Electricity, Sri Ashwatha Reddy, is a person interested in the welfare of the poor people. Let him help us is directing the Karnataka Electricity Board to recurit and make special recruitments of Scheduled Caste/Scheduled Tribe people, to fill up the back-logs. Sir, about the administration, I would like to

give an illustration. In Newyork City, it appears that on one day all the lights went off due to power failure. One company issued notices to the Electricity Company concerned, and the case was taken to the Court and the Court gave its judgement in favour of the complainant. That is the standard maintained by those countries. Our standard is that even in the Assembly the Electricity goes off. Often, the Legislators' Home becomes dark on account of power failure. Then what about the other people, the poor people, business-men, schools and colleges One day I phoned to the Chairman of your Board about the power failure. He said that he was helpless. If he is helpless, what is the good of becoming a Chairman of the Karnataka Electricity Board ? Let him leave that post to me. I will go and learn to manage it. You must also learn and try to improve the system. Every, the Electricity goes off.

Regarding the Power Corporation, I want to ask why do you have it. What is its necessity ? You must know that in no other state such a Power Corporation is there. The Power Corporation will supply power and you are distributing it. My submission is that you take up that work also. Please apply your mind. There is no need for a separate Power Corporation. The Karnataka Electricity Board must have all powers. You must be in a position to command. The Power Corporation is different and the K.E.B. is different. You must be in a position to control the entire system. I have gone through some books. In no other states, this Power Corporation is there. Why have you created this Power Corporation ? Is it in order to provide some employment or promotion or to create jobs or to purchase more cars or to execute the work quickly ? I do not know. Anyway, the Karnataka Electricity Board can take up all these things and streamline the procedure, administration and improve the efficiency so that no power failure takes place.

† ಶ್ರೀ ಆನಂದ ಕುಂದ ಹೆಗ್ಗಡೆ (ಬ್ರಹ್ಮಾವರ).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಸೂಚನೆ ಹಾಗೂ ಸಲಹೆಗಳನ್ನು ಕೊಡಬಯಸುತ್ತೇನೆ. ಪ್ರಥಮವಾಗಿ ನಾನು ಮೀನುಗಾರಿಕೆಯ ವಿಷಯವಾಗಿ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಆಳವಾದ ಸಮುದ್ರಕ್ಕೆ ಹೋಗಿ ಮೀನುಗಳನ್ನು ಹಿಡಿಯುವ ವಿಷಯ ಕಡೆಗಣಿಸಲ್ಪಟ್ಟಿತ್ತು, ಅಥವಾ ಅಪೇಕ್ಷಿತ ಹಾಗೂ ನಿರೀಕ್ಷಿತ ಮಹತ್ವವನ್ನು ಕೊಟ್ಟಿಲ್ಲ ಎಂಬುದು ಬೇಸರದ ವಿಷಯ ಎಂದು ನಾನು ಹೇಳುತ್ತೇನೆ. ೧೫ ವರ್ಷಗಳ ಕೆಳಗೆ ಯಾಂತ್ರೀಕೃತ ದೋಣಿಗಳು ಯಂತ್ರಗಳ ಮೂಲಕ ಮೀನನ್ನು

ಹಿಡಿಯುತಕ್ಕಂತಹ ಪದ್ಧತಿ ನಮ್ಮಲ್ಲಿ ಇರಲಿಲ್ಲ. ಈಗ ಆ ಬಗ್ಗೆ ಸಾಕಷ್ಟು ಅಭಿವೃದ್ಧಿ ಆಗಿದ್ದರೂ ಕೂಡಾ ಉಳಿದ ರಾಜ್ಯಗಳ ಜೊತೆ ಸಮಾನತೆ ಅಥವಾ ಅಂತರರಾಷ್ಟ್ರೀಯವಾಗಿ ಕೂಡಾ ರಾಷ್ಟ್ರದಲ್ಲಿ ಈ ಬಗ್ಗೆ ಸಾಧಿಸಿರುವ ಅಭಿವೃದ್ಧಿ ಸಾಕಷ್ಟು ಇಲ್ಲ ಎನ್ನುವುದು ಇರುವ ಕೊರತೆಯಾಗಿದೆ. ಈ ಒಂದು ಇಲಾಖೆಯಲ್ಲಿ ನಿರ್ದೇಶಕರು ಹಾಗೂ ಬೇರೆ ಬೇರೆ ಅಧಿಕಾರಿಗಳು ಇದ್ದಾರೆ. ಈ ಒಂದು ಖಾತೆಯ ನಿರ್ದೇಶಕರು ನನಗೆ ಗೊತ್ತಿದ್ದಾರೆ. ಇವರು ಮೀನುಗಾರಿಕಾ ವರ್ಗದವರೇ ಆಗಿದ್ದು ಈ ಒಂದು ಮೀನುಗಾರಿಕೆಯಲ್ಲಿ ಅವರು ಸಾಕಷ್ಟು ಅನುಭವವನ್ನು ಪಡೆದಿದ್ದಾರೆ. ಯಾವ ಹಂತದ ಕೊರತೆಯೋ ಗೊತ್ತಿಲ್ಲ ಇದರಲ್ಲಿ ಪೂರ್ಣ ಪ್ರಮಾಣದ ಅಭಿವೃದ್ಧಿಯನ್ನು ಸಾಧಿಸಿಲ್ಲ. ಪೂರಕವಾಗಿ ಹೇಳುವುದಾದರೆ, ನಮ್ಮಲ್ಲಿ ಮೀನುಗಳನ್ನು ಹಿಡಿಯಲು ದೊಡ್ಡ ದೊಡ್ಡ ದೋಣಿಗಳು ಇವೆ. ಈ ಒಂದು ದೋಣಿಗಳು ಕೆಲವು ವರ್ಷಗಳಿಂದ ನಷ್ಟದಲ್ಲಿ ನಡೆಯುತ್ತಿದೆ ಎಂದು ತಿಳಿದು ಬಂದಿದೆ, ಇವುಗಳನ್ನು ಲಾಭದಾಯಕವಾಗಿ ಮಾಡಬೇಕೆಂಬುದರ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ. ಇನ್ನು ಪರ್‌ಶಿಯನ್ ದೋಣಿಗಳು ಏನಿವೆ ಅವು ಬಹಳ ಲಾಭದಲ್ಲಿ ನಡೆಯುತ್ತಿವೆ. ವೇದಾವತಿ, ಶರಾವತಿ ಮತ್ತು ಹೇಮಾವತಿ, ಈ ಮೂರೂ ಸಹಾ ನಷ್ಟದಲ್ಲಿವೆ.

೩–೩೦ ಪಿ. ಎಂ.

ಇದರ ಬಗ್ಗೆ ಅದಷ್ಟು ಬೇಗ ಕ್ರಮ ಕೈಗೊಳ್ಳುವ ಅವಶ್ಯಕತೆ ಇದೆ. ಜೊತೆಯಲ್ಲಿಯೇ ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಬೆಳವಣಿಗೆಯಲ್ಲಿ ಸಮುದ್ರದ ಮೀನುಗಾರಿಕೆ ಮಹತ್ವ ಇದೆ. ಏಕೆಂದರೆ ನೆಲದಲ್ಲಿ ಸಾಧಿಸಬಹುದಾದ ಉತ್ಪಾಧನೆಗಿಂತ ಜಲದಲ್ಲಿ ಸಾಧಿಸುವ ನಿಸರ್ಗದ ಕೊಡುಗೆ ಇದೆ. ಬೇರೆ ಬೇರೆ ವಿದೇಶಗಳಿಂದ ಬಂದು ಅರಬೀಸಮುದ್ರದಲ್ಲಿ ಮೀನು ಹಿಡಿಯುತ್ತಾರೆ. ಇನ್ನೂರು ಮುನ್ನೂರು ಮೈಲಿ ದೂರದಲ್ಲಿ ಮತ್ತು ಆಳದಲ್ಲಿ ಹೇಗೆ ಮೀನುಗಳನ್ನು ಹಿಡಿಬೇಕೆಂಬುದನ್ನು ತಿಳಿದುಕೊಳ್ಳಲು ನಮ್ಮಲ್ಲಿ ಸಾಕಷ್ಟು ಸಾಧನೆಗಳು ಇಲ್ಲ. ದೊಡ್ಡ ದೋಣಿಗಳು ಒಂದೇ ದಿವಸದಲ್ಲಿ ಹೋಗಿ ವಾಪಸ್ಸು ಬರಬೇಕು. ವಾರ ಗಟ್ಟಲೇ ಸಮುದ್ರದಲ್ಲಿ ನಿಂತು, ಮೀನುಗಳನ್ನು ಹಿಡಿದು ಅಲ್ಲಿಯೇ ಸಂಗ್ರಹಿಸಿ, ಶೀತಲೀಕರಣ ವ್ಯವಸ್ಥೆ ಮಾಡಿಕೊಂಡು ದೊಡ್ಡ ಪ್ರಮಾಣದಲ್ಲಿ ಮೀನುಗಳನ್ನು ಪಡೆಯುವುದರ ಮೂಲಕ ಅಂತರಾಷ್ಟ್ರೀಯ ಬೇಡಿಕೆಯನ್ನು ಹೆಚ್ಚಿಸಿಕೊಂಡು ವಿದೇಶಗಳಿಗೆ ನಿರ್ಯಾತ ಮಾಡುವ ಮೂಲಕ ಅಂತಹ ಉತ್ಪಾದನೆಯನ್ನು ಸಾಧಿಸಲಿಕ್ಕೆ ಸಾಧ್ಯವಿಲ್ಲ. ಆ ರೀತಿ ಗುರುತಿಸದೇ ಇರುವುದರಿಂದ ನಾವು ಬರೀ ಮಾತನಾಡುವುದರಲ್ಲೇ ೨, ೩ ವರ್ಷಗಳು ಹಾಳಾಗಿದೆ. ಯಾಂತ್ರಿಕದೋಣಿಗಳು ೨ ಸಾವಿರ ಇರಬಹುದು ಪರ್ಸೀನ್‌ದೋಣಿಗಳು ೨೮೦ ಇವೆ. ಇವತ್ತು ಡೀಸಲ್ ಬೆಲೆ ಬೇರೆ ಜಾಸ್ತಿಯಾಗಿದೆ. ಮೀನು ಹಿಡಿಯುವವರು ಮೀನು ಇದೆಯೋ ಇಲ್ಲವೋ ಎಂದು ನೋಡುವುದಕ್ಕೆ ಹೋಗಬೇಕಾಗುತ್ತದೆ. ಆ ರೀತಿ ನೋಡಲು ಹೋದಾಗ ಡೀಸಲ್ ಖರ್ಚಾಗುತ್ತದೆ. ಡೀಸಲ್‌ಬೆಲೆ ವರ್ಷ ವರ್ಷಕ್ಕೆ ತಿಂಗಳು ತಿಂಗಳಿಗೆ ಹೆಚ್ಚುತ್ತಾ ಹೋಗುತ್ತದೆ. ಮೀನುಗಳನ್ನು ನೋಡಿಕೊಂಡು ಬರಲು ಹೋದರೆ ಕಡೆಯಪಕ್ಷ ೫೦೦ ರೂಪಾಯಿಗಳ ಡೀಸಲ್ ಖರ್ಚಾ ಗುತ್ತದೆ. ಮೀನು ಸಿಗಲಿ ಸಿಗದಿರಲಿ ಇಂತಹ ಒಂದು ಧರ್ಮಸಂಕಟ, ಉದ್ಯಮ ಬೆಳೆಯಲಿಕ್ಕೆ ನಿಷ್ಕ್ರೀಯತೆಗೊಳಿಸುವಂತಹ ಅನ್ಯ ಅಂತರಿಕ ಕಾರಣಗಳಿವೆ. ಇದಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡ ಬೇಕಾಗಿದೆ, ಅದರ ಕಡೆಗೆ ಆಸಕ್ತಿಯನ್ನು ವಹಿಸಬೇಕಾಗಿದೆ. ಎಲ್ಲಿ ಮೀನುಗಳು ದೂರದಲ್ಲಿವೆ ಎಂಬು ದನ್ನು ಗುರುತಿಸತಕ್ಕಂತಹ ಉಪಕರಣಗಳಿವೆ. ಈ ಅಂತರರಾಷ್ಟ್ರೀಯ ಉಪಕರಣಗಳನ್ನು ತರಿಸಿಕೊಟ್ಟರೆ ಪರ್ಸೀನ್‌ದೋಣಿಗಳು ಮತ್ತು ಯಾಂತ್ರಿಕದೋಣಿಗಳಿಗೆ ಆಗಬಹುದಾದ ಅನಾವಶ್ಯಕವಾದ ನಷ್ಟ ಮತ್ತು ಆ ಒಂದು ಉದ್ಯಮದಲ್ಲಿರುವವರ ಕಷ್ಟವನ್ನು ತಪ್ಪಿಸಲಿಕ್ಕೆ ಆಗುತ್ತದೆ. ಸರ್ಕಾರ ಇದನ್ನು ಗುರುತಿಸ ಬೇಕು. ಮತ್ಸ್ಯೋದ್ಯಮ ಅಭಿವೃದ್ಧಿ ನಿಗಮ ಏನು ಇದೆ ಅದರಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅಂತರಿಕ ವಾಗಿಯೂ ಬಾಹ್ಯವಾಗಿಯೂ ಬಹುಶ: ಹಣಕಾಸಿನ ವ್ಯವಸ್ಥೆಯಲ್ಲಿಯೂ ಮೀನುಗಳನ್ನು ಮಾರಾಟ ಮಾಡುವುದರ ಮೂಲಕವೂ ನಷ್ಟವನ್ನು ಭರಿಸುತ್ತಿದೆ, ಗೊತ್ತಿದ್ದೂ ನಡೆದಿದೆಯೋ ಗೊತ್ತಿಲ್ಲದೇ ನಡೆದಿದೆಯೋ ಗೊತ್ತಿಲ್ಲ. ಮೀನುಗಳು ದಡ ತಲುಪುವುದರಲ್ಲೇ ಅವ್ಯಾಹತ ನಡೆಯುತ್ತಿರಬೇಕು ಆದರಿಂದ ನಷ್ಟ ಬರುತ್ತದೆಂದು ಕಾಣುತ್ತದೆ. ಇನ್ನು ಶೀತಲೀಕರಣ ವ್ಯವಸ್ಥೆ ಬಗ್ಗೆ, ಐಸ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ ಐಸ್‌ಫ್ಯಾಕ್ಟರಿ ಆಫೀಸುಗಳಲ್ಲಿ ಒಂದು ಇನ್‌ಸ್ಪೆಕ್ಸನ್‌ಪುಸ್ತಕವಿಲ್ಲ. ಅದರ ವರದಿಗಳು ಇಲ್ಲ. ಅದಕ್ಕೆ ಕಾಲಕಾಲಕ್ಕೆ ಲೆಕ್ಕಪರಿಶೋಧನೆ ಇಲ್ಲವೆನ್ನುವುದು ಕಾಣುತ್ತದೆ. ಐಸ್ ಫ್ಯಾಕ್ಟರಿಯಲ್ಲಿ ಶೀತ ಲೀಕರಣ ವ್ಯವಸ್ಥೆಯಲ್ಲಿ ಉತ್ಪಾದನೆ ಏನು ಇದೆ ಈ ಐಸ್ ಏನು ಇದೆ ಅದು ಅಲ್ಲಿಯೇ ಅನಧಿಕೃತ ಮಾರಾಟ ವಾಗುತ್ತಿದೆ. ಇದರಿಂದಾಗಿ ವರ್ಷೇ ವರ್ಷೇ ನಷ್ಟವುಂಟಾಗುತ್ತಿದೆ. ನನಗೆ ಗೊತ್ತಿರುವಂತೆ ಅದರಲ್ಲಿ

ಯಾರು ನೌಕರರು ಇದ್ದಾರೆ ಅವರು ಅದನ್ನು ಟೆಂಡರ್‌ನಲ್ಲಿ ವರ್ಷಕ್ಕೆ ಗೊತ್ತುಪಡಿಸಿದ ದರದಲ್ಲಿ ತೆಗೆದು ಕೊಳ್ಳುತ್ತಾರೆ. ಈಗಲೂ ತೆಗೆದುಕೊಳ್ಳುವುದಕ್ಕೆ ಬೇರೆಯವರು ತಯಾರಾಗಿದ್ದಾರೆ. ಅಂತರಿಕವಾಗಿ ಮಾತ್ರ ಹೇಳುತ್ತಾರೆ, ಬಹಿರಂಗವಾಗಿ ಹೇಳುವುದಿಲ್ಲ, ಆದ್ದರಿಂದ ಈ ವ್ಯವಸ್ಥೆಯಲ್ಲೂ ಕೂಡ-ಏನೋ ದೋಷವಿದೆ. ಇನ್ನು ಮೀನುಗಾರಿಕೆ ಉಪಕರಣಗಳು ಸಾಕಷ್ಟು ತಯಾರಾಗುತ್ತಿದೆ. ಈ ಉಪಕರಣಗಳಿಗೆ ಇಲ್ಲಿ ಮಾರಾಟತೆರಿಗೆ ಇದೆ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗೋವದಲ್ಲಿ ಈ ತೆರಿಗೆಯ ವಿನಾಯಿತಿ ಇದೆ. ಆದ್ಧರಿಂದ ನಮ್ಮ ರಾಜ್ಯ ಸರ್ಕಾರವೂ ಕೂಡ ವಿನಾಯಿತಿ ಕೊಡುವ ಅಗತ್ಯ ವಿದೆ ಎಂದು ನನ್ನ ಸಲಹೆ. ಜೊತೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಒಂದು ಗಂಭೀರವಾದ ಸಮಸ್ಯೆ ಇದೆ. ಮಂಗಳೂರು ಬೈಂದೂರು ಹಿನ್ನೀರಿನ ಸಾಗಾಟದ ಯೋಜನೆ, ಇದರ ಬಗ್ಗೆ ಬಹುಶಃ ೧೫ ವರ್ಷ ಗಳಿಂದಲೂ ಇದರ ಒಂದು ಕಡತ ಅಥವಾ ಫೈಲು ಉಯ್ಯಾಲೆ ಮನೋಧರ್ಮ ಅತ್ತಲಾಗಿ ಇತ್ತಲಾಗಿ ಸಂಚಾರ ಮಾಡುತ್ತಿದೆ. ನನಗೆ ಗೊತ್ತಿದ್ದ ಮಟ್ಟಿಗೆ ಕೇಂದ್ರ ಸರ್ಕಾರದವರು ಕೂಡ ಅವರು ಇದಕ್ಕೆ ಸಹಾಯ ಮಾಡುತ್ತಾರೆ. ಕೊಡಿಗೆಯನ್ನು ಕೊಡುತ್ತೇವೆಂದು ಹೇಳಿದ್ದ ಇದೆ. ಎಸ್ಟಿಮೇಟ್, ಸ್ಯಾಂಕ್ಷನ್ ಎಂದರೆ ಅವರ ಭಾಷೆಯಲ್ಲಿ ಇನ್ನು ಏನೋ ಇರಬೇಕು. ಅವರು ಇನ್ನೂ ಒಂದು ಖಚಿತವಾದ ಕಾರ್ಯಕ್ರಮ ರೂಪಿಸಿಲ್ಲ, ನಿರ್ದಿಷ್ಟ ನೆರವಿಗೆ ಬರಲಿಲ್ಲ. ಅದರ ಅವಶ್ಯಕತೆ ಏನಿದೆ ಸಾಗರಕಟ್ಟೆಗಳು ಯಾಂತ್ರೀಕದೋಣಿಗಳು ಈ ಪರ್ಸಿನ್ ದೋಣಿಗಳು ಈಗ ಇರುವ ಬಂದರುಗಳು ದೊಡ್ಡ ಬಂದರುಗಳಿವೆ ಹೇಗೂ ಅವಕಾಶ ಇಲ್ಲ ಇವರ ಲೆಕ್ಕಚಾರದ ಪ್ರಕಾರ ಸಣ್ಣ ಬಂದರಿಗೂ ಕೂಡ ಅವಕಾಶವಿಲ್ಲ. ಮಳೆಗಾಲ ದಲ್ಲಿ ನಾಲ್ಕಾರು ತಿಂಗಳು ಹಿನ್ನೀರಿನಲ್ಲಿರಬೇಕಾಗುತ್ತದೆ, ಆದ್ದರಿಂದ ಮಂಗಳೂರು ಬೈಂದೂರು ಹಿನ್ನೀರಿನ ಸಾಗಾಟದ ಯೋಜನೆ ಅವಶ್ಯಕತೆ ಇದೆ. ಅದು ಬೇಕಾಗುತ್ತದೆ. ಕೇಂದ್ರಿಕೃತ ವ್ಯವಸ್ಥೆಯನ್ನು ಏನಾದರೂ ಇಟ್ಟರೆ, ಕಳೆದಸಾರಿ ಮಲ್ಪೆಯಲ್ಲಿ ಬೆಂಕಿಯ ಅನಾಹುತದ ಹಾಗೆ ಹೆಚ್ಚಿನ ನಷ್ಟಕ್ಕೆ ಅವಕಾಶ ವಾಗುತ್ತದೆ. ಆದ್ದರಿಂದ ಇದರ ಅವಶ್ಯಕತೆ ಇದೆ. ಇದನ್ನು ಮಾಡುವುದರಿಂದ ಇಡೀ ಜಿಲ್ಲೆಯಲ್ಲಿ ನೆರೆಯನ್ನು ನಿಯಂತ್ರಿಸಲಿಕ್ಕೆ ಸಾಧ್ಯತೆ ಇದೆ. ಅಮೇರಿಕದಲ್ಲಿ ಸ್ವಯಂ ಸಂಸ್ಥೆಗಳ ಮೂಲಕ ನಿಯಂತ್ರಣ ಸಂಸ್ಥೆಗಳ ಮೂಲಕ ೨೮ ಹೊಳೆಗಳ ಯೋಜನೆಯನ್ನು ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿಯೂ ಕೂಡ ೧೩ ಹೊಳೆಗಳನ್ನು ಮಾಡಿ ನಿಯಂತ್ರಿಸಲಿಕ್ಕೆ ಅದರ ಬಗ್ಗೆ ಕೂಡ ಅವಶ್ಯ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮೀನುಗಾರಿಕೆಯಲ್ಲಿ ನಷ್ಟವಾಗುವುದಕ್ಕೆ ಒಂದು ಕಾರಣವಿದೆ. ಅದನ್ನು ಸರಿಪಡಿಸ ಬೇಕು, ಮತ್ಸ್ಯೋದ್ಯಮ ಕಾರ್ಪೊರೇಷನ್‌ನಲ್ಲಿ ೧೯೭೭-೭೮ರಲ್ಲಿ ೨ ಟನ್ ಫ್ರಿಜಿಂಗ್ ಮಾಡಿದರೆ, ೧೯೭೮ ೭೯ರಲ್ಲಿ ೪ಟನ್ ಫ್ರೀಜಿಂಗ್ ಮಾಡಿದ್ದಾರೆ. ೧೯೮೧ರಲ್ಲಿ ೬ ಟನ್ ಮಾಡಿದ್ದಾರೆ. ಶೀತಲೀಕರಣ ವಿಭಾಗದಲ್ಲಿ ಅವರ ಒಂದು ಯೋಜನೆ ಇದೆ ಅದನ್ನು ೧ ಸಾವಿರ, ೧ ಸಾವಿರ ಏಳುನೂರು ೨ ಸಾವಿರದವರೆಗೂ ಫ್ರೀಸಿಂಗ ಮಾಡಲಿಕ್ಕೆ ಪ್ರಯತ್ನ ಮಾಡಿದರೆ ಖಂಡಿತಾ ಲಾಭದಾಯಕವಾಗಿ ಹೋಗುತ್ತದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ರಾಮಚಂದ್ರ.—ಮಾನ್ಯ ಸದಸ್ಯರು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದಾರೆ ನಮ್ಮ ಮೀನುಗಾರಿಕೆ ಮಂತ್ರಿಗಳಿಗೆ ಕನ್ನಡ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಉಪಾಧ್ಯಕ್ಷರು.—ಕನ್ನಡ ಅರ್ಥವಾಗುತ್ತದೆ ಸ್ವಾಮಿ ತಾವು ಹೇಳಿ.

ಶ್ರೀ ಆನಂದಕುಂದ ಹೆಗ್ಡೆ.—ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವಷ್ಟು ಇದೆ ಇದು ಮುಗಿಯದಷ್ಟು ಇದೆ. ಈ ಖಾತೆಯಿಂದ ದೇಶದ ಅಭಿವೃದ್ಧಿಯಾಗ ಬೇಕಾಗಿದೆ. ರಾಜ್ಯದಲ್ಲಿ ೫೦ ವರ್ಷಗಳಿಂದಲೂ ಬೇರೆ ಬೇರೆ ಬೇಡಿಕೆಗಳು ಅಂದರೆ ವಿದ್ಯುಚ್ಛಕ್ತಿಯನ್ನು ಪಡೆಯುವುದರಲ್ಲಾಗಲೀ ಕಟ್ಟಡ ಕಟ್ಟುವುದರಲ್ಲಾಗಲೀ ನೀರಾವರಿ ಮಾಡುವುದರಲ್ಲಾಗಲೀ, ರಸ್ತೆ ಮಾಡುವುದರಲ್ಲಾಗಲೀ. ವಸತಿ ಗೃಹಗಳನ್ನು ಕಟ್ಟುವುದರಲ್ಲಾಗಲೀ ಯಾವುದೇ ಇಲಾಖೆಯಲ್ಲಾಗಲೀ ಒಂದಲ್ಲ ಒಂದು ವಿಧದಲ್ಲಿ ಲೋಕೋಪಯೋಗಿ ಇಲಾಖೆಯಿಂದಲೇ ನಡೆಯುತ್ತದೆ. ಹೊಸ ಹೊಸ ಸಂಶೋಧನಗಳ ಮೂಲಕ ಸಾಧನೆಗಳ ಮೂಲಕ ಸರ್ಕಾರಗಳ ಮೂಲಕ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿದೆ. ಮುಖ್ಯವಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ಕೆಲಸ, ಕಡಿಮೆ ಹಣದಲ್ಲಿ ಹೆಚ್ಚು ಕೆಲಸ, ಕಡಿಮೆ ಅವಧಿಯಲ್ಲಿ ವೆಚ್ಚ ಹೆಚ್ಚು ಇಲ್ಲದೆ ಸೌಲಭ್ಯಗಳನ್ನು ಕೊಡುವುದರ ಮೂಲಕ ದಕ್ಷ ಆಡಳಿತವನ್ನು ಗುರುತಿಸಬಹುದು. ನಾವೀಗ ಕಾಣುತ್ತಿರುವುದು ಹೆಚ್ಚು ಅವಧಿಯಲ್ಲಿ ಕಡಿಮೆ ಕೆಲಸ, ಹೆಚ್ಚು ವೆಚ್ಚದಲ್ಲಿ ಕಡಿಮೆ ಕೆಲಸ ಜೊತೆಗೆ ಈ ಕೆಲಸ ಮಾಡುವಂತಹವರಿಗೆ ಹೆಚ್ಚು ಸೌಲಭ್ಯಗಳು. ಇದು

ನಮಗಿರುವ ಅನಿಷ್ಟ ಮತ್ತು ಸವಾಲು. ಇನ್ನು ವ್ಯಾಪಕವಾಗಿ ಆಡಳಿತಾತ್ಮಕ ವಿಭಾಗದಲ್ಲಾದರೂ ಅಷ್ಟೆ. ನನ್ನ ಸ್ನೇಹಿತರು ಹೇಳಿದರು, ನನ್ನ ಅನುಭವದಲ್ಲಿ ಹೇಳುವುದಾದರೆ ಲೋಕೋಪಯೋಗಿ ಇಲಾಖೆಯಲ್ಲಿ ಎಕ್ಸಿಕ್ಯೂಟೀವ್ ಎಂಜಿನಿಯರ್ ಆಸಿಸ್ಟೆಂಟ್ ಇಂಜಿನಿಯರ್ ಜೂನಿಯರ್ ಇಂಜಿನಿಯರ್ ಗಳಲ್ಲಿ ಶೇಕಡ ೪೦ ರಷ್ಟು ಲಂಚ ಇದೆ. ಅದರ ಮೇಲ್ಪಟ್ಟವರಲ್ಲಿ ನಮ್ಮ ರಾಮಚಂದ್ರರೆಡ್ಡಿಯವರು ಹೇಳಿದಹಾಗೆ ಶೇಕಡ ೧೦ ರಷ್ಟು ಇದೆ, ಮತ್ತೊಂದು ವಿಚಾರವನ್ನು ಹೇಳಬೇಕೆಂದರೆ ಒಮ್ಮೆ ಸ್ವರ್ಗದಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರನ್ನು ಏತಕ್ಕೆ ಲಂಚ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ ಆತ ತೆಗೆದು ಕೊಳ್ಳುವುದು ಅವಶ್ಯ ಎಂದನಂತೆ. ಅಸಿಸ್ಟೆಂಟ್ ಇಂಜಿನಿಯರ್‌ನ್ನು ಕೇಳಿದ್ದಕ್ಕೆ ಅದು ಅನಿವಾರ್ಯ ಎಂದರೆ, ಜೂನಿಯರ್ ಇಂಜಿನಿಯರ್ ಏನು ಹೇಳಿದರು ಅಂದರೆ ಅದು ನಿರೀಕ್ಷಿಸಲ್ಪಟ್ಟಿದ್ದು ಎಂದು ಹೇಳಿದರಂತೆ ಇದಕ್ಕೆ ವ್ಯಾಪಕವಾಗಿ ಹೇಳಬಹುದು ಆದರೆ ಅಧ್ಯಕ್ಷರು ಕಡಿಮೆ ಸಮಯ ಕೊಟ್ಟಿದ್ದಾರೆ.

ಹೀಗೆ ಅದರ ಹಿನ್ನೆಲೆ ನಡೆದಿದೆ. ಈ ಲೋಕೋಪಯೋಗಿ ಇಲಾಖೆಯಲ್ಲಿ ಹಿಂದೆ ಏನು ನಡೆದಿದೆ ನಡೆಯುತ್ತಾ ಇದೆ ಅವೆಲ್ಲಾ ಖಾತೆಗಳಲ್ಲೂ ಇದೆ. ಒಟ್ಟಿನಲ್ಲಿ ಹೇಳಬೇಕಾದರೆ ಯಾವ ಇಲಾಖೆ ತೆಗೆದು ಕೊಂಡರೂ ಅದರಲ್ಲಿ ಒಳ್ಳೆಯವರೂ ಇದ್ದಾರೆ. ಕೆಟ್ಟವರು ಇದ್ದಾರೆ. ಸಾಕಷ್ಟು ಮಿಶ್ರಣವಾಗಿದೆ. ಕೆಲವು ಕಡೆ ಸಮಸ್ಯೆಗಳು ಸ್ವಲ್ಪಮಟ್ಟಿಗೆ ವ್ಯಾಪಕವಾಗಿದ್ದರೆ ಇನ್ನು ಕೆಲವು ಕಡೆಗಳಲ್ಲಿ ಸ್ವಲ್ಪ ಅದಕ್ಕಿಂತ ಹೆಚ್ಚು ವ್ಯಾಪಕವಾಗಿದೆ.

ಇನ್ನು ಮುಳುಗಡೆ ಪ್ರದೇಶದ ಬಗ್ಗೆ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ಈ ಅಣೆಕಟ್ಟುಗಳನ್ನು ಕಟ್ಟುವುದಕ್ಕಾಗಿ ಅನೇಕ ಪ್ರದೇಶಗಳು ಮುಳುಗಡೆಯಾಗಿವೆ. ಅವರಿಗೆ ಪರಿಹಾರ ಇನ್ನೂ ಸರಿಯಾಗಿ ದೊರಕಿಲ್ಲಾ. ಆವಾಗ ಯಾವ ಪ್ರಾಜೆಕ್ಟ್ ತೆಗೆದುಕೊಂಡಿದ್ದಾರೋ ಅವೆಲ್ಲದರ ನಷ್ಟವನ್ನು ಲೆಕ್ಕ ಹಾಕಿದರೆ ಸುಮಾರು ೧೪ ಪಾಲಿನಷ್ಟು ನಷ್ಟವಾಗಿದೆ ಅಲ್ಲದೆ ಆ ಜಮೀನಿನವರಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಈ ಅಣೆಕಟ್ಟುಗಳನ್ನು ಕಟ್ಟುವಾಗ ಏನು ಉಪಕರಣಗಳನ್ನು ಕೊಡುತ್ತೀರೋ. ಜಿಲ್ಲಾ ಕೇಂದ್ರ ಗಳಲ್ಲಿರುವ ಈ ಉಪಕರಣಗಳನ್ನು ನೋಡಿದರೆ ಮಾರುಕಟ್ಟೆಯಲ್ಲಿ ಬಹಿರಂಗವಾಗಿಯೇ ಈ ಉಪಕರಣಗಳನ್ನು ತೆಗೆದುಕೊಂಡು ಹೋಗಿ ಉಪಯೋಗಿಸುತ್ತಾರೆ. ನಾರಾಯಣಪುರ ಮತ್ತು ಆಲಮಟ್ಟಿ ಪ್ರಕರಣ ಹೆಚ್ಚು ಈ ಸಂದರ್ಭದಲ್ಲಿ ಹೇಳುವುದು ಅನಾವಶ್ಯಕ. ನ್ಯಾಯವಾಗಿ ಹೇಳಬೇಕೆಂದರೆ ಅವರಿಗೆ ಅಷ್ಟು ಉಪಕರಣಗಳು ಬೇಕಾಗಿಲ್ಲ. ಉಪಕರಣಗಳ ಕೊರತೆ ಇದೆ ಅಂತ ಹೇಳಿ ಮಾರುಕಟ್ಟೆಯಿಂದ ತಂದು ಅನಾವಶ್ಯಕವಾಗಿ ಸಂಗ್ರಹ ಮಾಡುತ್ತಿದ್ದಾರೆ. ಒಂದು ಕಡೆ ಅನಾ ವಶ್ಯಕವಾದ ಉಪಕರಣ ಸಂಗ್ರಹ ಇನ್ನೊಂದು ಕಡೆ ದುಂದು ವೆಚ್ಚ. ಈ ಪ್ರಜೆಕ್ಟ್‌ಗಳ ಕೆಲಸವನ್ನು ನಾವು ಮುಗಿಸುವುದು ನಿಧಾನವಾದರೆ ನಮಗೆ ಮೇಲಿನಿಂದ ಧನಸಹಾಯ ಸಿಗುವುದೂ ತಡವಾಗುತ್ತದೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇವೆಲ್ಲದರ ನಷ್ಟವನ್ನು ಜನತೆ ತೆರಿಗೆಯ ರೂಪವಾಗಿ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಇದನ್ನು ತಿಳಿದುಕೊಂಡು ಕೆಲಸ ಮಾಡಬೇಕು.

ಇನ್ನು ಡಿವಿಷನ್ ಮಟ್ಟದಲ್ಲಿ ಮತ್ತು ಸಬ್‌ಡಿವಿಷನ್ ಮಟ್ಟದಲ್ಲಿ ಅನುಪಯುಕ್ತವಾದ ಲಾರಿಗಳು ಎಷ್ಟು ನಿಂತಿವೆ ಅನ್ನುವುದನ್ನು ನೋಡಬಹುದು. ಇದನ್ನು ನಾವು ಯೋಚನೆ ಮಾಡುವುದಾದರೆ ಒಂದು ಕಡೆ ಈ ಡ್ರೈವರ್‌ಗಳಿಗೆ ಸಂಬಳ ಕೊಡಬೇಕು ಏನೂ ಕೆಲಸವಿಲ್ಲದೆ ಸಂಬಳ ಕೊಡಬೇಕು ಇವೆಲ್ಲಾ ತೆರಿಗೆ ಜನತೆಯ ಮೇಲೆ ಬೀಳುತ್ತದೇ ವಿನಾ ಅನುಕೂಲವಾಗುವುದಿಲ್ಲ. ನಾನಾ ಮೊದಲೇ ಹೇಳಿದ ಹಾಗೆ ಒಂದು ಆಡಳಿತಾತ್ಮಕವಾದ ಸಮಸ್ಯೆಗಳು ಏನು ಇವೆ ಅದನ್ನು ಕಡಿಮೆ ಮಾಡಬೇಕು ಇನ್ನೊಂದು ಕಡೆ ಅನುಪಯುಕ್ತವಾದ ಅನುಪಯುಕ್ತವಾದ ಕೆಲಸಗಳನ್ನು ಬದಿಗಿಟ್ಟರೆ ಅದರಿಂದ ವೆಚ್ಚವೂ ಕಡಿಮೆ ಯಾಗುತ್ತದೆ. ಇದರಲ್ಲಿ ಏನು ಇದೆ ಅದನ್ನು ಸತ್ಯಾಂಶವನ್ನು ಹುಡುಕಿ ಉಪಯುಕ್ತವಾದ ರೀತಿಯಲ್ಲಿ ಕೆಲಸ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ವಿದ್ಯುಚ್ಛಕ್ತಿ ಇಲಾಖೆಯ ಬಗ್ಗೆ ಹೇಳುವುದಾದರೆ ಅವರಿಗೆ ೩ ಕಣ್ಣು ಇದೆ ಎಂದು ಹೇಳಬೇಕಾಗಿದೆ. ಇದು ಒಂದು ಕಣ್ಣುಮುಚ್ಚಾಲೆ ಆಟ ಇದ್ದಹಾಗೆ ತಾವೇನು ಈ ಪಂಪ್‌ಸೆಟ್ ಬಗ್ಗೆ ೩ ರಿಂದ ೫ ಹೆಚ್.ಪಿ ಇರುವವರಿಗೆ ಒಂದು ಪರಿಹಾರ ಧನ ಅಂತ ಕೊಟ್ಟಿದ್ದೀರಿ. ಇದರಲ್ಲಿ ನನ್ನ ಅನುಭವ ತಮಗೆ ಸ್ವಲ್ಪ ಹೇಳಬಯಸುತ್ತೇನೆ. ೫ ಹೆಚ್.ಪಿ. ಮೇಲೆ ಇರತಕ್ಕಂಥಾವರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವಾಗ ಪರೋಕ್ಷವಾಗಿಯೋ ಅಪ್ರತ್ಯಕ್ಷವಾಗಿಯೋ ಅವರು ಇನ್ನೊಂದು ಕಾರ್ಯಕ್ರಮ

ತೆಗೆದುಕೊಳ್ಳುತ್ತಾರೆ. ಅದು ಯಾವರೀತಿ ಎಂದರೆ ಕೆಲವರು ಹೊಳೆಯಿಂದಾಗಲಿ ಅಥವಾ ಕೆರೆಯಿಂದಾಗಲಿ ೨೪ ಗಂಟೆಗಳ ಕಾಲವೂ ಕೆಲವರು ಪಂಪ್‌ಸೆಟ್ ನಡೆಸುತ್ತಾರೆ. ಇದು ಗುಪ್ತವಾಗಿ ನಡೆಯುತ್ತಾ ಇದೆ. ಎರಡು ಅಥವಾ ೩ ಬೆಳೆ ಬೆಳೆಯುತಕ್ಕಂಥಾ ಕ್ಷೇತ್ರದಲ್ಲಿ ಪಂಪ್‌ಸೆಟ್‌ಗಳ ಮುಖಾಂತರ ನೀರು ಸರಬರಾಜು ಮಾಡುವಾಗ ಆ ಪಂಪ್‌ಸೆಟ್ ಏನು ಇದೆ ಅದು ಕೆಟ್ಟುಹೋಗಿರುತ್ತದೆ ಅಥವಾ ಅದರ ಮೀಟರ್ ನಿಂತು ಹೋಗಿರುತ್ತದೆ ಇದರ ಬಗ್ಗೆ ಸರಿಯಾಗಿ ನೋಡದೆ ಹೋದರೆ ಆಡಳಿತಾತ್ಮಕವಾಗಿ ಏನು ದೋಷ ಇದೆ, ಎನ್ನುವುದನ್ನು ಕಂಡುಹಿಡಿಯದೇ ಹೋದರೆ ಇದರಿಂದ ಅಷ್ಟು ಪರಿಣಾಮಕಾರಿಯಾಗುವುದರಲ್ಲಿ ವಿಫಲತೆಯಾಗುತ್ತದೆ. ಅಲ್ಲದೆ ಇದರಿಂದ ಬೇಕಾದಷ್ಟು ವಿದ್ಯುಚ್ಛಕ್ತಿ ಸೋರಿ ಹೋಗುತ್ತದೆ, ಇದರ ಬಗ್ಗೆ ಗಮನ ಕೊಡಬೇಕು ನಮ್ಮಲ್ಲಿ ಈಗಾಗಲೇ ಸಾಕಷ್ಟು ಕೊರತೆ ಇದೆ. ಇದರಿಂದ ಸಾಕಷ್ಟು ಕೃಷಿ ಮೇಲೆ ಪರಿಣಾಮವಾಗದಿದ್ದರೂ ಕೂಡ ಉದ್ದಿಮೆಗಳ ಮೇಲೆ ಅದರ ಪರಿಣಾಮ ಹೆಚ್ಚು. ಈ ವಿದ್ಯುಚ್ಛಕ್ತಿ ಎಷ್ಟು ಸೋರಿಹೋಗುತ್ತದೆ ಎಂದರೆ ಅಂತರ ರಾಜ್ಯಮಟ್ಟದ ಇದನ್ನು ಹೋಲಿಸಿದಾಗ ಸರಾಸರಿ ೧೮ ಪರ್ಸೆಂಟ್ ಬರುತ್ತದೆ ಅನ್ನುವುದನ್ನು ಒಪ್ಪಿಕೊಂಡಿದ್ದಾರೆ. ನಮ್ಮಲ್ಲಿ ೨೫ ಪರ್ಸೆಂಟ್‌ನವರೆಗೂ ವಿದ್ಯುಚ್ಛಕ್ತಿ ಕೊರತೆ ಬರುತ್ತದೆ, ದಕ್ಷತೆ ವಹಿಸಿ ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಇದರ ಬಿಲ್‌ನಲ್ಲೋ ಅಥವಾ ಮೀಟರ್‌ನಲ್ಲೋ ಏನು ದೋಷವಿದೆ ಅದನ್ನು ಸರಿಪಡಿಸದೇ ಹೋದರೆ ಇದರ ಉತ್ಪತ್ತಿಯಲ್ಲಿ ಸಾಕಷ್ಟು ಉತ್ಪಾದನೆಯನ್ನು ಕಳೆದುಕೊಳ್ಳುತ್ತೇವೆ ಅನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಈ ಬಗ್ಗೆ ಕೊಡತಕ್ಕಂಥಾ ಕೆಲಸಗಳನ್ನು ಕಾಂಟ್ರಾಕ್ಟ್ ಮುಖಾಂತರ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಇದು ನನ್ನ ಊರಿನಲ್ಲೇ ನಡೆದಂಥಾದ್ದು. ಡಿಪಾರ್ಟ್‌ಮೆಂಟಿನವರು ದೀಪ ಹಾಕುವಾಗ ಆ ಕೆಲಸ ಮುಗಿಸಬೇಕಾದರೆ ೭ ವಾರ ತೆಗೆದುಕೊಂಡರು. ಅದಕ್ಕೆ ಒಬ್ಬ ಕಾಂಟ್ರಾಕ್ಟರ್ ಮೊದಲು ಬಂದು ನನಗೆ ಒಂದು ವಾರ ಟೈಂ ಕೊಡಿ ಈ ಕೆಲಸ ಮುಗಿಸಿ ಕೊಡುತ್ತೇನೆ ಅಂತ ಕೇಳಿದ, ಕೊಡಲಿಲ್ಲಾ. ನಾವು ಈ ಕೆಲಸವನ್ನು ಮುಗಿಸಬೇಕಾದರೆ ೭ ವಾರ ತೆಗೆದುಕೊಳ್ಳುತ್ತೇವೆ, ನಿನಗೆ ಬೇಕಾದರೆ ೭ ವಾರ ಕೊಡುತ್ತೇನೆ ಅಂತ ಹೇಳಿದರು. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರಿಂದ ಪರೋಕ್ಷವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಆಡಳಿತಾತ್ಮ ದೃಷ್ಟಿಯಿಂದ ಲೆಕ್ಕಪರಿಶೋಧಕರು ಪರಿಶೀಲನೆ ಮಾಡಿ ಇದರಿಂದ ಎಷ್ಟರಮಟ್ಟಿಗೆ ವೆಚ್ಚವನ್ನು ಕಡಿಮೆ ಮಾಡಬಹುದು ನೋಡಿ ಉತ್ಪಾದನೆ ಹೆಚ್ಚುವಂತೆ ಮತ್ತು ವೆಚ್ಚ ಕಡಿಮೆಯಾಗುವಂತೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) ಮಾನ್ಯ ಉಪಾಧ್ಯಕ್ಷರೇ, ಈ ಸಭೆಯ ಮುಂದೆ ಇಟ್ಟಿರತಕ್ಕಂಥಾ ಎಲ್ಲಾ ಬೇಡಿಕೆಗಳನ್ನು ಬೆಂಬಲಿಸುತ್ತಾರೆ ಅದರೆ ನನಗೆ ಕೊಟ್ಟಿರತಕ್ಕಂಥಾ ಕಾಲಾವಕಾಶದಲ್ಲಿ ಮುಗಿಸಬೇಕಾದರೆ ಕಷ್ಟವಾಗುತ್ತದೆ. ಕಾರಣ ಇದರಲ್ಲಿರುವ ಪಟ್ಟಿಯನ್ನೇ ಓದುವುದಕ್ಕೆ ೨ ನಿಮಿಷ ಹಿಡಿಯುವಾಗ ೫ ನಿಮಿಷದಲ್ಲಿ ನನ್ನ ಭಾಷಣವನ್ನು ಮುಗಿಸಬೇಕಾದರೆ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ತಮ್ಮ ಭಾಷಣವನ್ನು ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ.—ನಾನು ಈ ಡಿಮ್ಯಾಂಡ್ಸ್ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗದೆ ಬರೇ ಕೆಲವು ಸಲಹೆಗಳನ್ನು ಮಾತ್ರ ಕೊಡಲಿಕ್ಕೆ ಇಷ್ಟಪಡುತ್ತೇನೆ. ಈ ಲೋಕೋಪಯೋಗಿ ಇಲಾಖೆ ಎನ್ನುವುದು ಬಹಳ ಮುಖ್ಯವಾದ ಇಲಾಖೆ ಈ ಬಗ್ಗೆ ಕೆಲವು ವಿಷಯಗಳನ್ನು ಬಹಳ ವಿಶಾದದಿಂದ ಹೇಳಬೇಕಾಗಿದೆ. ಈ ಲೋಕೋಪಯೋಗಿ ಇಲಾಖೆ ಏನು ಇದೆ ಈ ಇಲಾಖೆಯ ಗಮನವನ್ನು ಸಾಮಾನ್ಯವಾಗಿ ಎಲ್ಲರೂ ಸೆಳೆಯುತ್ತಾರೆ. ಕಾರಣ ಏನೆಂದರೆ ಸಾಮಾನ್ಯವಾಗಿ ಎಲ್ಲಾ ಜನತೆಗೆ, ಎಲ್ಲಾ ಊರುಗಳಿಗೂ ಬೇಕಾದಂಥಾ ರಸ್ತೆಗಳು ಇವೆ ಇದರಲ್ಲಿ ಎಷ್ಟರ ಮಟ್ಟಿಗೆ ಮಾನ್ಯ ಸಚಿವರು ಸಾಧನೆ ನಡೆಸಿದ್ದಾರೆ ಅದರಲ್ಲಿ ಎಷ್ಟರಮಟ್ಟಿಗೆ ಕಾರ್ಯಗತ ಮಾಡಿದ್ದಾರೆ ಅನ್ನುವುದರ ಬಗ್ಗೆ ಹೇಳಬೇಕಾದಗಿದೆ. ಹಿಂದಿನಿಂದಲೂ ಸಹ ಈ ಹಿಂದೆ ಇದ್ದಂಥಾ ಎಲ್ಲಾ ಸಚಿವರ ಮೇಲೂ ದೋಷಣೆ ಮಾಡಿದ್ದೇನೆ. ಕಾರಣ ನಮ್ಮ ರಾಜ್ಯದಲ್ಲಿ

ಎಷ್ಟು ಹಳ್ಳಿಗಳು ಇವೆ ಅದರ ಅರ್ಧಭಾಗದಷ್ಟು ಹಳ್ಳಿಗಳಿಗೆ ರೋಡ್ಸ್ ಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲಾ. ಇನ್ನು ಎಷ್ಟು ವರ್ಷಕ್ಕೆ ನಮ್ಮ ರಾಜ್ಯದಲ್ಲಿರುವ ಎಲ್ಲಾ ಹಳ್ಳಿಗಳಿಗೂ ರೋಡ್ಸ್‌ಗಳನ್ನು ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಈ ಸಂದರ್ಭದಲ್ಲಿ ಆಲೋಚನೆ ಮಾಡಬೇಕಾಗಿದೆ. ನೀವು ಕೊಟ್ಟಿರತಕ್ಕಂಥಾ ವರದಿಯಲ್ಲಿ ೫೦ ಪರ್ಸೆಂಟ್ ಹಳ್ಳಿಗಳಿಗೆ ಗ್ರಾಮಾಂತರ ಪ್ರದೇಶಕ್ಕೆ ರೋಡ್ಸ್ ಆಗಿದೆಎಂದು ಇದರಲ್ಲಿ ಎಷ್ಟು ರೋಡ್ಸ್‌ಗಳಿಗೆ ಮೆಟಲ್ ಮಾಡಿದ್ದೀರಾ, ಎಷ್ಟು ರೋಡ್ಸ್‌ಗಳನ್ನು ಇನ್ನು ತೆಗೆದುಕೊಂಡಿಲ್ಲಾ ಎಷ್ಟು ರೋಡ್ಸ್‌ಗಳ ಮೇಲೆ ಇನ್ನೂ ಆಕ್ಷನ್ ತೆಗೆದುಕೊಂಡಿಲ್ಲಾ. ಎಷ್ಟು ರೋಡ್ಸ್‌ಗಳ ಮೇಲೆ ಆಕ್ಷನ್ ತೆಗೆದುಕೊಂಡಿದ್ದೀರಿ ಇವೆಲ್ಲದರ ಡೀಟೇಲ್ ಇಲ್ಲ ಅದನ್ನು ಹೇಳಬೇಕು. ಹಾಗಾದರೆ ಇದರ ಬಗ್ಗೆ ತಾವು ಎಷ್ಟು ಲಕ್ಷ್ಯ ವಹಿಸಿದ್ದೀರಿ ಅನ್ನುವುದು ಗೊತ್ತಾಗುತ್ತದೆ. ತಾವು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥಾವರು. ಆದುದರಿಂದ ಈ ರೋಡ್ಸ್‌ಗಳಿಗೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಈ ಬಗ್ಗೆ ನನ್ನ ಇನ್ನೊಂದು ಸಲಹೆ ಏನೆಂದರೆ ಎಲ್ಲಾ ಊರುಗಳಲ್ಲೂ ಈ ರೋಡ್ಸ್ ಇಲ್ಲದೇ ಹೋದರೆ ಸಾಧ್ಯವಿಲ್ಲಾ. ಇದನ್ನು ತಾವು ಒಪ್ಪುತ್ತೀರಿ. ಈಗ ಇರತಕ್ಕಂಥಾ ರೋಡ್ಸ್‌ಗಳಲ್ಲಿ ಕೆಲವು ಪಿ. ಡಬ್ಲ್ಯು. ಡಿ.ಗೆ ಸೇರಿದೆ ಇನ್ನು ಕೆಲವು ಟಿ. ಡಿ. ಬಿ.ಗೆ ಇನ್ನು ಕೆಲವು ವಿಲೇಜ್ ಪಂಚಾಯಿತಿಗೆ ಸೇರಿದೆ ಇನ್ನು ಈ ಪಿ. ಡಬ್ಲ್ಯು. ಡಿ. ರೋಡ್ಸ್‌ಗೆ ನೀವು ಏನು ಹಣ ಕೊಡುತ್ತೀರೋ ಅದು ಸರಿಯಾಗಿ ವಿನಿಯೋಗವಾಗುವುದಿಲ್ಲ. ಅದರಲ್ಲಿ ಶೇಕಡ ೫೦ ಪರ್ಸೆಂಟ್ ಹಣ ಆ ಇಂಜನೀಯರ್‌ಗಳಿಗೆ ಹೋಗುತ್ತದೆ. ಅರ್ಧಭಾಗ ಮಾತ್ರ ಇದಕ್ಕೆ ಉಪಯೋಗವಾಗುತ್ತದೆ. ಅದೇ ತಾಲ್ಲೂಕಾ ಬೋರ್ಡ್‌ಗೆ ಕೊಟ್ಟರೆ ಅವರ ಮುಖಾಂತ ಈ ರೋಡ್ಸ್‌ಗಳನ್ನು ಮಾಡಿಸುವುದಾದರೆ ಶೇಕಡಾ 20 ಭಾಗ ಉಪಯೋಗವಾಗುತ್ತದೆ ೩೦ ಭಾಗ ಅವರಿಗೆ ಹೋಗುತ್ತದೆ ನಾನು ಈ ಬಗ್ಗೆ ಸಲಹೆ ಮಾಡುವುದೇನೆಂದರೆ ಎಲ್ಲಾ ಹಳ್ಳಿಗಳಿಗೂ ರೋಡ್ಸ್ ಕೊಡುವುದು ಸರ್ಕಾರದ ಆದ್ಯಕರ್ತವ್ಯ ಹಾಗೂ ಅದರ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈ ಕಾರಣದಿಂದ ಈ ರೋಡ್ಸ್‌ಗೇನೇ ಒಬ್ಬ ಪ್ರತ್ಯೇಕವಾದ ಸಚಿವರು ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಅದು ಪಿ.ಡಬ್ಲ್ಯು.ಡಿ. ರೋಡೇ ಆಗಿರಬಹುದು ಟಿ.ಡಿ.ಬಿ. ಬೋರ್ಡ್‌ಗೇ ಸೇರಿದ ರೋಡೇ ಆಗಿರಬಹುದು, ವಿಲೇಜ್ ಪಂಚಾಯಿತಿಗೆ ಸೇರಿದ ರೋಡೇ ಆಗಿರಬಹುದು ಇವೆಲ್ಲಾದಕ್ಕೂ ಸೇರಿ ಪ್ರತ್ಯೇಕವಾದ ಒಬ್ಬ ಮಂತ್ರಿ ಇದ್ದರೆ ಆವಾಗ ಅವರು ಈ ಬಗ್ಗೆ ಹೆಚ್ಚಿನ ಒಂದು ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ಮಾಡಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ತಾಲ್ಲೂಕ್ ಬೋರ್ಡ್‌ಗೆ ಸೇರಿದ ರೋಡ್ಸ್‌ಗಳು ಮತ್ತು ಹಳ್ಳಿಗಳಿಗೆ ಸೇರಿದ ಎಲ್ಲಾ ರಸ್ತೆಗಳನ್ನು ತೆಗೆದುಕೊಂಡು ಅದನ್ನು ಸರ್ಕಾರವೇ ಮುಂದುವರೆಸಿಕೊಂಡು ಹೋಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈಗ ನೀವು ಮಾಡಿರತಕ್ಕಂಥಾ ರೋಡ್ಸ್ ಹೇಗಿದೆ ಎಂದರೆ ನಿಜವಾಗಲೂ ಹೇಳಬೇಕಾದರೆ ಈಗ ಆಧುನೀಕರಣವಾಗಿ ಬಂದಿರತಕ್ಕಂಥಾ ಹೊಸ ಹೊಸ ಮಿಷನರೀಸ್ ಏನು ಇವೆ ಅದನ್ನು ಅಡಾಪ್ಟ್ ಮಾಡಿಕೊಂಡು ಸರಿಯಾಗಿ ಮಾಡಿಲ್ಲಾ. ಒಂದು ಅಸ್ಫಾಟಿಕ್ ಮಾಡಬೇಕಾದರೆ ಅದಕ್ಕೆ ಹೆಚ್ಚಿಗೆ ಮ್ಯಾನ್ಯುಯಲ್ ಲೇಬರ್ ಅನ್ನೇ ಉಪಯೋಗಿಸುತ್ತೀರಿ. ಮೆಕನೈಸ್ಡ್ ವಿಧಾನ ಇದೆ ಅದನ್ನು ಉಪಯೋಗಿಸುವುದಿಲ್ಲ. ಒಳ್ಳೆಯ ರೋಡ್ಸ್ ಮಾಡಬೇಕಾದರೆ, ಮೆಟಲ್ ಮಾಡಬೇಕಾದರೆ, ಕಾಂಕ್ರೀಟ್ ಮಾಡಬೇಕಾದರೆ ಇದಕ್ಕೆಲ್ಲಾ ಹೊಸ ಹೊಸ ಮಿಷನರಿ ಇದೆ. ಈ ರೀತಿಯಾಗಿ ಕೆಲವು ಮಿನಿಪ್ಲಾಂಟ್ಸ್ ಏನು ಇವೆ ಅದನ್ನು ಉಪಯೋಗಿಸಿಕೊಂಡು ರೋಡ್ಸ್‌ಗೆ ಯಾವುದು ಉತ್ತಮವಾಗಿ ಕೆಲಸ ಮಾಡುತ್ತದೋ ಅದನ್ನು ಉಪಯೋಗಿಸಿಕೊಂಡು ಸರಿಯಾದಂಥಾ ಕೆಲಸವನ್ನು ಮಾಡುವ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು hot pit plants ಇದೆ. ಅದನ್ನು ಇಲಾಖೆಯವರು ಉಪಯೋಗಿಸುವುದಿಲ್ಲ. ಏನಾದರೂ ಕೊಲ್ಯಾಪ್ಸ್ ಮಾಡಿಕೊಂಡು ಬೇಕು ಎಂತಲೇ ಕೆಡಿಸುತ್ತಾರೆ. ಇದರಿಂದ ಹೆಚ್ಚು ಉಪಯೋಗ ಮಾಡಿಕೊಳ್ಳಬೇಕು. ಹೆಚ್ಚಾಗಿ ಮ್ಯಾನ್ಯುಯಲ್ ಲೇಬರರ್ಸ್ ಅನ್ನೇ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಈ ಮೆಕಾನಿಕಲ್ ಪೇವರ್ಸ್ ಅನ್ನು ಹೆಚ್ಚಾಗಿ ಬಳಕೆ ತಂದಿರುವುದನ್ನೇ ನಾನು ನೋಡಿಲ್ಲಾ ಈವೊತ್ತು ಅದನ್ನು ಉಪಯೋಗ ಮಾಡಿದರೆ, ಹೆಚ್ಚು ಬಳಕೆಗೆ ತಂದರೆ ಈ ರೋಡ್ಸ್‌ಗಳು ಇನ್ನೂ ಚೆನ್ನಾಗಿ ಉಪಯೋಗವಾಗುತ್ತದೆ. ಇಲ್ಲದೇಹೋದರೆ ೩ ತಿಂಗಳಾದರೆ ಸಾಕು ಹೆಚ್ಚು ಉಪಯೋಗಕ್ಕೆ ಬರುವುದಿಲ್ಲ.

ಅದಕ್ಕೋಸ್ಕರ ಇದರ ಕಡೆಗೆ ಹೆಚ್ಚಿನ ಆಧ್ಯತೆಯಿಂದ ಗಮನಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ತುಮಕೂರು ಮತ್ತು ಬೆಂಗಳೂರು ನಡುವೆ ಇರತಕ್ಕಂಥ ನ್ಯಾಷನಲ್ ಹೈವೇ ರೋಡ್ ಏನಿದೆ ಅದರಲ್ಲಿ ಯಾವಾಗಲೂ ಓಡಾಡುವುದಕ್ಕೆ ಸಾಧ್ಯವಿಲ್ಲ. ಬೆಂಗಳೂರು ಸಿಟಿಯಿಂದ ನೆಲಮಂಗಲಕ್ಕೆ ಹೋಗಬೇಕಾದರೆ ಸುಮಾರು ೪೦ ನಿಮಿಷ ಬೇಕಾಗುತ್ತದೆ. ಈ ರೋಡ್ ಈ ಮಟ್ಟಕ್ಕೆ ಇರಬೇಕಾದರೆ, ನಾನು ನಿಮಗೆ ಸಲಹೆ ಮಾಡತಕ್ಕಂಥಾದ್ದು ಏನೆಂದರೆ ಅಲ್ಲಿ ಡಬಲ್ ರೋಡ್ ಮಾಡಿ— ಹೋಗುವುದಕ್ಕೆ ಒಂದು ದಾರಿ, ಬರುವುದಕ್ಕೆ ಒಂದು ದಾರಿಯನ್ನು ಮಾಡಬೇಕು. ಈ ರೋಡ್‌ಗಳನ್ನು ಎಲ್ಲಿ ನೋಡಿದರೂ ಚೆನ್ನಾಗಿ ಇಲ್ಲ. ಹೊರದೇಶಗಳಿಂದ ಬರತಕ್ಕಂಥವರು ಏನು ತಿಳಿದುಕೊಳ್ಳುತ್ತಾರೆ, ಎಂದರೆ ಈ ನಮ್ಮ ಇಂಜಿನಿಯರ್‌ಗಳಿಗೆ ರೋಡ್ ಮಾಡುವುದಕ್ಕೆ ಬರುತ್ತದೆಯೋ ಇಲ್ಲವೋ ಎನ್ನತಕ್ಕಂಥ ಅನುಮಾನ ಅವರಿಗೆ ಬರಬಹುದು. ಅಂತಹ ಒಂದು ಆರೋಪವನ್ನು ಮಾಡಬಹುದು. ಈ ಆರೋಪವನ್ನು ನಿವಾರಣೆ ಮಾಡುವುದಕ್ಕೋಸ್ಕರ ಸೂಪರ್ ಹೈವೇ ರೀತಿಯಲ್ಲಿ ಈ ರಾಜ್ಯಕ್ಕೇ ಮಾದರಿಯಾದ ರೋಡನ್ನು ಮಾಡಿದರೆ ಒಳ್ಳೆಯದಾಗುತ್ತದೆ, ಅಲ್ಲದೇ ಇವತ್ತು ತುಮಕೂರು ಮತ್ತು ಬೆಂಗಳೂರು ಮಧ್ಯೆ ಮಾಡುತ್ತಾರೆ, ನಾಳೆ ಬೇರೆ ಕಡೆ ಮಾಡುತ್ತಾರೆ ಎಂದು ಹೇಳುವುದಕ್ಕೂ ಕೂಡ ಒಂದು ದಾರಿ ಇರುತ್ತದೆ. ಆದ್ದರಿಂದ ಈ ಒಂದು ಕೆಲಸವನ್ನು ಮಾಡಬೇಕು ಎಂದು ಹೇಳುತ್ತಿದ್ದೇನೆ. ಇವತ್ತಿನದಿವಸ ಈ ರೋಡ್‌ನ್ನು ಮಾಡತಕ್ಕಂಥಾದರಲ್ಲಿ ಏತಕ್ಕೆ ಇಷ್ಟೊಂದು ಅನ್ಯಾಯವಾಗುತ್ತದೆ ? ಪಿ.ಡಬ್ಲ್ಯು.ಡಿ. ವರ್ಕ್ ಯಾವುದೇ ಆಗಲೀ ಅವರು ವರ್ಷದಿಂದ ವರ್ಷಕ್ಕೆ ಷೆಡ್ಯೂಲ್ ಆಫ್ ರೇಟ್ಸನ್ನು ರಿವೈಸ್ ಮಾಡುತ್ತಾರೆ. ಅದನ್ನು ರಿವೈಸ್ ಮಾಡತಕ್ಕಂಥವರು ಯಾರು ಎಂದರೆ ಸೂಪರಿಂಟೆಂಡೆಂಗ್ ಆಫ್ ಇಂಜಿನಿಯರ್‌ರವರು ಅದನ್ನು ಮಾಡುತ್ತಾರೆ. ಅವರು ನಂದಿಹಿಲ್ಸ್‌ನಲ್ಲೋ ಅಥವಾ ದೇವರಾಯನದುರ್ಗದಲ್ಲೋ ಮೀಟಿಂಗ್ ಕರೆದುಬಿಡುತ್ತಾರೆ. ಅಲ್ಲಿ ಕುಳಿತುಕೊಂಡು ಏನೋ ಒಂದು ರೇಟನ್ನು ಫಿಕ್ಸ್ ಮಾಡುತ್ತಾರೆ. ಆ ರೇಟ್ ನಂತೆ ಇಂಜಿನಿಯರ್ಸ್ ಎಸ್ ಆರ್. ಫಿಕ್ಸ್ ಮಾಡುತ್ತಾರೆ. ಅದರ ಪ್ರಕಾರ ಇದಕ್ಕೆ ಯಾರು ಎಸ್ಟಿಮೇಟ್ ಮಾಡುತ್ತಾರೋ ಅವರ ಕೈಯಲ್ಲಿ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದೆಲ್ಲಾ ಮೋಸ್ಟ್ ಇಂಪ್ರಾಕ್ಟಿಕಲ್ ರೇಟ್ಸ್. ಇದರಿಂದ ಹಣ ಸೋರಿ ಹೋಗುವುದಕ್ಕೆ ಕಾರಣವಾಗುತ್ತದೆ. ಅಲ್ಲದೇ ಮಾಡಿದಂಥ ಕೆಲಸ ಕೂಡ ಶಾಶ್ವತವಾಗಿ ಇರುವುದಕ್ಕೆ ಸಾಧ್ಯವಿಲ್ಲ. ಕೆಲಸ ಕೂಡ ಸರಿಯಾಗಿ ಇರುವುದಿಲ್ಲ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಈ ಎಸ್. ಆರ್. ರೇಟ್ಸನ್ನು ರಿವೈಸ್ ಮಾಡಬೇಕಾದರೆ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡಿ ಅದನ್ನು ರಿವೈಸ್ ಮಾಡುವುದಕ್ಕೆ ವ್ಯವಸ್ಥೆ ಇರಬೇಕು. ಇವತ್ತು ನಮ್ಮ ರೋಡುಗಳಿಗಾಗಿ ಕೇಂದ್ರ ಸರ್ಕಾರದ ಸಹಾಯದಿಂದ ಅಂದರೆ ಸಿ. ಆರ್. ಎಫ್. — ನಿಂದ ಸಾಕಷ್ಟು ಹಣ ಬರುತ್ತಿದೆ. ಬಹಳ ಮುಖ್ಯವಾಗಿ ಈ ಶಿರಾ—ಬಾಣಾವರ ರಸ್ತೆಯನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಕಷ್ಟಪಟ್ಟು ಇದರಲ್ಲಿ ಸೇರಿಸಿಕೊಂಡಿದ್ದಾರೆ. ಇದಕ್ಕಾಗಿ ೧೭ ಲಕ್ಷ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಈ ಕೆಲಸ ಮೊದಲು ಅಗತ್ಯವಾಗಿ ಆಗಲೇ ಬೇಕಾಗಿರತಕ್ಕಂಥಾದ್ದು ಚಿಕ್ಕನಾಯಕನಹಳ್ಳಿಯಲ್ಲಿ. ಅಲ್ಲಿ ಎಷ್ಟು ತೊಂದರೆಯಾಗಿದೆ, ಮತ್ತು ಅಲ್ಲಿ ಎಷ್ಟು ರೋಡ್ ಆಗಿವೆ ಎಂಬುದು ನಮ್ಮ ಮಾನ್ಯ ಸಚಿವರಿಗೆ ಗೊತ್ತಿದೆ. ಆದಷ್ಟು ಬೇಗ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಬಹಳ ಮುಖ್ಯವಾಗಿ ನಾನು ಸಂತೋಷದಿಂದ ಹೇಳಬೇಕು ಎಂದರೆ ಆಡ್ಮಿನಿಸ್ಟ್ರೇಷನ್ ಅನ್ನು ಬಹಳಮಟ್ಟಿಗೆ ಟೈಟ್ ಮಾಡಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ೧೮ ತಿಂಗಳಲ್ಲಿ ಕೆಲವೊಂದು ಸಾಧನೆಗಳನ್ನು ಖಂಡಿತವಾಗಿಯೂ ಮಾಡಿದ್ದಾರೆ. ಅದೂ ಕೂಡ ಈ ಪಿ. ಡಬ್ಲ್ಯು.ಡಿ. ಇಲಾಖೆಗೆ ಇಂತಹ ಒಂದು ಆಡಳಿತ ಬೇಕೇ ಆಗಿತ್ತು. ಅದು ಅನಿವಾರ್ಯವಾಗಿತ್ತು. ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಇಂಜಿನಿಯರ್‌ಗಳಿಗೆ ಎಂತಹ ಹೆಸರು ಇದೆ ಎಂದರೆ ಶ್ರೀ ವಿಶ್ವೇಶ್ವರಯ್ಯನವರು ಹುಟ್ಟಿದಂಥ ಈ ನಾಡಿನಲ್ಲಿ ನಮ್ಮ ಇಂಜಿನಿಯರ್‌ಗಳಿಗೆ ಹೆಸರು ಎಲ್ಲಿದೆ ಎಂದರೆ ಗಗನದಲ್ಲಿ ಇದೆ. ಅಂತಹ ಇಂಜಿನಿಯರ್ಸ್ ಇದ್ದಾರೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆದರೆ ಇವೊತ್ತು ಬೇಕಾದಷ್ಟು ಜನ ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಹೇಳಿದರು. ಅಂತಹ ಜಾತಿಯವರನ್ನು ಸಸ್ಪೆಂಡ್ ಮಾಡಿದ್ದಾರೆ. ಇಂತಹ ಜಾತಿಯವರನ್ನು ಸಸ್ಪೆಂಡ್ ಮಾಡಿದ್ದಾರೆ ಎಂದು. ನಾನು ಹೇಳತಕ್ಕಂಥಾದ್ದು ಏನೆಂದರೆ ದುಡ್ಡು ಮಾಡತಕ್ಕಂಥ ಇಂಜಿನಿಯರ್ಸ್ ಯಾರೇ ಇರಲಿ ಅವರದೇ ಒಂದು ಜಾತಿ. ಅಂತಹವರಲ್ಲಿ ಬಹಳಷ್ಟು ಜನ ಇದ್ದಾರೆ. ನಿಮಗೆ ಗೊತ್ತಿಲ್ಲದೇ ಇರಬಹುದು. ನಿಮಗೆ ಗೊತ್ತಿಲ್ಲದೇ ಇದ್ದರೆ ನಾವು ಹೇಳುತ್ತೇವೆ. ಅವರನ್ನು ಕಂಡುಹಿಡಿದು ಆದಷ್ಟು ಬೇಗ ಅವರನ್ನು ಮನೆಗೆ ಕಳಿಸತಕ್ಕಂಥ

ವಿಪರ್ಯಾಸವನ್ನು ಮಾಡಿದರೆ ಈ ಒಂದು ಸ್ಥಿತಿ ಉತ್ತಮವಾಗುತ್ತದೆ. ಇವತ್ತು ಸರ್ಕಾರದ ಕಾರ್ಯಕ್ರಮಗಳಲ್ಲಿ ಬಹಳಷ್ಟು ಬಿಗಿ ಬಂದಿದೆ. ಒಳ್ಳೆಯ ಕೆಲಸಗಳೂ ಆಗುತ್ತಿವೆ. ಇವತ್ತಿನ ದಿವಸ ಇದಕ್ಕೆ ಕೊಡತಕ್ಕಂಥ ಹಣದಲ್ಲಿ ಶೇಕಡ ೭೦ ಭಾಗವಾದರೂ ವಿನಿಯೋಗವಾಗುತ್ತದೆ. ಆದರೆ ಇದರಲ್ಲಿ ಶೇಕಡ ೩೦ ಭಾಗ ಏನು ಸೋರಿ ಹೋಗುತ್ತಿದೆ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಈ ಬಗ್ಗೆ ಪ್ಲಾನ್ ಮಾಡತಕ್ಕಂಥವರು ಅದನ್ನೆಲ್ಲಾ ಸೇರಿಸಿಕೊಂಡು ಮಾಡಿರುತ್ತಾರೆ. ಈ ವಿಚಾರದಲ್ಲಿ ನೀವು ಹೆಚ್ಚಿನ ಬಿಗಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ. ಈ ಇರಿಗೇಷನ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಈ ಮೇಜರ್ ಮತ್ತು ಮೀಡಿಯಂ ಇರಿಗೇಷನ್‌ನಲ್ಲಿ ಸಾಕಷ್ಟು ಪ್ರಾಜೆಕ್ಟ್‌ಗಳನ್ನು ನೀವು ತೆಗೆದುಕೊಂಡಿದ್ದೀರಿ. ಇದರಿಂದ ನನಗೆ ಬಹಳ ಸಂತೋಷವಾಗುತ್ತಿದೆ. ಇದರಲ್ಲಿ ಇನ್ನೂ ಒಳ್ಳೆಯ ಕೆಲಸಗಳನ್ನು ನೀವು ಮಾಡಬೇಕಾಗಿದೆ. ಕರ್ನಾಟಕ ರಾಜ್ಯದ ಎಲ್ಲಾ ಪ್ರಾಂತ್ಯಗಳಲ್ಲೂ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಈ ಇರಿಗೇಷನ್ ಫೆಸಿಲಿಟೀಸನ್ನು ಮಾಡಬೇಕೆನ್ನುವ ದೃಷ್ಟಿಯಿಂದ ಇದನ್ನೆಲ್ಲಾ ಮಾಡಿದ್ದೀರಿ. ಈ ಎಲ್ಲಾ ಯೋಜನೆಗಳನ್ನು ಒಂದೇ ಸಾರಿ ತೆಗೆದುಕೊಂಡಿರುವುದರಿಂದ ಇವತ್ತು ಎಲ್ಲಕ್ಕೂ ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ನಿಮ್ಮ ಅಂದಾಜು ಇರತಕ್ಕಂಥಾದ್ದು ಸುಮಾರು ೫೫ ಲಕ್ಷ ಎಕರೆಗೆ ನೀರು ಒದಗಿಸಬೇಕು ಎನ್ನತಕ್ಕಂಥಾದ್ದು. ಇದರಲ್ಲಿ ನೀವು ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ಕೂಡ ಇಲ್ಲಿಯ ವರೆಗೆ ಸಾಧನೆ ಮಾಡಿರತಕ್ಕಂಥಾದ್ದು ಕೇವಲ ೨೧ ಪರ್ಸೆಂಟ್ ಮಾತ್ರ. ನಮ್ಮ ನಿರೀಕ್ಷೆಯನ್ನು ಮೀರಿ ಕೆಲಸ ಸಾಧನೆಯಾಗಿಲ್ಲ. ಇನ್ನೂ ಮಾಡಬೇಕಾದಂಥಾದ್ದು ಬೇಕಾದಷ್ಟು ಇದೆ. ಇದನ್ನು ಪೂರ್ಣ ಮಾಡತಕ್ಕಂಥಾದ್ದು ಯಾವಾಗ? ಇದನ್ನು ಮಾಡಿದನಂತರ ಮಾಡಬೇಕಾದದ್ದು ಇನ್ನೂ ಇರುವುದರಿಂದ ಅದನ್ನೆಲ್ಲಾ ಯಾವಾಗ ಮಾಡುತ್ತೀರಿ ಎಂದು ನಿಮಗೆ ನಾನು ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಈ ಇಲಾಖೆಗೆ ಸಂಬಂಧಪಟ್ಟಂತೆ ೫ ಜನ ಮಂತ್ರಿಗಳು ಇದ್ದಾರೆ. ಅವರೆಲ್ಲರೂ ಕುಳಿತು ಯೋಚನೆ ಮಾಡಿ ಏನಾದರೂ ಒಂದು ಪರಿಹಾರವನ್ನು ಕಂಡು ಹಿಡಿಯದಿದ್ದರೆ ನಾವು ನಿರೀಕ್ಷಿಸಿದಮಟ್ಟದಲ್ಲಿ ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದವರ ಸಹಾಯದಿಂದಾದಗಲೀ ಅಥವಾ ವರ್ಲ್ಡ್ ಬ್ಯಾಂಕ್‌ನ ಸಹಾಯದಿಂದಾಗಲೀ ಆದಷ್ಟು ಬೇಗ ಇದನ್ನು ಪೂರ್ಣ ಮಾಡಬೇಕು. ಇವತ್ತು ನಮ್ಮ ಕಡೆ ಒಂದು ಡ್ಯಾಮ್ ಕಟ್ಟಿದ್ದೀರಿ. ಅದರಲ್ಲಿ ನೀರು ಇದೆ. ಆದರೆ ಅದನ್ನು ಉಪಯೋಗ ಮಾಡುವುದಕ್ಕೆ ಚಾನಲ್ ಇಲ್ಲ. ಇದು ಯಾರದೋ ಸಮಾಧಾನಕ್ಕೆ ಡ್ಯಾಮ್ ಇರತಕ್ಕಂಥಾದ್ದಲ್ಲ. ಅದನ್ನು ಕಟ್ಟಿದ ಮೇಲೆ ಅದರ ಪ್ರಯೋಜನ ಜನರಿಗೆ ಆಗಬೇಕು. ಇವತ್ತು ಡ್ಯಾಮ್ ಕಟ್ಟುವುದಕ್ಕೆ ಉಪಯೋಗಿಸಿದಂಥ ಹಣವೆಲ್ಲಾ ವೇಸ್ಟ್ ಎನ್ನತಕ್ಕಂಥ ರೀತಿಯಲ್ಲಿ ಆಗಿದೆ. ನೀವು ಬಹಳ ಪ್ರಭಾವಯುತರಾದ ಮಂತ್ರಿಗಳಾಗಿದ್ದೀರಿ. ಕೇಂದ್ರ ಸರ್ಕಾರದ ಜೊತೆಯಲ್ಲಿ ನಮ್ಮ ರಾಜ್ಯ ಸರ್ಕಾರದ ನಿಕಟ ಸಂಪರ್ಕ ಇದೆ. ಇದನ್ನು ಉಪಯೋಗಿಸಿಕೊಂಡು ಇದಕ್ಕೆ ಏನಾದರೂ ಒಂದು ಸೂಕ್ತವಾದ ಪರಿಹಾರವನ್ನು ಕಂಡು ಹಿಡಿಯದೇ ಹೋದರೆ ನಿಜವಾಗಿಯೂ ಕೂಡ ನಮ್ಮ ಕರ್ನಾಟಕ ರಾಜ್ಯಕ್ಕೆ ಆಪತ್ತು ಬರುತ್ತದೆ. ಆಮೇಲೆ ಕೇಂದ್ರದವರಿಂದ ಮತ್ತು ವರ್ಲ್ಡ್ ಬ್ಯಾಂಕಿನಿಂದ ತಂದಿರತಕ್ಕಂಥ ಹಣಕ್ಕೆ ಬಡ್ಡಿ ಕಟ್ಟುವುದು ಕಷ್ಟವಾಗುತ್ತದೆ. ಇದನ್ನು ನೀವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇವತ್ತು ನೀವು ಅನೇಕ ಪ್ರಾಜೆಕ್ಟ್‌ಗಳನ್ನು ಮಾಡಬೇಕಾಗಿದೆ. ಇದನ್ನೆಲ್ಲಾ ಮಾಡಬೇಕಾದ ಹುರುಬರಿಯಲ್ಲಿ ಇವತ್ತು ಕ್ವಾಲಿಟಿಯನ್ನು ಕೆಡಿಸಿಬಿಟ್ಟಿದ್ದೀರಿ, ಒಂದು ಉದಾಹರಣೆಗೆ ಹೇಳಬೇಕಾದರೆ ಇವತ್ತು ಭದ್ರಾ ಆಣೆಕಟ್ಟು ಒಡೆದು ಹೋಗತಕ್ಕಂಥ ಪರಿಸ್ಥಿತಿಯಲ್ಲಿದೆ. ನೀವು ಬರೇ ಕ್ವಾನ್ಟಿಟಿಯನ್ನು ನೋಡಿದರೆ ಆಗುವುದಿಲ್ಲ. ಕ್ವಾಲಿಟಿಯನ್ನು ನೋಡಬೇಕಾಗುತ್ತದೆ. ಈ ಕ್ವಾನ್ಟಿಟಿಯನ್ನು ಮತ್ತು ಕ್ವಾಲಿಟಿಯನ್ನು ನೋಡುವುದಕ್ಕೆ ಒಂದು ಕಂಟ್ರೋಲಿಂಗ್ ಡಿವಿಷನ್ ಅನ್ನು ನೀವು ಇಟ್ಟುಕೊಂಡಿದ್ದೀರಿ. ಅದು ಸಮರ್ಪಕವಾಗಿ ಕೆಲಸಮಾಡುತ್ತಾ ಇಲ್ಲ. ಆದ್ದರಿಂದ ನೀವು ಕ್ವಾಲಿಟಿಯ ಕಡೆಗೆ ಗಮನಹರಿಸುತ್ತಾ ಇಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗುತ್ತದೆ. ಏಕೆಂದರೆ ಅದೆಲ್ಲಾ ನಮ್ಮ ಕಣ್ಣಿನ ಎದುರಿಗೇ ಇದೆ. ಇವತ್ತು ಅದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಿರತಕ್ಕಂಥಾದ್ದು ಇದೆ. ಮತ್ತು ಆ ಡ್ಯಾಮ್‌ನ ಪರಿಸ್ಥಿತಿ ಏನಾಗಿದೆ ಎಂಬುದೂ ಗೊತ್ತಿದೆ. ಅದರಲ್ಲಿ ಇವತ್ತು ಏನಾದರೂ ಹೆಚ್ಚು ಕಡಿಮೆಯಾದರೆ ಅದಕ್ಕೆ ಜವಾಬ್ದಾರರು ಯಾರು? ನನಗನ್ನಿಸುತ್ತದೆ. ಇಂಜಿಯರ್ಸ್ಸೇ ಅದಕ್ಕೆ ಜವಾಬ್ದಾರರಾಗಬೇಕಾಗುತ್ತದೆ. ಏಕೆಂದರೆ ಕೇವಲ ಅದು ೧೫-೨೦ ವರ್ಷಗಳಲ್ಲಿ ಕಟ್ಟಿರತಕ್ಕಂಥ ಡ್ಯಾಮ್. ಅದರ ಬಗ್ಗೆ ತಾವು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ ಎಂದು ಹೇಳುತ್ತೇನೆ. ಆಮೇಲೆ ನನ್ನ ಕ್ಷೇತ್ರದಲ್ಲಿ ಒಂದು ಕೆರೆ ಒಡೆದುಹೋಯಿತು. ಅದು ಸುಮಾರು ೫೦೦-೬೦೦ ವರ್ಷಗಳ

ಹಿಂದೆ ಕಟ್ಟಿದಂಥ ಕೆರೆ. ಅದು ಒಡೆದು ಹೋಗುವುದಕ್ಕೆ ಯಾವ ಇಂಜಿನಿಯರ್ಸ್ ಆಗಲೀ ಯಾರೇ ಆಗಲೀ ಕಾರಣಕರ್ತರು. ಆ ಕೆರೆಯ ಒದುವೀಕೆ ಆಗಿರತಕ್ಕಂಥಾದ್ದೇ ಅದಕ್ಕೆ ಕಾರಣ. ಆ ಕೆರೆ ಒಡೆದುಹೋದ ತಕ್ಷಣ ಮಾರನೇ ದಿವಸವೇ ಅಲ್ಲಿ ದುರಸ್ತು ಕೆಲಸವನ್ನು ಪ್ರಾರಂಭ ಮಾಡಿದರು ನಮ್ಮ ಸರ್ಕಾರದವರು. ಮಾನ್ಯ ಮುಖ್ಯಮಂತ್ರಿಯವರೂ ಸಹ ಆ ಸ್ಥಳಕ್ಕೆ ಬಂದಿದ್ದರು. ಮತ್ತು ಮಾನ್ಯ ಇರಿಗೇಷನ್ ಮಿನಿಸ್ಟರ್ ಮತ್ತು ಆಗತಾನೇ ಈ ಪಿ. ಡಬ್ಲ್ಯೂ. ಡಿ. ಇಲಾಖೆಯ ಚಾರ್ಜನ್ನು ಹೊಸದಾಗಿ ವಹಿಸಿಕೊಂಡಿದ್ದ ಮಾನ್ಯ ಪಿ. ಡಬ್ಲ್ಯೂ. ಡಿ ಮಂತ್ರಿಯವರೂ ಬಂದು ನೋಡಿ ನಿಗದಿಪಡಿಸಿದ್ದಂಥ ಅವಧಿಗೆ ಮುಂಚಿತವಾಗಿಯೇ ಬೇಗನೇ ಆ ಕೆಲಸವನ್ನು ಮುಗಿಸಿದ್ದಾರೆ. ಅದಕ್ಕೋಸ್ಕರ ಅವರು ಮಾಡಿದಂಥ ಎಲ್ಲಾ ಸಹಾಯಕ್ಕೆ ಮತ್ತು ಅಧಿಕಾರಿಗಳು ಮಾಡಿದಂಥ ಸಹಾಯಕ್ಕೆ, ಅವರೆಲ್ಲರಿಗೂ ನಾನು ವಂದನೆಗಳನ್ನು ಸಲ್ಲಿಸುತ್ತೇನೆ. ನೀವು ಕಳ್ಳಂಬೆಳ್ಳದ ಕೆರೆಯನ್ನು ಕಟ್ಟಿಸಿಕೊಟ್ಟು ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದೀರಿ. ಆದರೆ ನಮ್ಮ ಊರಿನ ಪಕ್ಕದಲ್ಲೇ ಇರತಕ್ಕಂಥ ಗುಂಟೇನಹಳ್ಳಿಗೆ ಅನ್ಯಾಯ ಮಾಡಿದ್ದೀರಿ, ಅಲ್ಲಿ ಕೆರೆ ಕೋಡಿ ಆಗುವುದಕ್ಕೆ ನಾವು ಸಾಕಷ್ಟು ಸಾರಿ ಒದ್ದಾಡಬೇಕಾಯಿತು, ಆಮೇಲೆ ನೀವು ಕೋಡಿ ಮಾಡದ್ದೀರಿ. ಅಲ್ಲಿಗೆ ಪಿ. ಡಬ್ಲ್ಯೂ. ಡಿ. ಮಿನಿಸ್ಟರನ್ನು ಕರೆದುಕೊಂಡು ಹೋಗಬೇಕು ಎಂದು ನಾನು ಪ್ರಯತ್ನಪಟ್ಟೆ. ಹೋಗುಹೊತ್ತಿಗೆ ಕತ್ತಲಾಯಿತು. ಈ ವಿಧಾನಸಭೆಯಲ್ಲಿ ಈ ಬಗ್ಗೆ ಕೊಶ್ಚನ್ ಹಾಕಿ ಅಲ್ಲಿ ಕೋಡಿ ಆಗಬೇಕು ಎಂದು ಗಲಾಟೆ ಮಾಡಿದ ಮೇಲೆ ನಮ್ಮ ನಿರ್ಬಂದಕ್ಕೆ ನೀವು ಅದನ್ನು ಮಾಡಿದಿರಿ. ಆದರೆ ಅಡಿಯಲ್ಲಿ ಪೂರ್ತಿಯಾಗಿ ನೀರು ಹೋಗುವುದಕ್ಕೆ ಪ್ರಾರಂಭವಾಯಿತು. ನಾನು ಸಂಬಂಧಪಟ್ಟಂಥ ಇಂಜಿನಿಯರ್‌ಗಳಿಗೆ ಕಂಪ್ಲೈಂಟ್ ಮಾಡಿದೆ. ಕಂಟ್ರೋಲ್ ಡಿವಿಷನ್‌ನ ಇಂಜಿನಿಯರ್‌ಗಳು ಬಂದು ನೋಡಿ ಕೆಲಸ ಮಾಡಿಸಿದ್ದಾರೆ. ಅಲ್ಲಿ ಸಿಮೆಂಟ್ ಉಪಯೋಗಿಸುವ ಬದಲು 'ಬಂಡಿ ಮಣ್ಣು ಹಾಕಿದ್ದಾರೆ. ಅದು ಇನ್ನೂ ಸರಿಹೋಗಿಲ್ಲ. ಮತ್ತೆ ಅವರಿಗೆ ಹೇಳಿದಮೇಲೆ, 'ಅದನ್ನು ರಿಪೇರಿ ಮಾಡಿಸುತ್ತೇವೆ.' ಎಂದು ಅವರು ಹೇಳಿದ್ದಾರೆ. ಅದಕ್ಕಾಗಿ ನಾನುಕಾದು ನೋಡುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಸಲಹೆ ಮಾಡುವುದು ಏನೆಂದರೆ ಇವತ್ತು ನೀವು ಈ ಮೈನರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಈ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಾಗ ಅದನ್ನು ಕಂಪ್ಲೀಟ್ ಮಾಡಬೇಕಾದರೆ ೨೦-೩೦ ವರ್ಷಗಳಾಗುತ್ತದೆ. ಇದಕ್ಕೆಲ್ಲಾ ಹಣಕಾಸಿನ ತೊಂದರೆಯೇ ಕಾರಣ ಎಂದು ಮಾನ್ಯ ಮಂತ್ರಿಯವರು ಹೇಳುತ್ತಾರೆ. ಇದಕ್ಕೆಲ್ಲಾ ಹಣವನ್ನು ಒದಗಿಸುವುದಕ್ಕೆ ಡಿ. ಪಿ. ಎಫ್. ಇದೆ. ನಮ್ಮ ಕ್ಷೇತ್ರದ ೩ ತಾಲ್ಲೂಕುಗಳಿಗೆ ಡಿ. ಪಿ. ಎಫ್. ನಿಂದ ಹಣವನ್ನು ಕೊಟ್ಟಿರತಕ್ಕಂಥಾದ್ದು ಇದೆ. ಇದಕ್ಕೆ ಕೊಡತಕ್ಕಂಥ ಹಣವನ್ನು ಇನ್ನೂ ಹೆಚ್ಚು ಮಾಡಬೇಕು. ಈ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಈ ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಇದು ಎಷ್ಟು ಅವಶ್ಯಕ ಎಂದರೆ ಒಬ್ಬ ಮನುಷ್ಯನಿಗೆ ಗಾಳಿ, ನೀರು, ನೆರಳು ಎಷ್ಟು ಅಗತ್ಯವೋ ಅದಕ್ಕಿಂತ ಇದರ ಅಗತ್ಯವಿದೆ. ನಮ್ಮ ರಾಜ್ಯದ ಪ್ರಗತಿಯನ್ನು ಸಾಧಿಸಬೇಕಾದರೆ ವಿದ್ಯುಚ್ಛಕ್ತಿಯ ಉತ್ಪಾದನೆ ಅಷ್ಟೇ ಮುಖ್ಯ. ಇವತ್ತು ಈ ವಿದ್ಯುಚ್ಛಕ್ತಿಯ ಉತ್ಪಾದನೆ ಯಾವ ಮಟ್ಟಕ್ಕೆ ಇದೆ ಎಂದರೆ ಮಳೆ ಬಂದರೆ ಎಲೆಕ್ಟ್ರಿಸಿಟಿ ಉಂಟು, ಇಲ್ಲದೇ ಹೋದರೆ ಇಲ್ಲ. ನಾನು ಬುದ್ಧಿ ಕಂಡಾಗಿನಿಂದ ನೋಡುತ್ತಿದ್ದೇನೆ. ೮-೧೦ ವರ್ಷಗಳಿಂದ ಕೂಡ ನಮ್ಮ ರಾಜ್ಯದಲ್ಲಿ ಸಕಾಲದಲ್ಲಿ ಯಾವತ್ತೂ ಮಳೆ ಬಂದದ್ದು ಇಲ್ಲ. ನಿಮ್ಮ ಒಂದು ಅಂದಾಜಿನ ಪ್ರಕಾರ ನೋಡುವುದಾದರೆ ನಮ್ಮ ರಾಜ್ಯಕ್ಕೆ ಅಗತ್ಯವಾಗಿ ಪ್ರತಿ ವರ್ಷ ೯ ಸಾವಿರ ಚಿಲ್ಲರೆ ಮೆಗಾವಾಟ್ ಯೂನಿಟ್ಸ್ ಎಲೆಕ್ಟ್ರಿಸಿಟಿ ಬೇಕು.

೪-೦೦ ಪಿ.ಎಂ.

ಯಾವುದೇ ಒಂದು ಸಮಸ್ಯೆಯು ದಿನಕಳೆದಂತೆ ಜಾಸ್ತಿಯಾಗುತ್ತಾ ಹೋಗುತ್ತದೆ. ಮತ್ತು ದಿನಕಳೆದಂತೆಲ್ಲಾ ಜನಸಂಖ್ಯೆಯು ಸಹಾ ಜಾಸ್ತಿಯಾಗುತ್ತಾ ಹೋಗುತ್ತದೆ. ಹಾಗೆಯೇ ನಿರುದ್ಯೋಗ ಸಮಸ್ಯೆಯೂ ಕೂಡ ಜಾಸ್ತಿಯಾಗುತ್ತದೆ. ಈಗ ನಾವು ಕೈಗಾರಿಕೆಯ ಅಭಿವೃದ್ಧಿಯನ್ನು ಮಾಡಬೇಕಾದರೆ ವಿದ್ಯುಚ್ಛಕ್ತಿ ಬೇಕಾಗುತ್ತದೆ. ವಿದುಚ್ಛಕ್ತಿ ಇಲ್ಲದೆ ಯಾವ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ರಾಯಚೂರಿನಲ್ಲಿ ಒಂದು ಥರ್ಮಲ್ ಪ್ರಾಜೆಕ್ಟನ್ನು ಸ್ಥಾಪನೆ ಮಾಡಬೇಕೆನ್ನುವ ಉದ್ದೇಶ ಇದೆ. ಈ ಹೈಪವರ್ ವಿದ್ಯುಚ್ಛಕ್ತಿಯ ಒಂದು ಯೋಜನೆಯನ್ನು ರಾಯಚೂರಿನಲ್ಲಿ ಸ್ಥಾಪನೆ ಮಾಡಿದರೆ ಅನ್ನು

ಕೂಲವಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಥರ್ಮಲ್ ಪ್ರಾಜೆಕ್ಟ್‌ನ್ನು ಮತ್ತು ಹೈಡ್ರೋ ಎಲೆಕ್ಟ್ರಿಕ್ ಇವೆರಡನ್ನೂ ನಂಬಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಒಂದು ಅಟಾಮಿಕ್ ಯೋಜನೆಯನ್ನು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತೆ ಹೊರದೇಶಗಳಲ್ಲಿರತಕ್ಕಂತಹ ಇಂಜನೀಯರ್‌ಗಳನ್ನು ಮತ್ತು ಅನುಭವವುಳ್ಳ ಇಂಜಿನಿಯರ್‌ಗಳನ್ನು ವಿಚಾರಿಸಿ ಅಮೇರಿಕಾ ದೇಶಗಳಲ್ಲಿ ಹೈಡ್ರೋ ಎಲೆಕ್ಟ್ರಿಕ್‌ನಿಂದ ನೀರನ್ನು ಪಂಪ್ ಮಾಡಿ ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳುವ ಒಂದು ಯೋಜನೆಯನ್ನು ಮಾಡಿದ್ದಾರೆ. ಆ ರೀತಿಯಾಗಿ ತಾವು ಸರಿಯಾದಂತಹ ತಜ್ಞರನ್ನು ವಿಚಾರಿಸಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಮತ್ತು ನಮ್ಮ ರಾಜ್ಯದಲ್ಲಿರುವ ಶರಾವತಿ ಮತ್ತು ಕಾಳಿನದಿ ಇವೆರಡನ್ನೂ ಸರಿಯಾಗಿ ಉಪಯೋಗಿಸಿಕೊಂಡು ಬಂದಂತಹ ನೀರನ್ನು ಪರಿಪೂರ್ಣವಾಗಿ ಉಪಯೋಗಿಸಿಕೊಂಡು ವಿದ್ಯುತ್ ಉತ್ಪತ್ತಿ ಮಾಡಿದರೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ನಿಲುವು ಏನು ಎಂಬುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ಮಾತ್ರ ಬೆಳಕು ಕಾಣುತ್ತದೆ. ಆದರೆ ನಾವು ಎಂದಾದರೂ ಹಳ್ಳಿಗಳಿಗೆ ಹೋದರೆ ಬೆಳಕು ಗೊತ್ತಾಗುವುದಿಲ್ಲ. ಇದರಿಂದ ಬಹಳ ಕಷ್ಟವಾಗುತ್ತದೆ. ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲದೆ ಬಲ್ಬ್‌ಗಳು ಹತ್ತುವುದಿಲ್ಲ. ಇದನ್ನು ಹೋಗಲಾಡಿಸಬೇಕಾದರೆ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಒಂದು ಯೋಜನೆಯನ್ನು ಮಾಡದ ಹೊರತು ಬಹಳ ಕಷ್ಟವಾಗುತ್ತದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಇನ್ನು ಡಿಪಿಎಪಿ ಮತ್ತು ಮೈನರ್ ಇರಿಗೇಷನ್ ಯೋಜನೆಯನ್ನು ವ್ಯವಸ್ಥಿತವಾಗಿ ಮಾಡಬೇಕಾಗುತ್ತದೆ. ಈ ಮೈನರ್ ಇರಿಗೇಷನ್ ತಾಲೂಕು ಬೋರ್ಡ್‌ಗೆ ೧೦ ಮೈಲಿ ಒಳಗಿರತಕ್ಕಂತಹ ತಾಲೂಕು ಬೋರ್ಡ್‌ಗಳಿಗೆ ಗ್ರಾಂಟ್ ಕೊಡುವುದಿಲ್ಲ. ಇದರಿಂದ ಅವರು ಇಂತಹಮೈನರ್ ಇರಿಗೇಷನ್ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಎಲ್ಲಾ ತಾಲೂಕು ಬೋರ್ಡ್‌ಗಳಿಗೂ ಹೆಚ್ಚಿನ ಹಣವನ್ನು ಒದಗಿಸಿ ಹೆಚ್ಚು ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಕೇಂದ್ರಸರ್ಕಾರದಿಂದ ಇಂತಹ ಯೋಜನೆಗಳಿಗೆ ಧನಸಹಾಯ ಪಡೆಯುವ ಯೋಜನೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಅಂಡರ್‌ಗ್ರೌಂಡ್ ವಾಟರ್ ಸಪ್ಲೆ ಅಧಿಕವಾಗಿ ಇವೆ. ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ತುಮಕೂರು ಮತ್ತು ಚಿತ್ರದುರ್ಗದಲ್ಲಿ ಅಂಡರ್‌ಗ್ರೌಂಡ್ ವಾಟರ್ ಯೋಜನೆಗಳು ಇವೆ, ಇವುಗಳನ್ನು ಪೂರ್ಣ ಮಾಡಬೇಕಾದರೆ ಲಿಫ್ಟ್ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಪ್ರಾರಂಭ ಮಾಡಬೇಕೆಂದು ನಾನು ಸೂಚಿಸುತ್ತೇನೆ. ಇನ್ನು ನಮಗೆ ವರಪ್ರಸಾದವಾಗಿರುವ ತುಂಗಭದ್ರಾ ಅಪ್ಪರ್ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ನಾವು ಅನೇಕ ಸಾರಿ ಮನವಿಯನ್ನು ಸಲ್ಲಿಸಿದ್ದೇವೆ, ಶ್ರೀಮತಿ ಇಂದಿರಾಗಾಂಧಿಯವರಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಮನವಿಯನ್ನು ಸಲ್ಲಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಯೋಜನೆಯ ಬಡ್ಜೆಟ್‌ನಲ್ಲಿಯಾದರೂ ೧೦ ಕೋಟಿ ರೂಪಾಯಿಗಳ ಹಣವನ್ನು ಒದಗಿಸಿಕೊಂಡು ಆದಷ್ಟು ಬೇಗ ಈ ಯೋಜನೆಯನ್ನು ಪೂರ್ಣಗೊಳಿಸುತ್ತಾರೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮತ್ತು ಮೈನರ್ ಇರಿಗೇಷನ್ ಮತ್ತು ಲಿಫ್ಟ್ ಇರಿಗೇಷನ್ ಬಗೆ ಮಾನ್ಯ ಮಂತ್ರಿಗಳ ನಿಲುವು ಏನು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri M. H. BEKINALKAR (Sindgi)—Mr. Deputy Speaker Sir, I welcome the Demands placed by the Hon'ble Minister for Public Works, Hon'ble Minister for Minor Irrigation and other Hon'ble Ministers.

At the outset, I must thank the Minister for showing extraordinary calibre, which was never done in the States or in the country. All these days only the clerks of PWD, Shirestedars, Tahsildars and Dy. Tahsildars were being arrested under Anti-Sorruption Act. Now big officials have been caught. This is a lesson to other departments and a lesson to the other States. In no democratic set up such a bold step has been taken. I cannot, but appreciate the stand taken by the Government and this can go a long way in checking the corruption. It is really a shame on the part of such officers who allowed to misuse their paitions. One major project could have been finalised within their command. They have been able to a mass such huge amounts, and the Government has shown that such people are also living in the society. With these remarks, I now come to give a few suggestions to the Government.

Sir, we want to plant trees all along the roads and we thought of planting trees on a war-footing. But when I discussed with the officers, they said no fund is provided for this and to plant a single tree they would require Rs. 10. Without giving that money, I am sorry to say, this programme cannot be carried out. So, I request the Hon'ble Minister to see that some money is provided to plant trees.

Sir, in my own taluk, the meetings to review the progress made under, 20 Point Programme, we hon. discussed this and on pressure they have been able to plant trees. The trees that have been now planted are useless. I do not know how the forest department is helpful in supplying these saplings. Some local trees like Neem, Mango and Tamrind can be of more use to the poor people in the villages. These saplings are being provided by the Forest Department. I hope the Hon'ble Minister will request the Forest Minister to supply these saplings only so that they can be of some use. For example, the Neem seeds are being used in some industries. There are two such industries in my own constituency. A boy of 9 or 10 years, age earns about Rs. 2 or 3 every day by collecting the seeds on the road side. Therefore, I request that these local trees may

be planted all along the roads, on Nala beds and on tank beds and also wherever open space belonging to Government is available, these trees may be planted.

Sir, when I saw the performance budget of the year I found that only few works which are on going works, have been shown in the budget. No fresh works have been included. All Members of the Legislative Assembly including myself were asked by the Hon'ble Minister to furnish the list of our constituencies so that one bridge and a road could be provided. Sir, according to my knowledge, all the hon. members have submitted that. But to speak of my district, out of 11 talukas only 4 talukas have been shown, some work in the budget and remaining 7 taluks are not all shown. Such a budgetary provision is being made and this is a new feature of this year. I hope, such a lacuna will not be there in future and the Hon'ble Minister will see that atleast in the supplementary budget funds are provided. When there is no budgetary provision I don't know how a supplementary budget could be provided for this purpose. Even then, I request the Hon'ble Minister to see that all the constituencies in the State are provided with certain works as per his promise outside the House.

Sri V. B. BHAVI—Sir, new works are included in the budget. But they have not yet been finalised.

Sri M. H. BEKINALKAR—That is what I am told and that is why I am again requesting you to include some works because it has not appeared in the budget. I am not sure of this in the supplementary budget also. So, I again request the Hon'ble Minister to see that atleast it does not escape the attention of the Government while preparing the supplementary budget because some important works are not shown in the Budget. That is why I call it a novel feature and I have never seen such a feature in the budget. Therefore, I request the Hon'ble Minister to give proper attention to this aspect of the matter.

Sir, so far as minor irrigation is concerned, I went through the budget and the provisions made thereunder. There are only three talukas in the whole Sindagi taluk. In our there is much scope for investigation but Department has not done it. Therefore, I request the Hon'ble Minister to look into the matter and see that all the works are investigated properly and works are taken up early. Sir, so far as major irrigation is concerned, I have only one point to say. Twenty-one years back, when perhaps our Hon'ble Minister was not born, a project was started in the district but till today it has not seen the light of the day. Let the Hon'ble Minister assure in this House that it will be completed within 10 years, 15 years or 20 years because we are telling the public on public platforms that we are going to provide water for 2 lakh acres of land and so much of land would come under irrigation etc. By not completing the works that were already taken up, all our promises fall flat and again in the next election also we will go on repeating the same. It is not fair on our part to do so. There is a limit to the patience of the public also. Therefore, I urge upon the Hon'ble Minister to sit at Delhi and use his good offices and ask the Central Government to provide more funds for completion of the Upper Krishna Project early.

Sir, regarding Bagalkot, I have discussed this issue with my colleagues and they all opined that the report of Sri Balekundarigi may be accepted by the Government. Sir, after all it is a technical matter and the technical experts have given their verdict. So, it may be accepted that way and Bagalkot may be saved.

Lastly, I would like to say one point. Our Hon'ble Minister has promised that all labourers will be made permanent. I suggest that all labourers who have put in 15 years, 10 years, and 5 years of service should be made permanent. I hope the Hon'ble Minister will examine this issue and issue orders accordingly. With these words I conclude my speech and thank the Chair for giving me an apportunity to speak.

ಶ್ರೀ ಎಚ್.ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೇ, ನಾನು ಈ ಮೇಜರ್ ಇರಿಗೇಷನ್ ಇಲಾಖೆಯ ಮೇಲೆ ಮಾತನಾಡುವುದಕ್ಕೆ ಮುಂಚೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಅದೇನೆಂದರೆ ನಮಗೆ ಒದಗಿಸಿರುವ ಪರ್‌ಫಾರ್ಮನ್ಸ್ ಬಡ್ಜೆಟ್‌ನಲ್ಲಿ ಪ್ರತಿಯೊಂದು ಪ್ರಾಜೆಕ್ಟ್ ಬಗ್ಗೆಯೂ ಗ್ರಾಸ್ ಮತ್ತು ನೆಟ್ ಎಂದು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಇಲ್ಲಿ ಹೇಮಾವತಿಗೆ ಸಂಬಂಧಪಟ್ಟಂತೆ ಗ್ರಾಸ್ ೧೬೬೫ ಲಕ್ಷ ಹಾಗೂ ನೆಟ್ ೧೧೪೨ ಲಕ್ಷ ಎಂದು ಹೇಳಿದ್ದಾರೆ. ನಾನು ಟೋಟಲ್ ಮಾಡಿಕೊಳ್ಳಬೇಕಾದರೆ ಇದಕ್ಕೆ ಪ್ರೊವೈಡ್ ಮಾಡಿರುವುದು ಯಾವುದು ಎಂದು ತಿಳಿಯದೆ ನಾನು ಮಾತನಾಡುವುದಾದರೂ ಸಹ ಹೇಗೆ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ತಾವು ಮಾತನಾಡಿ, ನಂತರ ನಾನು ವಿವರಗಳನ್ನು ಒದಗಿಸುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ಕಳೆದ ವರ್ಷವೂ ಸಹ ಸರ್ಕಾರದಿಂದ ಇದೇ ರೀತಿಯ ವಿವರಣೆ ಕೇಳಬೇಕಾಗಿ ಬಂತು. ಅದೇ ರೀತಿ ಈಗಲೂ ಕೇಳಬೇಕಾಗಿದೆ. ಆದರೆ ಮಾನ್ಯ ಮಂತ್ರಿಗಳಿಗೇ ಇದರ ವಿವರ ಗೊತ್ತಿಲ್ಲ ಅಂದರೆ ನಾವು ಏನು ಮಾತನಾಡಬೇಕು? ಅವರಿಗೆ ಗೊತ್ತಿಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಕೊಂಡು ಹೇಳಲಿ. ನಮಗೆ ಬೇಕಾದ ಮಾಹಿತಿಗಳನ್ನು ಒದಗಿಸದಿದ್ದರೆ ನಾವು ಇದರ ಬಗ್ಗೆ ಮಾತನಾಡುವುದಾದರೂ ಹೇಗೆ?

ಉಪಾಧ್ಯಕ್ಷರು.—ಅವರು ವಿವರಣೆ ಕೊಡುವವರೆಗೆ ಬೇರೆ ಡಿಮ್ಯಾಂಡ್‌ಗಳ ಮೇಲೆ ಮಾತನಾಡಿ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಆಗಬಹುದು. ಉತ್ತರಕನ್ನಡ ಜಿಲ್ಲೆಯಲ್ಲಿ ಒಂದು ಪವರ್ ಪ್ರಾಜೆಟ್‌ನ್ನು ಕೈಗೊಳ್ಳಬೇಕೇ ಅಥವಾ ಬಿಡಬೇಕೇ ಎಂಬ ವಿಚಾರದಲ್ಲಿ ಸರ್ಕಾರ ಒಂದು ಕಮಿಟಿಯನ್ನು ರಚನೆ ಮಾಡಿತು. ಈ ಕಮಿಟಿ ತನ್ನ ವರದಿ ಕೊಡುವುದಕ್ಕೆ ಮೊದಲೇ ಮೇಜರ್ ಇರಿಗೇಷನ್ ಅಡ್ವೈಜರಿ ಕಮಿಟಿ ಸಲಹೆಗಾರರೆಂದು ಸರ್ಕಾರದಿಂದ ತೀರ್ಮಾನವಾಗಿರುವವರು ಈ ವಿಚಾರದಲ್ಲಿ ತಮ್ಮ ಒಂದು ಅಭಿಪ್ರಾಯವನ್ನು ಪತ್ರಿಕೆಗಳ ಮೂಲಕ ಪ್ರಕಟಪಡಿಸಿದರು. ಅವರು ಆ ರೀತಿ ಮಾಡಿದ್ದು ಸರಿಯಲ್ಲ ಎಂಬ ವಿಚಾರದಲ್ಲಿ ಈ ಮನೆಯಲ್ಲಿ ಒಂದು ಗಮನ ಸೆಳೆಯುವ ಸೂಚನೆ ಸಹ ಬಂದು ಚರ್ಚೆ ಯಾಯಿತು. ಇದೇ ರೀತಿ ಕಾವೇರಿ ನದಿ ನೀರನ್ನು ಹಂಚಿಕೊಳ್ಳುವ ಬಗ್ಗೆ ನಮ್ಮ ಸರ್ಕಾರಕ್ಕೂ ಮತ್ತು ತಮಿಳುನಾಡು ಸರ್ಕಾರಕ್ಕೂ ಮಧ್ಯೆ ಇರುವಂತಹ ಒಂದು ವಿವಾದ ತೀರ್ಮಾನವಾಗುವುದಕ್ಕೆ ಮೊದಲೇ ನಮ್ಮ ಕರ್ನಾಟಕ ರಾಜ್ಯದವರು ಆರ್ಬಿಟ್ರೇಷನ್‌ಗೆ ಒಪ್ಪಿಕೊಳ್ಳುವುದಕ್ಕೆ ತಯಾರಿದ್ದಾರೆಂದು ಇದೇ ಮೇಜರ್ ಇರಿಗೇಷನ್ ಬೋರ್ಡಿನ ಸಲಹೆಗಾರರು ಒಂದು ಪತ್ರಿಕಾ ಹೇಳಿಕೆ ಕೊಟ್ಟರು. ನಂತರ ನಮ್ಮ ಪಕ್ಷದ ನಾಯಕರಾದ ಶ್ರೀಮಾನ್ ಬೊಮ್ಮಾಯಿ ಅವರು ಈ ಸದನ ನಡೆಯುತ್ತಿರುವಾಗ ಆ ಸಲಹೆ ಗಾರರಿಗೆ ಆ ರೀತಿಯಾಗಿ ಹೊರಗಡೆ ಹೇಳಿಕೆ ಕೊಡಲು ಅಧಿಕಾರವಿಲ್ಲ, ಮತ್ತು ಆ ರೀತಿ ಹೇಳಿಕೆ ಕೊಡು ವುದರಿಂದ ಕನ್‌ಟೆಂಪ್ಟ್ ಆಫ್ ದಿ ಹೌಸ್ ಆಗುತ್ತವೆಂದು ಹೇಳಿದ್ದಾರೆ. ಇದಕ್ಕೂ ಮೊದಲು ಇದೇ ವಿಚಾರದಲ್ಲಿ ತಮಿಳುನಾಡು ಸರ್ಕಾರದವರು ಕೋರ್ಟಿನಲ್ಲಿ ಕೇಸ್ ಹಾಕಿ ನಂತರ ವಾಪಸ್ ತೆಗೆದುಕೊಂಡರು ಇಂತಹ ಒಂದು ಸಂದರ್ಭದಲ್ಲಿ ನಮ್ಮ ಸರ್ಕಾರದ ನಿಲುವು ಯಾವ ರೀತಿ ಇರಬೇಕೆಂಬುದು ಈ ಮನೆಯಲ್ಲಿ ತೀರ್ಮಾನವಾಗಬೇಕಾಗುತ್ತದೆ ಇಲ್ಲವೇ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು. ಈ ಸದನ ಸೇರದೆ ಇದ್ದ ಕಾಲದಲ್ಲಿ ಬೇಕಾದರೆ ಸರ್ಕಾರದ ನಿಲುವೇನೆಂಬುದನ್ನು ಪತ್ರಿಕೆಗಳ ಮೂಲಕ ತಿಳಿಸಬಹುದು. ಆದರೆ ಈ ಸದನ ನಡೆಯುತ್ತಿರುವ ಕಾಲದಲ್ಲಿ ಸರ್ಕಾರದ ಒಬ್ಬ ಮಾನ್ಯ ಸಲಹೆಗಾರರು ಸರ್ಕಾರದ ನಿಲುವು ಈ ರೀತಿ ಇರುತ್ತದೆಂದು ಹೇಳತಕ್ಕದ್ದು ಈ ಸಭೆಗೆ ಅಗೌರವ ತೋರಿಸಿದಂತೆ ಆಗುತ್ತದೆ. ಈ ವಿಚಾರದಲ್ಲಿ ಆರ್ಬಿಟ್ರೇಷನ್‌ಗೆ ಒಪ್ಪಿಕೊಳ್ಳಬೇಕೇ ಅಥವಾ ಕೋರ್ಟಿಗೆ ಹೋಗಬೇಕೇ ಎಂಬುದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು ಇಲ್ಲದಿದ್ದರೆ ಈ ಸದನದ ಮುಂದೆ ಆ ವಿಚಾರ ಬಂದು ತೀರ್ಮಾನ ವಾಗಬೇಕು. ಇದನ್ನು ಬಿಟ್ಟು ಸರ್ಕಾರದಿಂದ ನೇಮಕವಾಗಿರುವ ಸಲಹೆಗಾರರೊಬ್ಬರು ತಮ್ಮ ಅಭಿಪ್ರಾಯ ಕೊಟ್ಟು, ಅದು ಸರ್ಕಾರದ ಅಭಿಪ್ರಾಯ ಎಂದು ಹೇಳುವುದು ಬಹಳ ಆಶ್ಚರ್ಯಕರವಾ ದಂಥ ಸಂಗತಿಯಾಗಿದೆ. ಇದನ್ನು ಸರ್ಕಾರ ತೀವ್ರಗತಿಯಿಂದ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಸಲಹೆ ಮಾಡುತ್ತಿದ್ದೇನೆ. ಉತ್ತರ ಕನ್ನಡ ಜಿಲ್ಲೆಯ ನೀರಾವರಿ ಪವರ್ ಪ್ರಾಜೆಕ್ಟ್ ವಿಚಾರದಲ್ಲಿ ಅವರ ಅಭಿಪ್ರಾಯವನ್ನು ಸೂಚನೆ ಮಾಡಿದಾಗ ನಮ್ಮಲ್ಲಿ ಆ ರೀತಿ ಅಭಿಪ್ರಾಯ ಕೊಡದೇ ಇರುವ ರೀತಿಯಲ್ಲಿ ನೋಡಿಕೊಳ್ಳುತ್ತೇವೆಂದು ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರೂ ಆ ಸಲಹೆಗಾರರು ಪುನಃ ಈ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸತಕ್ಕ ರೀತಿಯಲ್ಲಿ ಹೇಳಿಕೆ ಕೊಟ್ಟಿರತಕ್ಕ ಬಗ್ಗೆ ಸರ್ಕಾರ

ದವರು ತೀವ್ರವಾಗಿ ಪರಿಶೀಲನೆ ಮಾಡಿ ಇನ್ನು ಮುಂದೆ ಅವರು ಬಾಯಿ ಬಿಡುವುದನ್ನು ಬಿಡಿಸಬೇಕು ಎಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ದೇಶದ ಬೆನ್ನೆಲುಬು ರೈತ, ನಮಗೆ ಅನ್ನ ಕೊಡತಕ್ಕವನು ಎಂದು ಹೇಳುತ್ತಿದ್ದೇವೆ, ಆದರೆ ರೈತ ಚೆನ್ನಾಗಿ ಬೆಳೆಯಬೇಕಾದರೆ, ನೀರಾವರಿ ಆಗುವುದಕ್ಕೆ ಎಷ್ಟು ದುಡ್ಡನ್ನು ಪ್ರತಿ ವರ್ಷ ನಮ್ಮ ಬಜೆಟ್‌ನಲ್ಲಿ ಒದಗಿಸಬೇಕೋ ಅದಷ್ಟು ದುಡ್ಡನ್ನು ಒದಗಿಸಿಕೊಡುತ್ತಿದ್ದೇವೆಯೋ ಎಂದು ಸರ್ಕಾರದವರು ಯೋಚನೆ ಮಾಡಬೇಕು. ಮೈನರ್ ಇರಿಗೇಷನ್ ಆಗಲಿ, ಮೀಡಿಯಂ ಇರಿಗೇಷನ್ ಆಗಲಿ, ಮೇಜರ್ ಇರಿಗೇಷನ್ ಆಗಲಿ ಕಳೆದ ೩ ವರ್ಷಗಳಿಗೆ ಹೋಲಿಕೆ ಮಾಡಿದರೆ ದುಡ್ಡನ್ನು ಅದಕ್ಕೆ ಹೆಚ್ಚಿಗೆ ಕೊಡುತ್ತಾ ಇಲ್ಲ. ದುರದೃಷ್ಟವಶಾತ್ ಕೇಂದ್ರಸರ್ಕಾರದವರು ಎಷ್ಟೋ ಲಕ್ಷ ಟನ್ ಗೋಧಿಯನ್ನು ಆಮದು ಮಾಡಿಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದಾರೆಂದು ಪತ್ರಿಕೆಯಲ್ಲಿ ನೋಡಿದ್ದೇನೆ. ಭಾರತ ದೇಶದಲ್ಲಿ ನಾವು ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಯುತ್ತಾ ಇದ್ದೇವೆ, ಬೇರೆ ದೇಶಗಳಿಗೂ ಆಹಾರ ಧಾನ್ಯಗಳನ್ನು ನೀಡುವಂಥ ಶಕ್ತಿಯಲ್ಲಿದ್ದೇವೆ ಎಂದು ಹೇಳತಕ್ಕ ನಾವು ಬೇರೆ ದೇಶದಿಂದ ಗೋಧಿಯನ್ನು ಆಮದು ಮಾಡಿಕೊಳ್ಳುತ್ತೇವೆಂದರೆ ಜನಗಳ ಮನಸ್ಸಿನಲ್ಲಿ ಯಾವ ಭಾವನೆ ಬರುತ್ತದೆ ಎಂದು ಕೇಂದ್ರ ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕು, ಆದರೆ ಅವರು ಮಾಡಿದ ತೀರ್ಮಾನವನ್ನು ಪ್ರಕಟಮಾಡಿರತಕ್ಕಂಥಾದ್ದು ನಿಜವೋ ತಪ್ಪೋ ಅಂತೂ ನಮ್ಮ ರಾಜ್ಯದಲ್ಲಿ ಎಷ್ಟು ಆಹಾರ ಬೇಕೋ ಅಷ್ಟು ಬೆಳೆಯುತ್ತಾ ಇದ್ದೇವೆಯೋ ಎಂದು ಸಂಶಯ ಬರುವ ರೀತಿಯಲ್ಲಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಮೈನರ್ ಇರಿಗೇಷನ್, ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್‌ಗಳಿಗೆ ದುಡ್ಡನ್ನು ಹೆಚ್ಚು ಖರ್ಚುಮಾಡಿದರೆ ಅದಕ್ಕೆ ಪ್ರತಿಫಲವಾಗಿ ರೈತರು ಆದಷ್ಟು ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ, ಎಣ್ಣೆಯ ಕಾಳುಗಳನ್ನು ಬೆಳೆಯುತ್ತಾರೆ ಎಂದು ಗೊತ್ತಿದ್ದರೂ ಕೂಡ ಬೇರೆ ಕೆಲಸಕಾರ್ಯಗಳಿಗೆ ಹೆಚ್ಚಿಗೆ ದುಡ್ಡನ್ನು ಕೊಡುವುದನ್ನು ನೋಡುತ್ತಾ ಇದ್ದೇವೆ. ಆದರೆ ಇರಿಗೇಷನ್‌ಗೆ ಹೆಚ್ಚಿಗೆ ದುಡ್ಡನ್ನು ಕೊಡುತ್ತಾ ಇಲ್ಲ ಎನ್ನತಕ್ಕಂಥಾದ್ದನ್ನು ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ತೋರಿಸುತ್ತದೆ. ಇದು ಬಹಳ ಶೋಚನೀಯವಾದ ವಿಚಾರ. ಈಗಲಾದರೂ ಸರ್ಕಾರದವರು ನೀರಾವರಿಗೆ ಹೆಚ್ಚಿಗೆ ದುಡ್ಡನ್ನು ತೆಗೆದುಕೊಳ್ಳಬೇಕು. ನಾವು ಬೇರೆ ಸರ್ಕಾರಗಳಲ್ಲಿ ನೋಡುತ್ತಾ ಇದ್ದೇವೆ. ಅದರಲ್ಲೂ ಎಲೆಕ್ಟ್ರಿಸಿಟಿ ಮೈನರ್ ಇರಿಗೇಷನ್, ಹೌಸಿಂಗ್, ಅರ್ಬನ್ ಡೆವಲಪ್‌ಮೆಂಟ್‌ಗಳಿಗೆ ವರ್ಲ್ಡ್ ಬ್ಯಾಂಕ್‌ನಿಂದ ಕೋಟ್ಯಾಂತರ ರೂಪಾಯಿಗಳ ಹಣವನ್ನು ತೆಗೆದು ಕೊಳ್ಳುತ್ತಾ ಇದ್ದಾರೆ. ನಮ್ಮ ಸರ್ಕಾರದವರು ಕೃಷ್ಣ ಯೋಜನೆ ಬಗ್ಗೆ ಕೆಲವು ಕೋಟಿ ರೂಪಾಯಿ ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚಿಗೆ ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ನಮ್ಮ ಸರ್ಕಾರದವರು ಇದರ ವಿಚಾರದಲ್ಲಿ ತೀವ್ರವಾಗಿ ಆಲೋಚನೆ ಮಾಡಿ, ಇನ್ನೂ ಹೆಚ್ಚಿಗೆ ದುಡ್ಡನ್ನು ತೆಗೆದುಕೊಂಡು ಯಾವ ಯಾವ ಯೋಜನೆಗಳನ್ನು ಆರಂಭ ಮಾಡಿದ್ದಾರೋ ಆ ಯೋಜನೆಗಳು ಆದಷ್ಟು ಬೇಗ ಮುಗಿಯದೇ ಹೋದರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಒಂದು ಗಾದೆ ಇದೆ. ಏನೆಂದರೆ, ತಿರುಪತಿಗೆ ಹೋದರೆ ಒಬ್ಬ ಕ್ಷೌರಿಕ ೧೦–೧೫ ಜನರಿಗೆ ಕ್ಷೌರಮಾಡಿ ದುಡ್ಡನ್ನು ತೆಗೆದುಕೊಳ್ಳುವುದ ಕ್ಕೋಸ್ಕರ, ಒಬ್ಬೊಬ್ಬರನ್ನು ಕರೆದು ಸ್ವಲ್ಪ ಸ್ವಲ್ಪ ಕ್ಷೌರಮಾಡಿ, ೧೫ ಜನ ಆದಮೇಲೆ ಒಬ್ಬೊಬ್ಬರಿಗೂ ಪೂರ್ತಿ ಕ್ಷೌರ ಮಾಡುವುದಕ್ಕೆ ಶುರುಮಾಡುತ್ತಾನೆ. ಆ ರೀತಿ ಪ್ರತಿಯೊಂದು ಯೋಜನೆಗೂ ಸ್ವಲ್ಪ ಸ್ವಲ್ಪ ದುಡ್ಡನ್ನು ಹಾಕಿ ಒಂದನ್ನೂ ಪೂರ್ತಿ ಮಾಡದೇ ಹೋದರೆ ರೈತರಿಗೂ ನಷ್ಟವಾಗುತ್ತದೆ, ಸರ್ಕಾರಕ್ಕೂ ನಷ್ಟವಾಗುತ್ತದೆ. ರೈತ ಬೆಳೆಯುತಕ್ಕ ಆಹಾರ ಧಾನ್ಯಗಳು, ಎಣ್ಣೆ ತಯಾರು ಮಾಡತಕ್ಕ ಎಣ್ಣೆ ಕಾಳುಗಳಿಂದ ಏನೂ ಪ್ರಯೋಜನ ಮಾಡಿದಹಾಗೆ ಆಗುವುದಿಲ್ಲ. ಬಾಯಿಮಾತಿನಲ್ಲಿ ರೈತರಿಗೆ ನ್ಯಾಯವಾಗಿ ದುಡ್ಡನ್ನು ಒದಗಿಸಿಕೊಡುತ್ತಿದ್ದೇವೆಂದು ಹೇಳುತ್ತೇವೆ. ಇಷ್ಟು ಎಕರೆ ನೀರಾವರಿ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದೇವೆಯೇ ಹೊರತು ಸರ್ಕಾರದವರು ಎಷ್ಟು ಮಾಡಬೇಕಾ ಗಿತ್ತೋ ಅಷ್ಟು ಮಾಡುವುದಕ್ಕೆ ಸಾಧ್ಯವಾಗಿಲ್ಲ, ಅದನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ, ಉದಾಹರಣೆಗೆ ಹೇಳುವುದಾದರೆ, ಮೇಜರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಕಬಿನಿ ಪ್ರಾಜೆಕ್ಟ್ ೧೯೫೯ರಲ್ಲಿ ಆರಂಭವಾಯಿತು. ಕಷ್ಟಪಟ್ಟು ೧೯೭೪ರಲ್ಲಿ ಪೂರ್ತಿ ಮುಗಿಸಿದ್ದಾರೆ. ೧ ಲಕ್ಷ ೫ ಸಾವಿರ ಎಕರೆಗೆ ನೀರಾವರಿಯಾಗತಕ್ಕ ಪ್ರಾಜೆಕ್ಟ್ ಇದು. ಮತ್ತು ೩೫ ಮೆಗಾವಾಟ್ ಎಲೆಕ್ಟ್ರಿಸಿಟಿ ಪ್ರೊಡ್ಯೂಸ್ ಮಾಡತಕ್ಕ ಕಾಂಪೊಸಿಟ್ ಪ್ರಾಜೆಕ್ಟ್ ಅದು. ೧೯೭೪ನೇ ಇಸವಿಯಲ್ಲಿ ಒಂದು ಲಕ್ಷ ಐದು ಸಾವಿರ ಎಕರೆಗೆ ನೀರಾವರಿ ಆಗುತ್ತದೆ ಎಂದು ಹೇಳಿ ಡ್ಯಾಂ ವರ್ಕ್ ಕಂಪ್ಲೀಟಾಯಿತು, ಆದರೆ ಕಳೆದ ವರ್ಷ ದವರೆಗೆ ಕೇವಲ ೧೫ ಸಾವಿರ ಎಕರೆಗೆ ನೀರು ಕೊಟ್ಟಿದ್ದಾರೆ. ಪರ್‌ಫಾರ್ಮೆನ್ಸ್ ಬಜೆಟ್‌ನಲ್ಲಿ ಜೂನ್

೧೯೮೧ಕ್ಕೆ ಇನ್ನೂ ೨೩ ಸಾವಿರ ಎಕರೆಗೆ ನೀರನ್ನು ಕೊಡುತ್ತೇವೆಂದು ಹೇಳಿದ್ದಾರೆ. ಜೂನ್‌ಗೆ ೨೩ ಸಾವಿರ ಎಕರೆಗೆ ನೀರಾವರಿ ಆಯಿತೋ ಗೊತ್ತಿಲ್ಲ. ಕಳೆದ ವರ್ಷದವರೆಗೆ ೧೧ ಸಾವಿರ ಎಕರೆಗೆ ಮಾತ್ರ ನೀರನ್ನು ಕೊಟ್ಟಿದ್ದರು. ೧೯೭೪ರಲ್ಲಿ ಡ್ಯಾಂ ವರ್ಕ್ ಕಂಪ್ಲೀಟಾಗಿ. ೭ ವರ್ಷಗಳಲ್ಲಿ ಆಗತಕ್ಕ ಕಾರ್ಯಗಳನ್ನು ನಾವು ಮಾಡಿಲ್ಲ ಅಂದರೆ ಏನು, ಅದರ ಬಗ್ಗೆ ಡೀಟೇಲ್ಸನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈಟ್ ಬ್ಯಾಂಕ್ ಕೆನಾಲ್ ೧೨೬ ಮೈಲಿ ಛಾನಲ್ ಇದೆ. ಅದರಲ್ಲಿ ೭೮ ಮೈಲಿ ಟ್ರಾಕಲ್ ಮಾಡಿದ್ದಾರೆ. ಇದುವರೆಗೆ ಪೂರ್ತಿ ಮುಗಿಸಿಲ್ಲ. ಜೂನ್ ಕೊನೆವರೆಗೆ ೬೮ ಮೈಲಿ ಮುಗಿಸುತ್ತೇವೆಂದು ಹೇಳಿದ್ದಾರೆ. ಇನ್ನು ೧೨೬ ಮೈಲಿಯನ್ನು ಮುಗಿಸುವುದು ಯಾವ ಕಾಲಕ್ಕೆ. ೫ ಲಕ್ಷ ೧೧ ಸಾವಿರ ಎಕರೆ ಜಮೀನಿಗೆ ನೀರು ಕೊಡುವುದು ಯಾವಾಗ ಎಂದು ನನಗೆ ಅರ್ಥವಾಗುವುದಿಲ್ಲ. ಮತ್ತು ಕಬಿನಿ ಪ್ರಾಜೆಕ್ಟ್‌ಗೆ ಇದುವರೆಗೆ ೬೦ ಕೋಟಿ ರೂಪಾಯಿ ಖರ್ಚಾಗಿದೆ. ೧೯೮೧-೮೨ನೇ ಸಾಲಿಗೆ ೭ ಕೋಟಿ ರೂಪಾಯಿಗಳನ್ನು ಪ್ರಾವೈಡ್ ಮಾಡಿದ್ದಾರೆ. ಇದುವರೆಗೆ ೫೮ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ವರ್ಷಕ್ಕೆ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಹೋದರೆ ೧೨೬ ಮೈಲಿ ಕಾಲುವೆಯನ್ನು ತೆಗೆದು ೧ ಲಕ್ಷ ೫ ಸಾವಿರ ಎಕರೆಗೆ ನೀರು ಕೊಡತಕ್ಕ ಕಾರ್ಯವನ್ನು ಮತ್ತು ೫೫ ಮೆಗಾವಾಟ್ಸ್‌ಗೆ [illegible] ಹಾಕಿದ್ದಾರೆ, ಅದಕ್ಕೆ ಪವರ್ ಸ್ಟೇಷನ್ ಮಾಡಿ ೫೫ ಮೆಗಾವಾಟ್ಸ್ ಪವರ್ ತೆಗೆಯುವುದಕ್ಕೆ ದುಡ್ಡನ್ನು ಒದಗಿಸಿ ಯಾವಾಗ ಮುಗಿಸುತ್ತಾರೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ದೀರ್ಘವಾಗಿ ಯೋಚನೆಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ಹಿಂದೆ ಶ್ರೀಮಾನ್ ದೇವೇಗೌಡರು ಹೇಳಿದ್ದಾರೆ. ಈಗ ಕಬಿನಿ [illegible] ದೇಶದಲ್ಲಿರತಕ್ಕ ನೀರಾವರಿ ಅಣೆಕಟ್ಟುಗಳೆಲ್ಲವನ್ನೂ ಯೋಜನೆಯ [illegible] ನಿರ್ವಹಿಸಬೇಕು. ಈಗಿರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ನಾವು ಒದಗಿಸುವುದಕ್ಕಿಂತ ಹೆಚ್ಚು ಹಣವನ್ನು, ಯಾವ ಸ್ವರೂಪದಲ್ಲಿ, ಯಾವ ಬಾಬಿನಲ್ಲಿ ಕಡಿತಮಾಡಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸಿಕೊಡುವುದಕ್ಕೆ ಯಾವ ಮಾರ್ಗವಿದೆ ಎನ್ನುವುದರ ಬಗ್ಗೆ ಸ್ವಲ್ಪ ದಾರಿ ತೋರಿಸಿದರೆ ನಾವು ಆಲೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ದೇವೇ ಗೌಡ.—ನಮ್ಮ ನೂತನ ಪಿಡಬ್ಲ್ಯೂಡಿ ಮಂತ್ರಿಗಳು ದಾರಿ ತೋರಿಸಬೇಕು ಎಂದು ಹೇಳುತ್ತಿದ್ದಾರೆ. ನಾನು ತೋರಿಸುವ ದಾರಿಯಲ್ಲಿ ಹೋಗಬೇಕು ಎನ್ನುವ ಇಚ್ಛೆ ಬೇಕು. ನಿಮ್ಮ ನಾಯಕರು ಅಧಿಕಾರಕ್ಕೆ ಬಂದ ಹೊಸದರಲ್ಲಿ ಹೇಳಿದ್ದಾರೆ. ಸಂಪನ್ಮೂಲಗಳನ್ನು ಹೇಗೆ ದೊರಕಿಸಿಕೊಳ್ಳಬೇಕು ಮತ್ತು ನೀರಾವರಿ ಯೋಜನೆಗಳ ಬಗ್ಗೆ ರಿಸೋರ್ಸಸ್ ಕಮಿಟಿಮಾಡಿ, ನೀವು ಈ ಸದನದ ಅನುಭವಸ್ಥರನ್ನು [illegible] ಕೂಡಿಸಿಕೊಂಡು ಕಮಿಟಿಮಾಡಿ ಎಂದು ಹೇಳಿದೆವು. ಬಹುಶಃ ಇವತ್ತಿನವರೆಗೂ ಅದರ [illegible] ಈ ಬಗ್ಗೆ ಕುರಿತು ಚರ್ಚೆ ಮಾಡಲಿಕ್ಕೆ ಆಗುವುದಿಲ್ಲ. ಯಾವ ಬಾಬಿನಲ್ಲಿ [illegible] ಮಾಡಿದ್ದೆವು. ಹಿಂದೆ ಕಮಿಟಿ ಮಾಡಿದ್ದೆವು. ೧೯೭೭ರಲ್ಲಿ [illegible] ಪೋಲ್ [illegible] ಕಮಿಟಿ ಮಾಡಿದ್ದೆವು. ಅವರಿಂದ ಅಮೂಲ್ಯವಾದ ಸಲಹೆಗಳು ಬಂದಿತ್ತು. ಆ ಸಲಹೆಗಳನ್ನು [illegible] ಭಾವ ನಿಮಗೆ ಬೇಕಲ್ಲ. ಏನೋ ಶಕ್ತಿ ಇದೆ ಎಂದು ಹೊರಟಿದ್ದೀರಿ. ಸಲಹೆಗಳನ್ನು ಮಾನ್ಯತೆ ಮಾಡುವವರು ಯಾರು.

MR. DEPUTY SPEAKER.—It is a very good suggestion.

೪-೩೦ ಪಿ.ಎಂ.

ಈ ೩೨ ಮೆಗಾವಾಟ್ ಪವರ್ ಇರತಕ್ಕಂಥದ್ದನ್ನು ೧೯೭೪ನೇ ಇಸ್ವಿಯಲ್ಲಿ ಮುಗಿಸಿ ನೀರನ್ನು ಸ್ಟೋರೇಜ್ ಮಾಡಿ ತಮಿಳು ನಾಡಿನವರು ನೀರು ಬೇಕು ಎಂದು ಕೇಳಿದಾಗ ನೀರನ್ನು ಬಿಟ್ಟು ಕೊಡತಕ್ಕಂಥ ಉದಾರತೆಯನ್ನು ತೋರಿಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ನಮ್ಮ ಸ್ಟೇಟಿನವರು ಇಲ್ಲಿಯವರೆಗೆ ೫೮ ಕೋಟಿ ರೂ. ಗಳನ್ನು ಖರ್ಚು ಮಾಡಿದ್ದಾರೆ. ಈ ಪ್ರಾಜೆಕ್ಟ್‌ನಿಂದ ಏನು ಪ್ರಯೋಜನವಾಗುತ್ತಿದೆ ಎಂದರೆ ಕೇವಲ ೧೧ ಸಾವಿರ ಎಕರೆಗೆ ನೀರು ಕೊಡುತ್ತಿದ್ದಾರೆ. ಮಿಕ್ಕ ನೀರು ಎಲ್ಲಾ ತಮಿಳು ನಾಡಿಗೆ ಹೋಗುತ್ತಿದ್ದೆ, ಅವರು ನೀರು ಇಲ್ಲ ಅಂತ ಕೇಳಿದಾಗ ನೀರನ್ನು ದಾನ ಮಾಡಿ ಅಲ್ಲಿಗೆ ಕಳುಹಿಸಿ ಕೊಡುತ್ತಿದ್ದಾರೆ. ೩೮ ಮೆ. ವ್ಯಾಟ್ ಇರತಕ್ಕಂಥದ್ದನ್ನು ಏತಕ್ಕೆ ಇನ್ನೂ ಪ್ರಾರಂಭ ಮಾಡಿಲ್ಲ ಎಂದು ಯೋಚನೆ ಮಾಡಬೇಕಾದಂಥ ಸಮಸ್ಯೆಯಾಗಿದೆ. ಈ ಕಬಿನಿ ಪ್ರಾಜೆಕ್ಟ್ ೧೯೫೯ನೇ

ಇಸ್ವಿಗೆ ಸೇರಿದಂಥದ್ದು ಹಲವಾರು ಕಾರಣಗಳಿಂದ ಅದು ೧೯೭೪ನೇ ಇಸ್ವಿಯಲ್ಲಿ ಡ್ಯಾಂ ಕಂಪ್ಲೀಟ್ ಆಯಿತು. ಆದುದರಿಂದ ಅಲ್ಲಿಂದ ಇಲ್ಲಿಯವರೆಗೆ ತಡವಾದುದಕ್ಕೆ ನಮ್ಮ ಸರ್ಕಾರಕ್ಕೆ ತುಂಬಾ ನಷ್ಟ ಉಂಟಾಗಿದೆ. ಆದುದರಿಂದ ಮಾನ್ಯ ಕಾಗೋಡು ತಿಮ್ಮಪ್ಪನವರು ಯಾವ ರೀತಿಯಾಗಿ ಅದಕ್ಕೆ ದುಡ್ಡನ್ನು ಒದಗಿಸಿ ಕೊಡಬೇಕು ಎನ್ನುವ ಬಗ್ಗೆ ಸಲಹೆ ಕೇಳಿದಾಗ ಮಾನ್ಯ ಶ್ರೀ ದೇವೇಗೌಡರವರು ಸಲಹೆ ಕೊಟ್ಟಿದ್ದಾರೆ, ನಾನುಸಹ ನನ್ನ ಸಲಹೆಯನ್ನು ಕೊಟ್ಟಿದ್ದೇನೆ. ಬೇರೆ ರಾಜ್ಯ ಸರ್ಕಾರದವರು ಇಂಥಾ ಕೆಲಸಗಳಿಗಾಗಿ ವರ್ಲ್ಡ್ ಬ್ಯಾಂಕ್‌ನವರಿಂದ ಹೆಚ್ಚಿನ ದುಡ್ಡನ್ನು ತೆಗೆದುಕೊಳ್ಳುತ್ತಿದ್ದಾರೆ, ಅಷ್ಟು ದುಡ್ಡನ್ನು ನಮ್ಮ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇದು ಮೊದಲಿನಿಂದಲೂ ಹಾಗೆಯೇ ಇದೆ. ನಾನು ಹೌಸಿಂಗ್ ಬೋರ್ಡ್‌ನ ಅಧ್ಯಕ್ಷನಾಗಿದ್ದಾಗ ಬರೀ ಹೌಸಿಂಗ್ ಬೋರ್ಡಿಗೇ ೪ ಕೋಟಿ ಡಿಬೆಂಚರ್ ಲೋನ್ ಕೇಳಿದಾಗ ಕೇವಲ ೧ ಕೋಟಿ ಕೊಟ್ಟಿದ್ದರು. ಆಗ ನಾನು ಮತ್ತು ಅರ್ಥ ಮಂತ್ರಿಗಳವರು ರಿಜರ್ವ್ ಬ್ಯಾಂಕ್‌ನಲ್ಲಿಯ ಮೀಟಿಂಗನಲ್ಲಿ ಚರ್ಚೆ ಮಾಡಿದಾಗ, ಅಲ್ಲಿ ಒಬ್ಬರು ತಮಿಳು ನಾಡಿನ ಡೈರೆಕ್ಟರ್‌ರವರಿದ್ದರು, ನಮ್ಮ ಕರ್ನಾಟಕ ರಾಜ್ಯಕ್ಕೆ ೨೦ ಕೋಟಿ ಡಿಬೆಂಚರ್ ಸಾಲವನ್ನು ಕೇಳಿದರೆ ಕೇವಲ ೧೦ ಕೋಟಿಯನ್ನು ಕೊಟ್ಟಿದ್ದೀರಿ ಇದರಲ್ಲಿ ವಾಪಸ್ಸು ಕೊಡತಕ್ಕಂಥದ್ದು ಎಂಟೂವರೆ ಕೋಟಿ ಹೋಗುತ್ತದೆ ಇನ್ನು ಉಳಿಯುತಕ್ಕದ್ದು ಒಂದೂವರೆ ಕೋಟಿ ಮಾತ್ರ ಅದೇ ನೀವು ತಮಿಳು ನಾಡಿಗಾದರೆ ೨೦ ಕೋಟಿ ಕೇಳಿದರೆ ಅವರಿಗೆ ೧೫ ಕೋಟಿ ಕೊಟ್ಟಿದ್ದೀರಿ ಈ ತಾರತಮ್ಯ ಏತಕ್ಕೆ ಅಂತ ಕೇಳಿದಾಗ, ಆ ತಮಿಳುನಾಡಿನ ಡೈರೆಕ್ಟರ್‌ರವರು ಸ್ವಲ್ಪ ಉದ್ಧಟತನದಿಂದ ಮಾತನಾಡಿದರು. ಆಗ ನಮ್ಮ ಅರ್ಥ ಮಂತ್ರಿಗಳವರು ಅವರಿಗೆ ಬುದ್ಧಿ ಬರುವ ರೀತಿಯಲ್ಲಿ ಹೇಳಿ ಈ ರೀತಿ ನೀವು ಮಾಡಿದರೆ ಕೇಂದ್ರ ಸರ್ಕಾರಕ್ಕೆ ಹೇಳಿ ಬುದ್ಧಿ ಕಲಿಸಬೇಕಾಗುತ್ತದೆ ಎಂದು ಹೇಳಿದ ಮೇಲೆ ನಮ್ಮ ರಾಜ್ಯಕ್ಕೆ ೧೫ ಕೋಟಿ ಡಿಬೆಂಚರ್ ಸಾಲವನ್ನು ಕೊಟ್ಟರು ಆಗ ನಾನು ಹೌಸಿಂಗ್ ಬೋರ್ಡಿಗೆ ೧ ಕೋಟಿಯಿಂದ ೩ ಕೋಟಿ ರೂ.ಗಳವರೆಗೆ ಡಿಬೆಂಚರ್ ಲೋನ್‌ನನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿತ್ತು. ಅದೇ ರೀತಿ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರ ಜೊತೆಗೆ ವ್ಯವಹರಿಸಿ ವರ್ಲ್ಡ್ ಬ್ಯಾಂಕ್‌ನ ಮೂಲಕ ಬರುವ ಬಾಬುಗಳಿಗೆ ಹೆಚ್ಚಿಗೆ ದುಡ್ಡನ್ನು ಪಡೆಯಬೇಕೋ ಅದನ್ನು ಪಡೆಯುವುದಕ್ಕೆ ಪ್ರಯತ್ನಿಸಬೇಕು. ಇದು ಆಗದಿದ್ದರೆ ನಮ್ಮ ಮಂತ್ರಿಯೊಬ್ಬರಿದ್ದಾರೆ ಅವರ ಸಹಾಯವನ್ನು ತೆಗೆದುಕೊಳ್ಳಿ. ಅವರು ಪತ್ರಿಕೆಗಳಲ್ಲೂ ಸಹ ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಅರಬ್ ದೇಶಗಳಿಂದ ೪೦೦ ಕೋಟಿ ರೂ.ಗಳನ್ನು ನಮ್ಮ ರಾಜ್ಯಕ್ಕೆ ಬರುವ ರೀತಿಯಲ್ಲಿ ಮಾಡಿದ್ದೇನೆಂದು ಹೇಳಿದ್ದಾರೆ. ೪೦೦ ಕೋಟಿ ರೂ.ಗಳನ್ನು ತರತಕ್ಕಂಥ ಮಂತ್ರಿಗಳವರು ನಮ್ಮ ಮಂತ್ರಿ ಮಂಡಲದಲ್ಲಿ ಇದ್ದಾರೆ. ಹಾಗೆಯೇ ನಮ್ಮ ಎಲ್ಲಾ ಮೈನರ್ ಮತ್ತು ಮೇಜರ್ ಇರಿಗೇಷನ್‌ಗಳನ್ನು ಮಾಡಿ ಮುಗಿಸಲು ನಮ್ಮಲ್ಲಿ ಒಳ್ಳೆಯ ಇಂಜಿನಿಯರ್‌ಗಳು ಇದ್ದಾರೆ ಮತ್ತು ಕಂಟ್ರ್ಯಾಕ್ಟರ್‌ಗಳು ಇದ್ದಾರೆ ಅವರು ಅಷ್ಟು ದುಡ್ಡನ್ನು ತಂದು ಕೊಟ್ಟರೆ ನಮ್ಮ ಎಲ್ಲಾ ಯೋಜನೆಗಳನ್ನು ಇನ್ನು ೪-೫ ವರ್ಷಗಳಲ್ಲಿ ಮಾಡಿ ಮುಗಿಸಬಹುದು. ಹಾಗೆಯೇ ಅವರು ಆ ಭಾವನೆಯಿಂದ ಹೇಳಿದ್ದರೆ ನಮ್ಮ ಅರ್ಥ ಮಂತ್ರಿಗಳವರು ಅವರಿಂದ ಆ ಸಹಾಯವನ್ನು ಪಡೆದು ಕೊಳ್ಳಬಹುದು ಇಲ್ಲದಿದ್ದರೆ ವರ್ಲ್ಡ್ ಬ್ಯಾಂಕ್‌ನಿಂದ ಎಷ್ಟು ಹೆಚ್ಚಿಗೆ ಹಣ ಬರುತ್ತದೆಯೋ ಅದನ್ನು ಪಡೆಯುವುದಕ್ಕೆ ನಮ್ಮ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಸಲಹೆ ಮಾಡ ಬಯಸುತ್ತೇನೆ.

ಇನ್ನು ಹಾರಂಗಿ ಯೋಜನೆ ಇದು ನಮ್ಮ ಮೈಸೂರು ಜಿಲ್ಲೆಗೆ ಹೆಚ್ಚಿಗೆ ಅನುಕೂಲವಾಗತಕ್ಕಂಥದ್ದು ಕೊಡಗು ಜಿಲ್ಲೆಗೆ ಅದು ಕೇವಲ ೩ ಸಾವಿರ, ೪ ಸಾವಿರ ಎಕರೆಗೆ ಮಾತ್ರ ಅನುಕೂಲವಾಗತಕ್ಕಂಥ ಯೋಜನೆ ಇದು ೧೯೮೦ನೇ ಇಸ್ವಿಯ ಲೆಕ್ಕದ ಪ್ರಕಾರ ಎಸ್ಟಿಮೇಟ್ ಆಗಿರತಕ್ಕಂಥದ್ದು ೮೫ ಕೋಟಿ. ಇದರಿಂದ ಇರಿಗೇಷನ್ ಆಗತಕ್ಕಂಥದ್ದು ೧ ಲಕ್ಷದ ೩೦ ಸಾವಿರ ಎಕರೆ. ಇಲ್ಲಿ ಲೆಫ್ಟ್ ಬ್ಯಾಂಕ್ ಚಾನಲ್‌ನಿಂದ ೯೬ ಮೈಲಿ ಟ್ಯಾಕಲ್ ಮಾಡಬೇಕಾಗಿರುವುದರಲ್ಲಿ ಇಲ್ಲಿಯವರೆಗೆ ಕೇವಲ ೨೬ ಮೈಲಿ ಮಾತ್ರ ಕಂಪ್ಲೀಟ್ ಮಾಡಿದ್ದಾರೆ. ಇದು ನೀವು ಕೊಟ್ಟಿರತಕ್ಕ ಲೆಕ್ಕಾಚಾರದ ಪ್ರಕಾರವಾಗಿಯೇ ನಾನು ಹೇಳುತ್ತಿರತಕ್ಕದ್ದು. ಮತ್ತೆ ಲೆಫ್ಟ್ ಬ್ಯಾಂಕ್ ಚನಾಲನಿಂದ ೬೫ ಮೈಲಿಯಲ್ಲಿ ಇಲ್ಲಿಯವರೆಗೆ ಎಷ್ಟು ಕಂಪ್ಲೀಟ್ ಮಾಡಿದ್ದೀರೋ ಗೊತ್ತಿಲ್ಲ. ರೈಟ್ ಬ್ಯಾಂಕ್ ಚನಾಲ್‌ನಲ್ಲಿ ೧೬೦ ಕಿಲೋ ಮೀಟರ್‌ನಲ್ಲಿ ೮೫ ಕಿಲೋ ಮೀಟರ್‌ವರೆಗೆ ಮಾತ್ರ ಟ್ಯಾಕಲ್ ಮಾಡಿದ್ದಾರೆ,

ಇನ್ನು ಹಾರಂಗಿ ಪ್ರಾಜೆಕ್ಟ್‌ಗೆ ತಾವು ಕೊಟ್ಟಿರತಕ್ಕದ್ದು ೧೯೮೧-೮೨ಕ್ಕೆ ಕೇವಲ ೫.೬ ಕೋಟಿ ರೂ.ಗಳು, ೧೯೭೯-೮೦ ರಲ್ಲಿ ೬ ಕೋಟಿ ಕೊಟ್ಟಿದ್ದೀರಿ, ೧೯೮೦-೮೧ರಲ್ಲಿ ಲೋಯೆಸ್ಟ್ ಎಸ್ಟಿಮೇಟ್ ೫.೬ ಕೋಟಿಯನ್ನು ಪ್ರೊವೈಡ್ ಮಾಡಿದ್ದೀರಿ. ಇಷ್ಟು ಕಡಿಮೆ ದುಡ್ಡನ್ನು ಪ್ರೊವೈಡ್‌ಮಾಡಿಕೊಂಡು

ಹೋದರೆ, ೧ ಲಕ್ಷದ ೩೦ ಸಾವಿರ ಎಕರೆ ಮತ್ತು ಲೆಫ್ಟ್ ಬ್ಯಾಂಕ್ ಚನಾಲ್‌ನಿಂದ ೨೦೦ ಚಿಲ್ಲರೆ ಎಕರೆ ಒಟ್ಟು ೧ ಲಕ್ಷದ ೫೦ ಸಾವಿರ ಎಕರೆಗೆ ನೀರು ಕೊಡತಕ್ಕ ಯೋಜನೆ ಏನಿದೆ ಇದರಿಂದ ಪಿರಿಯಾಪಟ್ಟಣ ಮತ್ತು ಹುಣಸೂರು ತಾಲ್ಲೂಕ್‌ಗಳಲ್ಲಿ ನೀರಾವರಿಗೆ ಅನುಕೂಲವಾಗತಕ್ಕಂಥದಕ್ಕೆ ತೊಂದರೆಯಾಗಿದೆ. ಇವತ್ತು ಹುಣಸೂರು ತಾಲ್ಲೂಕ್‌ನಲ್ಲಿ ಎರಡು ಟ್ಯಾನಲ್ ಅಣೆಕಟ್ಟೆಯನ್ನು ಬಿಟ್ಟರೆ ನೀರಾವರಿ ಡ್ಯಾಮ್‌ನಿಂದ ನೀರು ಬರತಕ್ಕದು ಬೇರೆ ಯಾವಯೋಜನೆಯೂ ಇಲ್ಲ.ಆದುದರಿಂದ ಈ ಹಾರಂಗಿ ಯೋಜನೆಯನ್ನು ಆದಷ್ಟು ಮುಗಿಸದಿದ್ದರೆ ಪಿರಿಯಾಪಟ್ಟಣ ತಾಲ್ಲೂಕ್ ಮತ್ತು ಕೊಡಗಿನ ಕೆಲವು ಭಾಗ ಮತ್ತು ಹುಣಸೂರಿನ ಕೆಲವು ಭಾಗದ ಬಡ ರೈತರಿಗೆ ಅನಾನುಕೂಲವಾಗುತ್ತದೆ.ಆದುದರಿಂದ ತಾವು ಏನು ೫.೬ ಕೋಟಿ ದುಡ್ಡನ್ನು ಪ್ರೊಪೈಡ್ ಮಾಡಿದ್ದೀರಿ ಅದು ಏನೇನೂ ಸಾಲುವುದಿಲ್ಲ ಅದನ್ನು ಜಾಸ್ತಿ ಮಾಡುವುದು ಅತ್ಯಂತ ಅಗತ್ಯವಿದೆಂದು ಹೇಳಬಯಸುತ್ತೇನೆ. ಇನ್ನು ಹುಣಸೂರಿನಲ್ಲಿ ಒಂದು ಡಿವಿಜನ್ ಆಫೀಸ್ ಓಪನ್ ಮಾಡಿದ್ದೀರಿ ಅದನ್ನು ಏತಕ್ಕೆ ಓಪನ್ ಮಾಡಿದ್ದೀರೋ ಗೊತ್ತಿಲ್ಲ. ಇದರಿಂದ ಅಲ್ಲಿಯ ಜನ ನೀರು ಆದಷ್ಟು ಬೇಗ ಬರಬಹುದೆಂದು ಕಾಯ್ದುಕೊಂಡು ಕೂತಿದ್ದಾರೆ. ಆದರೆ ನಿಜವಾಗಿಯೂ ಅಲ್ಲಿ ಸರಿಯಾಗಿ ಕೆಲಸಕಾರ್ಯಗಳು ಆಗುತ್ತಿಲ್ಲ. ಹುಣಸೂರಿನ ಡಿವಿಜನಲ್ ಆಫೀಸ್‌ನಲ್ಲಿ ಕೇಳಿದರೆ ಅಲ್ಲಿಯ ಇಂಜಿನಿಯರ್‌ರವರು ನಮಗೆ ದುಡ್ಡು ಬಂದಿಲ್ಲ, ಕೊಟ್ಟರೂ ೫೦, ೬೦ ಲಕ್ಷ ಕೊಟ್ಟರೆ ಅದರಿಂದ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಆದುದರಿಂದ ಇಂಥಾ ಯೋಜನೆಗಳಿಗೆ. ತಾವು ಆದ್ಯತೆ ಕೊಟ್ಟು ಹೆಚ್ಚಿನ ಹಣವನ್ನು ಪೂರೈಸಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಮಾನ್ಯ ಮಂತ್ರಿಗಳವರು ಇದರ ಬಗ್ಗೆ ಕ್ಲಾರಿ ಫಿಕೇಷನ್‌ಗೆ ಉತ್ತರ ಹೇಳುವ ಹಾಗಿದ್ದರೆ ಹೇಳಬಹುದು.

ಶ್ರೀ ಬಿ.ಬಿ. ಚಿಮ್ಮನ ಕಟ್ಟಿ.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಗ್ರಾಸ್ ಎಷ್ಟಿದೆ ಎಂದು ಕ್ಲಾರಿಫಿಕೇಷನ್ ಕೇಳಿದ್ದಾರೆ, ಹೇಮಾವತಿ ಯೋಜನೆ ಬಗ್ಗೆ ಹೇಳುವುದಾದರೆ ಇದರಲ್ಲಿ ಗ್ರಾಸ್ ೧೬೬.೯೧ ನೆಟ್ ೧೧೪೪.೯೨ ಇದರಲ್ಲಿ ನಾವು ಸಸ್‌ಪೆನ್‌ಷನ್ ಮತ್ತು ರೆಕಿವರಿ ತೆಗೆದರೆ ನೆಟ್ ಬರುತ್ತದೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಇದರಲ್ಲಿ ಪ್ರೊವೈಡ್ ಮಾಡಿದ್ದು ಎಷ್ಟು ?

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ.—ಇದೇ ಪ್ರೊವೈಡ್ ಮಾಡಿರುವುದು ೧೬೬೧ ೯೧, ಇದು ಗ್ರಾಸ್ ಇದರಲ್ಲಿಯೇ ಸಸ್‌ಪೆನಷನ್, ರೆಕವರಿ ಎಲ್ಲಾ ತೋರಿಸುತ್ತೇವೆ. ಮತ್ತೆ ಮಿಷನರಿ ಚಾರ್ಜ್ ಮುಂತಾದವುಗಳು ಸಹ ಗ್ರಾಸ್‌ನಲ್ಲಿ ಬರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ.—ಪ್ಲಾನ್ ಪ್ರೋಗ್ರಾಂನಲ್ಲಿ ಸಸ್ಪೆನ್ಸ್ ವಗೈರೆ ಎಂದು ಹೇಳಿದ್ದೀರಿ, ಸಸ್ಪೆನ್ಸ್ ಅಂದರೆ ಏನು ? ನಾನ್ ಪ್ಲಾನಿಗೆ ೧೬೬೦ ಎಂದು ಇದೆ. ಅಂದರೆ ನೀವು ಹೇಳುವ ಪ್ರಕಾರ ಸಸ್ಪೆನ್ಸ್‌ನಲ್ಲಿ ಹಣ ಇಡುತ್ತೀರಾ ? ಸಸ್ಪೆನ್ಸ್ ಅಂದರೆ ಏನು ಎಂಬುದು ನನಗೆ ಗೊತ್ತಾಗಲಿಲ್ಲ. ಹೇಮಾವತಿ ಪ್ರಜೆಕ್ಟಿಗೆ ೧೯೭೯–೮೦ರಲ್ಲಿ ೧೦ ಕೋಟಿ ರೂಪಾಯಿಗಳೆಂದು ಇಟ್ಟಿದ್ದೀರಿ. ೧೬ ಕೋಟಿ ೬೧ ಲಕ್ಷ ರೂಪಾಯಿ ನೆಟ್ ಗ್ರಾಸ್ ಎಂದು ಹೇಳುತ್ತೀರಿ. ಅಂದಾಗ ನಮ್ಮ ಬಡ್ಜೆಟ್ಟನ್ನು ಬಿಟ್ಟು ಬೇರೆ ಯಾವ ಬಡ್ಜೆಟ್ಟಿನಲ್ಲಿ ಹಣ ಇಟ್ಟಿದ್ದೀರಿ ? ಈ ಸಭೆಯಲ್ಲಿ ಮಾನ್ಯತೆ ಪಡೆಯದೆ ಹೊರಗಡೆಯಿಂದ ತರತಕ್ಕ ಹಣ ಏನಾದರೂ ಇದೆಯೆ ? ಅಧಿಕಾರಿಗಳಾದರೂ ನಮಗೆ ಸ್ವಲ್ಪ ತಿಳುವಳಿಕೆ ಹೇಳಬೇಕು.

ಒಬ್ಬರು ಮಾನ್ಯ ಸದಸ್ಯರು.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ಬಳಿಕ ಕ್ಲಾರಿಫಿಕೇಷನ್ ಕೇಳುವುದು ಉತ್ತಮ. ಈ ಬಗ್ಗೆ ದಯಮಾಡಿ ಅಧ್ಯಕ್ಷರು ಸೂಚಿಸಬೇಕು,

ಶ್ರೀ ಹೆಚ್ ಡಿ. ದೇವೇಗೌಡ.—ಈ ಪ್ರಶ್ನೆಯನ್ನು ಎತ್ತಿ ಒಂದು ವರ್ಷವಾಯಿತು. ಮಂತ್ರಿಗಳು ಉತ್ತರಿಸುವುದಕ್ಕೆ ಇನ್ನೂ ಒಂದು ವರ್ಷ ಬೇಕೇ ? ಇದುವರೆಗೆ ಈ ಸಭೆಯಲ್ಲಿ ಉತ್ತರ ಕೊಡುವುದಕ್ಕಾಗಲಿಲ್ಲ. ನಾವು ಕೂಡ ಸುಮ್ಮನೆ ಕುಳಿತಿದ್ದೇವೆ.

ಉಪಾಧ್ಯಕ್ಷರು.—ಇಲ್ಲಿ ಕ್ರಿಯಾಲೋಪ ಏನು ಇಲ್ಲ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಸಸ್ಪೆನ್ಸ್‌ನಲ್ಲಿರುವುದನ್ನು ಬಿಟ್ಟರೆ ನೆಟ್‌ನಲ್ಲಿರುವುದನ್ನು ಪ್ರೊವೈಡ್ ಮಾಡಿರುವುದು ಎಂದು ತಿಳಿದುಕೊಳ್ಳೋಣವೆ ?

ಶ್ರೀ ಕಾಗೋಡು ತಿಮ್ಮಪ್ಪ.—ಸಸ್ಪೆನ್ಸ್‌ನಲ್ಲಿ ಏನಿದೆ ಅದರದ್ದು ಮೆಟೀರಿಯಲ್ಸ್ ಸ್ಟಾಕ್ ಇರುತ್ತದೆ. ಸಿಮೆಂಟು, ಕಬ್ಬಿಣ, ಮೆಷಿನರಿ ಇತ್ಯಾದಿಗಳು ಇರುತ್ತವೆ. ಜಮ ಮತ್ತು ಖರ್ಚು ಎರಡನ್ನು ತಾಳೆ ಹಾಕುವ ದೃಷ್ಟಿಯಿಂದ ಅದನ್ನು ಸಸ್ಪೆನ್ಸ್‌ನಲ್ಲಿ ಇಟ್ಟಿದ್ದೇವೆ,

ಶ್ರೀ ಹೆಚ್.ಡಿ. ದೇವೇಗೌಡ.—ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ರೀತಿ ತೆಗೆದುಕೊಳ್ಳುವುದಾದರೆ ಹೇಮಾವತಿ ಯೋಜನೆಗೆ ಸಂಬಂಧಪಟ್ಟ ಹಾಗೆ ೫ ಕೋಟಿ ರೂಪಾಯಿಗಳ ಮಿಷನರಿ ಇದೆಯೆ ? ರಾಜ್ಯದಲ್ಲಿರತಕ್ಕ ಒಟ್ಟು ಮೆಷಿನರಿ ಎಷ್ಟೆಂಬುದನ್ನು ಹೇಳುವುದಕ್ಕೆ ಸಾಧ್ಯವೇ ? ನಿಮ್ಮ ಪ್ರಕಾರ ಹೇಮಾವತಿ ಯೋಜನೆಯಲ್ಲಿ ೫ ಕೋಟಿ ರೂಪಾಯಿಗಳ ಮೆಷಿನರಿ ಇದೆ ಎಂದು ಭಾವಿಸಬೇಕಾಗುತ್ತದೆ. ಆದರೆ ನಾನು ಪಿಎಸಿ ಅಧ್ಯಕ್ಷನಾಗಿ ಎಲ್ಲವನ್ನು ಎಕ್ಸಾಮಿನ್ ಮಾಡಿ ತಿಳಿದಿದ್ದೇನೆ. ಈಗ ಹೇಳುವುದಕ್ಕೆ ಗೊತ್ತಾಗದಿದ್ದರೆ ನಾಳೆ ಉತ್ತರ ಕೊಡುವಾಗ ಸಾಕಷ್ಟು ವಿವರಣೆ ಪಡೆದು ಹೇಳಿ. ಕಳೆದ ಸಾರಿ ಈ ವಿಷಯವನ್ನು ಪ್ರಸ್ತಾಪ ಮಾಡಿದರೂ ಕೂಡ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ. ಮಾನ್ಯ ಮಂತ್ರಿಗಳು ಬೇರೆ ದಾರಿಯಲ್ಲಿ ಉತ್ತರಿಸಿ ೪-೫ ಕೋಟಿ ರೂಪಾಯಿಗಳ ಮೆಷಿನರಿಯೇ ಇದೆ ಎಂದರೆ ಏನು ಹೇಳುವುದು ?

ಶ್ರೀ ಕಾಗೋಡು ತಿಮ್ಮಪ್ಪ.—ನಿಮಗೇ ಚನ್ನಾಗಿ ಗೊತ್ತಿದೆ.

(ಕು. ಪ್ರಮಿಳ ಅವರು ಅಧ್ಯಕ್ಷ ಪೀಠ ಅಲಂಕರಿಸಿದರು.)

ಡಾ॥ ಹೆಚ್.ಎಲ್. ತಿಮ್ಮೇಗೌಡ.—ಅದು ಏನೇ ಆದರೂ ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದೊಡ್ಡ ನೀರಾವರಿ ಯೋಜನೆಗಳಿಗೆ ಈ ಪರ್‌ಫಾರ್ಮೆನ್ಸ್ ಬಡ್ಜೆಟ್ಟಿನಲ್ಲಿ ೧೯೭೯-೮೦ಕ್ಕೆ ೧೨೫ ಕೋಟಿ ರೂಪಾಯಿಗಳನ್ನೂ, ೧೯೮೦-೮೧ಕ್ಕೆ ೧೨೫ ಕೋಟಿ ರೂಪಾಯಿಗಳನ್ನು ಮತ್ತು ೧೯೮೧-೮೨ಕ್ಕೆ ೧೨೨ ಕೋಟಿ ರೂಪಾಯಿಗಳನ್ನು ಒದಗಿಸಿರುವುದನ್ನು ಕಾಣಬಹುದು. ನಿಮಗೇ ಗೊತ್ತಿರುವ ಸಿಮೆಂಟು, ಕಬ್ಬಿಣದ ಬೆಲೆಗಳೆಲ್ಲ ಜಾಸ್ತಿಯಾಗಿವೆ. ಕಂಟ್ರಾಕ್ಟರುಗಳಿಗೆ ಕೆಲಸ ಕೊಡುವುದಾದರೆ ಕಳೆದ ಮೂರು ವರ್ಷಗಳಿಗೂ ಈಗ್ಗೂ ಒಂದೂವರೆಯಷ್ಟು ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಆ ಪ್ರಕಾರ ಲೆಕ್ಕ ಹಾಕಿದರೂ ೧೯೭೯-೮೦ರಲ್ಲಿ ೧೨೫ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಈಗ ೧೮೦ ಕೋಟಿ ರೂಪಾಯಿಗಳನ್ನಾದರೂ ಒದಗಿಸಿಬೇಕಾಗಿತ್ತು. ಆದರೆ ನೀವು ೧೨೫ ರಿಂದ ೧೨೨ ಕೋಟಿ ರೂಪಾಯಿಗಳಿಗೆ ಇಳಿಸಿದ್ದೀರಿ. ಆದ್ದರಿಂದ, ಸರ್ಕಾರದಲ್ಲಿ ದೊಡ್ಡ ನೀರಾವರಿ ಯೋಜನೆಗಳ ವಿಚಾರದಲ್ಲಿ ಏನಾದರೂ ಒಂದು ತೀವ್ರಗತಿಯಾದ ಯೋಜನೆ ಇದೆಯೇ ಅಥವಾ ಇಲ್ಲವೇ ಎಂಬುದು ದೊಡ್ಡ ಸಂಶಯಕ್ಕೆ ಎಡೆ ಮಾಡುವ ಪ್ರಶ್ನೆಯಾಗಿದೆ. ಈ ರೀತಿಯಾದರೆ ನಮ್ಮ ಮಕ್ಕಳ ಕಾಲಕ್ಕೂ ದೊಡ್ಡ ನೀರಾವರಿ ಯೋಜನೆಗಳು ಮುಗಿಯುವುದಿಲ್ಲವೆಂದು ಶತಸಿದ್ಧವಾಗುತ್ತದೆ. ೧೯೮೧ಕ್ಕೆ ಕಬಿನಿ ಪ್ರಾಜೆಕ್ಟ್ ಪ್ರಾರಂಭವಾಗಿ ೨೨ ವರ್ಷವಾಯಿತು. ಆದರೂ ಅದನ್ನು ಮುಗಿಸದೆ ಇನ್ನೂ ೮-೧೦ ವರ್ಷಗಳು ಬೇಕಾಗುತ್ತದೆಂದರೆ ಕೇವಲ ೨-೩ ವರ್ಷಗಳ ಹಿಂದೆ ಆರಂಭವಾಗಿರುವ ಯೋಜನೆಗಳನ್ನು ನಮ್ಮ ಮರಿಮಕ್ಕಳ ಕಾಲಕ್ಕೆ ನೋಡಬಹುದೆಂದು ಕಾಣುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಬಹಳ ದೀರ್ಘವಾಗಿ ಆಲೋಚಿಸಬೇಕೆಂದು ಹೇಳುತ್ತೇನೆ. ಯಾವ ಬಾಬುಗಳಿಗೆ ಹಣವನ್ನು ಕಡಿಮೆ ಮಾಡಿ ದೊಡ್ಡ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಒದಗಿಸಬಹುದೆಂಬುದನ್ನು ಯೋಚಿಸಬೇಕಾಗಿದೆ. ಆ ಬಗ್ಗೆ ಮಾನ್ಯ ದೇವೇಗೌಡರು ಕೂಡ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಸಲಹೆ ಮಾಡಿದ ಹಾಗೆ ವಿಶ್ವಬ್ಯಾಂಕಿನಿಂದ ಎಷ್ಟು ಹಣವನ್ನು ತರುವುದಕ್ಕೆ ಸಾಧ್ಯವಾಗುತ್ತದೆ ಅಷ್ಟನ್ನು ತರಬೇಕೆಂದು ಹೇಳುತ್ತೇನೆ. ಸರ್ಕಾರದಲ್ಲಿ ಪ್ರಭಾವಶಾಲಿಗಳಾಗಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಲು ಶಕ್ತಿ ಇರುವ ಕಾಲದಲ್ಲೇ ಸಾಕಷ್ಟು ರಾಜ್ಯಕ್ಕೆ ಬೇಕಾದ ಕೆಲಸಗಳನ್ನು ಮಾಡಿಸಿಕೊಳ್ಳಬೇಕು. ಇಷ್ಟು ಶಕ್ತಿ ಇದ್ದರೂ ಕೂಡ ಕಾವೇರಿ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಂಡು ಅದಕ್ಕೆ ಬೇಕಾದ ಹಣವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆಂಬುದು ನನಗೆ ಅರ್ಥವಾಗದ ಪ್ರಶ್ನೆಯಾಗಿದೆ. ತಮಿಳ್ನಾಡಿನಲ್ಲಿ ಬೇರೆ ಸರ್ಕಾರ ಇರುವುದರಿಂದ ಅವರನ್ನು ನಾವು ಕೇಳುವುದಕ್ಕೆ ಕಷ್ಟವಾಗುತ್ತದೆ, ಹೇಮಾವತಿ ಯೋಜನೆ ಬಗ್ಗೆ ಹೇಳುವುದಾದರೆ ಅಲ್ಲಿ ಡ್ಯಾಂ ಕೆಲಸ ಪೂರ್ಣವಾಗಿದೆ. ಬಲ ಮತ್ತು ಎಡದಂಡೆ ಕಾಲುಗಳನ್ನು ಟ್ಯಾಕಲ್ ಮಾಡುತ್ತಿದ್ದಾರೆ. ಆ ಕೆಲಸ ಇನ್ನು ಎಷ್ಟು ವರ್ಷಕ್ಕೆ ಮುಗಿಯುತ್ತದೆಂಬುದು ಗೊತ್ತಿಲ್ಲ. ನಮ್ಮ ಹೆಗ್ಗಡದೇವನಕೋಟೆಯಲ್ಲಿ ಕಬನಿ ಯೋಜನೆ ಮಾಡಿ ನೂರಾರು ಹಳ್ಳಿಗಳನ್ನು ಮುಳುಗಿಸಿ ನಂಜನಗೂಡು,

ಟಿ. ನರಸೀಪುರ ಕೊಳ್ಳೇಗಾಲ ತಾಲ್ಲೂಕುಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರೆ ಅದೇ ತಾಲ್ಲೂಕಿಗೆ ಅನುಕೂಲವಾಗತಕ್ಕಂಥ ತಾರಕಾ ಪ್ರಾಜೆಕ್ಟಿಗೆ ಹಣ ಒದಗಿಸಿರುವುದು ಕಡಿಮೆ. ಅದನ್ನು ಮನಸ್ಸು ಮಾಡಿದ್ದರೆ ೫ ವರ್ಷಗಳಲ್ಲಿ ಮುಗಿಸಬಹುದಿತ್ತು. ಯಾವ ತಾಲ್ಲೂಕಿನಲ್ಲಿ ಹಳ್ಳಿಗಳು ಮುಳುಗಡೆಯಾಗಿ ನೂರಾರು ಜನ ರೈತರಿಗೆ ತೊಂದರೆಯಾಯಿತೋ ಅವರಿಗೆ ಅನುಕೂಲವಾಗತಕ್ಕ ತಾರಕ ಪ್ರಾಜೆಕ್ಟನ್ನು ಇಷ್ಟು ಹೊತ್ತಿಗೆ ಮುಗಿಸಬಹುದಿತ್ತು, ಆದರೆ ಅದಕ್ಕೆ ಹೆಚ್ಚಿಗೆ ಹಣವನ್ನೇ ಒದಗಿಸಿಲ್ಲ. ಹುಣಸೂರು ತಾಲ್ಲೂಕಿಗೆ ಕಕ್ಕಟಹೊಳೆ ಎಂಬ ಪ್ರಾಜೆಕ್ಟ್ ಆಗುತ್ತದೆಂದು ಇದ್ದ. ಅದು ಆದರೆ ಹುಣಸೂರು ಮತ್ತು ಮೈಸೂರು ತಾಲ್ಲೂಕಿನ ೫೦ ಸಾವಿರ ಎಕರೆಗೆ ನೀರು ದೊರೆಯುತ್ತದೆ. ಆದರೆ ಅದನ್ನು ಇಲ್ಲಿಯೂ ಪ್ರಸ್ತಾಪಿಸಿಲ್ಲ. ಆ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ ಇನ್ವೆಸ್ಟಿಗೇಷನ್‌ನಲ್ಲಿ ಇದೆ ಎಂದು ಕಳೆದ ೧೦ ವರ್ಷಗಳಿಂದ ಇವತ್ತಿಗೂ ಉತ್ತರ ಬರುತ್ತಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಆ ಪ್ರಾಜೆಕ್ಟ್ ಯಾವುದು.

ಡಾ|| ಹೆಚ್. ಎಲ್. ತಿಮ್ಮೇಗೌಡ.—ಕಕ್ಕಟಹೊಳೆ ಪ್ರಾಜೆಕ್ಟ್ ಎಂದು ಇತ್ತು. ಅದನ್ನು ಈಗ ಕಕ್ಕಟಹೊಳೆ ಪ್ರಾಜೆಕ್ಟ್ ಎಂದೆ ಮಾಡಿದ್ದಾರೆ. ಈ ಯೋಜನೆಯ [illegible]

ಗಳಿದ್ದರೂ ಪರಿಹಾರ ಮಾಡಿ ಸಮುದ್ರಕ್ಕೆ ಹಾಳಾಗಿ ಹೋಗುತ್ತಿರುವ ನೀರನ್ನು ಲಕ್ಷ್ಮಣ ತೀರ್ಥಕ್ಕೆ ಅಲ್ಲಿಂದ ಕೃಷ್ಣರಾಜಸಾಗರಕ್ಕೆ ತಂದು ವರುಣಾ ನಾಲೆಗೆ ಕೊಡುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದು ದೀರ್ಘವಾಗಿ ಯೋಚನೆ ಮಾಡತಕ್ಕ ಪ್ರಶ್ನೆ. ತಮಿಳುನಾಡಿಗೂ, ಕೇರಳಕ್ಕೂ ವಿವಾದ ಇದ್ದರೆ ಆದಷ್ಟು ಜಾಗ್ರತೆ ಅದನ್ನು ಪರಿಹಾರ ಮಾಡಿಕೊಳ್ಳಬೇಕು. ಕೆಲವು ಅಧಿಕಾರಿಗಳು ಹೇಳಿರುವುದನ್ನು ನಾನು ಕೇಳಿದ್ದೇನೆ. ನಿಜ ಪರಿಸ್ಥಿತಿ ಈ ಬಗ್ಗೆ ಏನು ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ ನನ್ನ ಶ್ರೀಮತಿಯವರೇ ಮೇಲ್ಮನೆಯಲ್ಲಿ ಈ ಪ್ರಶ್ನೆ ಬಗ್ಗೆ ಕೇಳಿದಾಗ ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಕಾರಣ ಮಾತ್ರ ಹೇಳಿಲ್ಲ. ಇನ್‌ವೆಸ್ಟಿಗೇಷನ್ ಆಗಿ ೧೯೭೮ನೇ ಇಸವಿಯಲ್ಲಿ ೭ ಕೋಟಿ ರೂಪಾಯಿಗೆ ಅಂದಾಜು ಕೂಡ ಆಗಿದೆ. ಈಗ ಹೆಚ್ಚಾಗಿರಬಹುದು. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಎಲ್ಲಾ ಮುಗಿದಿದೆ. ಎಲ್ಲಾ ತಯಾರಿಯೂ ಆಗಿದೆ. ಆದರೆ ಸರ್ಕಾರದವರು ಆದಷ್ಟು ಜಾಗ್ರತೆ ಮಾಡುವುದಕ್ಕೆ ತೀರ್ಮಾನ ಮಾಡಬೇಕು ಅಷ್ಟೆ. ಮಂಡ್ಯ ಜಿಲ್ಲೆಯ ರೈತ ಸ್ನೇಹಿತರು ವರುಣಾ ನಾಲೆಗೆ ವಿರೋಧವಾಗಿ ಹಿಂದೆ ಚಡ್ಡಿ ಮೆರವಣಿಗೆ ಮಾಡಿದ್ದರು. ಅವರು ಏತಕ್ಕೋಸ್ಕರ ಮಾಡಿದರು ಎಂದರೆ ಅವರಿಗೆ ನೀರು ಸಿಗುವುದಿಲ್ಲ ಎಂಬ ಹೆದರಿಕೆ ಇದೆ. ಅದನ್ನು ಇನ್ನೂ ಪರಿಹಾರ ಮಾಡಲಿಕ್ಕೆ ಆಗಿಲ್ಲ. ವರುಣಾ ನಾಲೆಗೆ ನೀರನ್ನು ಕೊಟ್ಟರೆ ಮಂಡ್ಯ ಜಿಲ್ಲೆಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ, ಪಾಂಡವಪುರ ತಾಲೂಕಿನ ಸಕ್ಕರೆ ಕಾರ್ಖಾನೆಗೆ, ಮಂಡ್ಯ ಸಕ್ಕರೆ ಕಾರ್ಖಾನೆಗೆ, ಕಾಳಮುದ್ದನದೊಡ್ಡಿ ಸಕ್ಕರೆ ಕಾರ್ಖಾನೆಗೆ ಮತ್ತು ನೂರಾರು ಖಂಡಸಾರಿ ಕಾರ್ಖಾನೆಗೆ ಕಬ್ಬು ಬೆಳೆಯುವುದಕ್ಕೆ ನೀರು ಕೊಡುವುದಕ್ಕಾಗುವುದಿಲ್ಲ, ಹೀಗಾದರೆ ಮೂರೂ ಕಾರ್ಖಾನೆಗಳನ್ನೂ ಮುಚ್ಚಬೇಕಾಗುತ್ತದೆ. ಆಗ ಸರ್ಕಾರಕ್ಕೆ ಬರುವ ನೂರಾರು ಕೋಟಿ ರೂಪಾಯಿ ವರಮಾನ ಬರತಕ್ಕದ್ದು ಹೋಗುವುದಲ್ಲದೆ ರೈತರಿಗೆ ಬರತಕ್ಕ ನೂರಾರು ಕೋಟಿ ರೂಪಾಯಿ ವರಮಾನ ಕೂಡ ಹೋಗುತ್ತದೆ, ಆದ್ದರಿಂದ ಮಂಡ್ಯ ಜಿಲ್ಲೆಯ ರೈತರಿಗೂ ಅನುಕೂಲವಾಗಬೇಕಾದರೆ ಕಕ್ಕಟಹೊಳೆ ಪ್ರಾಜೆಕ್ಟನ್ನು ಆದಷ್ಟು ಜಾಗ್ರತೆ ಮಾಡಬೇಕು. ಯಾವುದೇ ವಿವಾದಗಳಿದ್ದರೂ ಅದನ್ನು ಪರಿಹಾರ ಮಾಡಬೇಕೆಂದು ಹೇಳುತ್ತಾ ಕಕ್ಕಟಹೊಳೆ ಪ್ರಾಜೆಕ್ಟನ್ನು ಆದಷ್ಟು ಜಾಗ್ರತೆ ಆರಂಭ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮತ್ತು ಈ ಯೋಜನೆಗಳಿಗೆ ಸರ್ಕಾರದವರು ಒದಗಿಸಿರುವ ಹಣ ಬಹಳ ಕಡಿಮೆ, ಇದೇರೀತಿ ಮಾಡಿದರೆ ನಮ್ಮ ಮರಿಮಕ್ಕಳ ಕಾಲಕ್ಕೂ ಈ ಯೋಜನೆಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಹೆಚ್ಚಿಗೆ ದುಡ್ಡನ್ನು ತೆಗೆದುಕೊಳ್ಳುವದಕ್ಕೆ ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಲ್ಲಿ ಪ್ರಯತ್ನ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ನಾಲ್ಕೈದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ ಆಹಾರ ಧಾನ್ಯಗಳನ್ನು ಮತ್ತಿತರ ಧಾನ್ಯಗಳನ್ನು ರಫ್ತು ಮಾಡುವಷ್ಟು ಹೆಚ್ಚಿಗೆ ಬೆಳೆಯುತ್ತಿದ್ದೇವೆ ಎಂದು ಏನು ಹೇಳಿಕೊಳ್ಳುತ್ತಿದ್ದೆವು ಈ ವರ್ಷ ಗೋಧಿಯನ್ನು ಆಮದುಮಾಡಿಕೊಳ್ಳುತ್ತೇವೆ ಎಂದು ಕೊಟ್ಟಿರುವ ಹೇಳಿಕೆಯನ್ನು ನೋಡಿದಮೇಲೆ ಈ ದೇಶದಲ್ಲಿ ನಮಗೆ ಬೇಕಾದಷ್ಟು ಆಹಾರಧಾನ್ಯಗಳನ್ನು ಬೆಳೆಯುತ್ತಿಲ್ಲ ಎಂದು ಸ್ವಾಭಾವಿಕವಾಗಿ ಅರ್ಥವಾಗುತ್ತದೆ. ಕೆಲವು ಧಾನ್ಯಗಳನ್ನು ರಫ್ತು ಮಾಡಿರಬಹುದು. ಅಂದಾಕ್ಷಣಕ್ಕೆ ನಮಗೆ ಸಾಕಾದಷ್ಟು ಎಲ್ಲ ಆಹಾರಧಾನ್ಯಗಳನ್ನೂ ಬೆಳೆಯುತ್ತಿದ್ದೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಕೊರತೆಯನ್ನು ಪರಿಹಾರ ಮಾಡಬೇಕಾದರೆ ನೀರಾವರಿ ಯೋಜನೆಗಳನ್ನು ಮುಗಿಸಬೇಕು. ಇದು ಆದ್ಯಕರ್ತವ್ಯ ಎಂದು ಸರ್ಕಾದವರು ತಿಳಿದುಕೊಂಡು ಯೋಜನೆಗಳನ್ನು ಆದಷ್ಟು ಬೇಗಮುಗಿಸಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ನೀವೇ ಹೇಳಿ ಎಲ್ಲಿಂದ ದುಡ್ಡು ಒದಗಿಸಬಹುದು ಎಂದು ಹೇಳುತ್ತಾರೆ. ಮಾನ್ಯ ದೇವೇಗೌಡರು ಹೇಳಿದಹಾಗೆ ಸಮಿತಿಯನ್ನು ಮಾಡಿದರೆ ಸಲಹೆ ಕೊಡಬಹುದು. ಸರ್ಕಾರ ಮತ್ತು ಮಂತ್ರಿಮಂಡಲ ಇದ್ದು ನಮ್ಮಿಂದ ಸಲಹೆಗಳು ಬೇದಿದ್ದರೂ ಕೂಡ ಸಂಪನ್ಮೂಲಗಳನ್ನು ಕಂಡುಹಿಡಿದು ನಮ್ಮಿಂದ ಶಹಭಾಸ್‌ಗಿರಿ ತೆಗೆದುಕೊಳ್ಳಬೇಕೇ ಹೊರತು ನೀವೇ ಹೇಳಿ ಎಂದು ಕಾಯುತ್ತಾ ಕುಳಿತುಕೊಳ್ಳಬಾರದು. ೧೯೮೦–೮೧ನೇ ಸಾಲಿನಲ್ಲಿ ೧೨೫ ಕೋಟಿ ರೂಪಾಯಿ ಒದಗಿಸಿದ್ದೀರಿ. ಅದೇ ಲೆಕ್ಕದಲ್ಲಿ ೧೫೦ ಕೋಟಿ ರೂಪಾಯಿಗಳನ್ನು ಮೇಜರ್ ಇರಿಗೇಷನ್‌ಗೆ ಪ್ರೊವೈಡ್ ಮಾಡುವ ಬದಲಾಗಿ ಈ ಸಾರಿ ೧೨೫ ಕೋಟಿ ಮಾಡುತ್ತಿದ್ದೀರಿ, ಈ ಗತಿಯಲ್ಲಿ ಹೋದರೆ ಅದು ಸರ್ಕಾರಕ್ಕೆ ಮರ್ಯಾದೆ ತರತಕ್ಕ ವಿಚಾರವಾಗುವುದಿಲ್ಲ ಮತ್ತು ಸರ್ಕಾರದ ಮೇಲೆ ಜನಗಳಿಗೆ ನಂಬಿಕೆ ಬರತಕ್ಕ ಅವಕಾಶವಾಗುವುದಿಲ್ಲ ಎಂದು ಹೇಳಿ ಈ ಬೇಡಿಕೆಗಳಲ್ಲಿ ನೀರಾವರಿ ಯೋಜನೆ ಮತ್ತು ಪವರ್ ಪ್ರಾಜೆಕ್ಟಿಗೆ...

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ದೃಷ್ಟಿಯಿಂದ ಏನು ಮಾಡಬೇಕೋ ಅದನ್ನು ಮಾಡಿಟ್ಟಿದ್ದೇವೆ. ಅದಕ್ಕೆ ಹೊರತಾದ ವಿಷಯಗಳಿದ್ದರೆ ತಮ್ಮಿಂದ ತಿಳಿದು ಕೊಳ್ಳುವುದಕ್ಕೆ ಅಭ್ಯಂತರ ವಿಲ್ಲ. ಅದು ತಪ್ಪಾಗುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾನು ಅದನ್ನೇ ಹೇಳಿದ್ದು ೧೨೫ ಕೋಟಿ ರೂಪಾಯಿಗಳನ್ನು ೧೯೭೯-೮೦ನೇ ಸಾಲಿನಲ್ಲಿ ಒದಗಿಸಿ ಖರ್ಚು ಮಾಡಿ ೧೯೮೦-೮೧ನೇ ಸಾಲಿನ ೧೨೨ ಕೋಟಿ ರೂಪಾಯಿ ಗಳನ್ನು ಭಾರಿ ನೀರಾವರಿ ಯೋಜನೆಗೆ ಒದಗಿಸಿದರೆ ಹೇಗೆ? ಅದೇ ಕಾಸ್ಟ್‌ನಲ್ಲಿ ಆದರೂ ಕೂಡ ೧೮೦ ಕೋಟಿ ರೂಪಾಯಿ ಒದಗಿಸಬೇಕಾಗಿತ್ತು. ಮೂರು ವರ್ಷದಲ್ಲಿ ಯಾವ ವೇಗದಲ್ಲಿ ಈ ಪ್ರಾಜೆಕ್ಟ್‌ಗಳನ್ನು ನಡೆಸಿಕೊಂಡುಹೋಗುತ್ತಿದ್ದಿರಿ ಅದಕ್ಕಿಂತಲೂ ಹೆಚ್ಚಿಗೆ ಕೆಲಸ ಮಾಡಬೇಕು ಹೆಚ್ಚಿಗೆ ಆದಾಯ ಈಗ ಬರುತ್ತಿದೆ. ಹೀಗಿದ್ದೂ ಕಡಿಮೆ ದುಡ್ಡನ್ನು ಒದಗಿಸಿದ್ದೀರಿಲ್ಲ ಇದು ಏತಕ್ಕೆ ? ಏತಕ್ಕೋಸ್ಕರ ಕಡಿಮೆ ಮಾಡಬೇಕಿತ್ತು ? ಏನು ಕಳ್ಳಭಟ್ಟಿ ಸಾರಾಯಿಗೆ ದುಡ್ಡು ಕೊಡಬೇಕಾಯಿತೇ ಅಥವಾ ಅವರನ್ನು ಹಿಡಿಯುವುದಕ್ಕೆ ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ದುಡ್ಡು ಬೇಕಾಯಿತೇ ? ಯಾತ ಕ್ಕೋಸ್ಕರ ಕಡಿಮೆ ಮಾಡಿದ್ದೀರಿ ಎಂದು ಕೇಳಬೇಕಾಗಿದೆ, ನಮ್ಮ ಸಲಹೆ ಸರ್ಕಾರದವರು ಕೇಳಿದರೆ ದೇವೇಗೌಡರು ಹೇಳಿದಹಾಗೆ ಈ ಸದನದ ಒಂದು ಕಮಿಟಿ ಮಾಡಿ. ಕಾವೇರಿ ಬೇಸಿನ್, ಕೃಷ್ಣ ಬೇಸಿನ್‌ಗೆ ಸಂಬಂಧಪಟ್ಟಂತೆ ಈ ಕಮಿಟಿ ಮಾಡಿದರೆ ಸಲಹೆಗಳನ್ನು ಕೊಡಬಹುದು. ಅದನ್ನು ಮಾಡಿ. ಅದನ್ನು ಮಾಡುವುದಕ್ಕೆ ಇಚ್ಛೆ ಇಲ್ಲದಿದ್ದರೆ ನೀವೇ ಮಾಡುವುದಕ್ಕೆ ಸಮರ್ಥರು ಎಂದು ಘೋಷನೆ ಮಾಡಿಕೊಳ್ಳ ಬೇಕಾಗುತ್ತದೆ. ಒಂದು ವೇಳೆ ನೀವೇ ಸಮರ್ಥರು ಎಂದು ಹೇಳುವುದಾದರೆ ಅದನ್ನು ಕಾರ್ಯದಲ್ಲಿ ತೋರ್ಪಡಿಸಿಕೊಳ್ಳಬೇಕಾದರೆ ೧೨೨ ಕೋಟಿ ರೂಪಾಯಿ ಬದಲಾಗಿ ೨೫೦ ಕೋಟಿ ರೂಪಾಯಿಗಳನ್ನು ಮೇಜರ್ ಇರಿಗೇಷನ್‌ಗೆ ಪ್ರೊವೈಡ್ ಮಾಡಬೇಕಾಗಿತ್ತು. ಆಗ ಯಾರ ಸಲಹೆಯೂ ಬೇಕಾಗಿಲ್ಲ. ಮಂತ್ರಿಮಂಡಲದಲ್ಲಿರತಕ್ಕ ಪರಿಣತರು ಹೆಚ್ಚಿಗೆ ಸಂಪನ್ಮೂಲಗಳನ್ನು ಹುಟ್ಟಿಸುವುದಕ್ಕೆ ಶಕ್ತರಾಗಿದ್ದಾರೆ, ಅಧಿಕಾರಿಗಳು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಎಂದು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ೧೮೦ ಕೋಟಿ ರೂಪಾಯಿ ಬದಲು ೧೨೨ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿ ಇದನ್ನು ಮಾಡುವು ದಕ್ಕೆ ಸಾಧ್ಯವಾಗುವುದಿಲ್ಲ ಎಂದು ತೋರಿಸಿಕೊಟ್ಟಿದ್ದಿರಿ. ನೀವೇ ಸಂಪನ್ಮೂಲಗಳನ್ನು ಕಂಡುಹಿಡಿದು ಏನಾದರೂ ಮಾಡಿದ್ದರೆ ಶಹಭಾಸ್‌ಗಿರಿ ಕೊಡುತ್ತಿದ್ದೆವು. ಆದರೆ ದುಡ್ಡನ್ನು ಕಡಿಮೆ ಮಾಡಿದ್ದೀರಿ. ಆದರೆ ಸರ್ಕಾರದವರು ನಾವು ಎಲ್ಲಾ ಪ್ರಯತ್ನ ಮಾಡಿ ಹಣ ಒದಗಿಸಿದ್ದೇವೆ ಎಂದು ಹೇಳತಕ್ಕ ಮಾತನ್ನು ಖಂಡಿತವಾಗಿ ಒಪ್ಪುವುದಕ್ಕಾಗುವುದಿಲ್ಲ, ಈಗಲಾದರೂ ಹೆಚ್ಚು ಹಣ ಒದಗಿಸಿ ಯೋಜನೆಗಳನ್ನು ಶೀಘ್ರ ವಾಗಿ ಮುಗಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಸಮಯವನ್ನು ಕೊಟ್ಟಿದ್ದಕ್ಕಾಗಿ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೮. ಪಿ.ಎಂ.

† ಶ್ರೀ ಕೆ.ಹೆಚ್. ಹನುಮೇಗೌಡ. (ಹಾಸನ)—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಸುಮಾರು ಹದಿನೈದು ವರ್ಷಗಳ ಹಿಂದೆ, ಹಾಸನ ಜಿಲ್ಲೆಯಲ್ಲಿ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಿಗೆ ಶಾಶ್ವತ ಪರಿಹಾರವನ್ನೊದಗಿಸುವುದಕ್ಕಾಗಿ ಯಗಚಿ ಯೋಜನೆ ಮಾಡಬೇಕೆಂದು ನಕ್ಷೆ ಮತ್ತು ಅಂದಾಜು ತಯಾರಾಯಿತು. ಸುಮಾರು ಹದಿನಾರು ಕೋಟಿ ರೂಪಾಯಿಗಳ ಈ ಯೋಜನೆ ಯಿಂದ ಸುಮಾರು ಅರವತ್ತು ಸಾವಿರ ಎಕರೆ ಪ್ರದೇಶವನ್ನೊಳಗೊಂಡ ಬೇಲೂರು ಮತ್ತು ಹಾಸನ ತಾಲ್ಲೂಕಿಗೆ ನೀರಾವರಿಯಾಗಬೇಕಾಗಿತ್ತು. ಆದರೆ, ಈ ಯೋಜನೆಯ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಹೋಗಿದೆ, ಒಪ್ಪಿಗೆ ಇನ್ನೂ ಬಂದಿಲ್ಲವೆಂದು ಸರ್ಕಾರದವರು ಹೇಳು ತ್ತಿದ್ದರೆ ಇನ್ನೊಂದು ಕಡೆ ತಮಿಳುನಾಡು ಮತ್ತು ಕರ್ನಾಟಕಕ್ಕೂ ಕಾವೇರಿ ಜಲವಿವಾದದ ಕಾರಣ ಇನ್ನೂ ಪ್ರಾರಂಭವಾಗಿಲ್ಲ ಎಂದು ಹೇಳಲಾಗುತ್ತಿದೆ. ಹಾರಂಗಿ ಮತ್ತು ಹೇಮಾವತಿ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಡದಿದ್ದರೂ ಸಹ, ಆ ಭಾಗದ ರೈತರ ಹಿತದೃಷ್ಟಿಯಿಂದ ಕೆಲಸವನ್ನು ಪ್ರಾರಂಭ ಮಾಡಿದ್ದು, ಅವೀಗ ಮುಗಿಯುತ್ತಾ ಬಂದಿವೆ. ಈಗ ಆ ಭಾಗದ ಜನರಿಗೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ. ಈ ಸರ್ಕಾರದ ಬಗ್ಗೆ ಆ ಭಾಗದ ಜನರಲ್ಲಿ ಒಂದು ಒಳ್ಳೆಯ ಭಾವನೆ ಮೂಡಿ ಬಂದಿದೆ. ಯಗಚಿ ಯೋಜನೆಯು, ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಂಡಿರುವ ಬೇರೆ ಯೋಜನೆಗಳಿಗಿಂತಲೂ

ಬಹಳ ಮುಖ್ಯವಾದ ಯೋಜನೆ ಎಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಕಡಿಮೆ ವೆಚ್ಚದಲ್ಲಿ ಹೆಚ್ಚು ಪ್ರದೇಶ ನೀರಾವರಿ ಸೌಕರ್ಯವನ್ನು ಇದರಿಂದ ಒದಗಿಸಬಹುದಾಗಿದೆ, ಹಾಸನ ಮತ್ತು ಬೇಲೂರು ತಾಲ್ಲೂಕುಗಳು ಪ್ರತಿ ವರ್ಷ ಮಳೆಯಾಗದೆ ಕ್ಷಾಮಕ್ಕೆ ತುತ್ತಾಗುತ್ತಿವೆ. ಈ ಕ್ಷಾಮದ ದವಡೆಯಿಂದ ಆ ಭಾಗದ ಜನರನ್ನು ಬಿಡುಗಡೆ ಮಾಡಬೇಕಾದರೆ ಯಗಚಿ ಯೋಜನೆಯನ್ನು ಆದಷ್ಟು ಬೇಗನೆ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಇದಲ್ಲದೆ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳ ನಡುವೆ ವಿವಾದದ ಕಾವೇರಿ ಕಣಿವೆಯು ಪ್ರದೇಶವು ಬೇಲೂರುವರೆಗೆ ಮಾತ್ರವಿದ್ದು ಅಲ್ಲಿಂದ ಕೆಳಗೆ ಸೇರಿರತಕ್ಕ ಪ್ರದೇಶಗಳಲ್ಲಿ ಅಣೆಕಟ್ಟು ಕಟ್ಟಬೇಕಾದರೆ, ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಬೇಕೆಂದು ನಾನು ಕೇಳಿದ್ದೇನೆ. ಆದರೆ ಇದನ್ನು ಬೇಲೂರು ಮೇಲ್ಭಾಗದಲ್ಲಿ ಬರುವ ಪ್ರದೇಶ ದಲ್ಲಿ ಕಟ್ಟುವುದರಿಂದ ವಿವಾದದ ವ್ಯಾಪ್ತಿಗೆ ಇದು ಸೇರುವುದಿಲ್ಲ. ಆದುದರಿಂದ ಈ ಯೋಜನೆಯನ್ನು ತಕ್ಷಣ ಕೈಗೊಳ್ಳಬೇಕೆಂದು ವಿನಯಪೂರ್ವಕವಾಗಿ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಹೇಮಾವತಿ, ಹಾರಂಗಿ ಮುಂತಾದ ಭಾರಿ ನೀರಾವರಿ ಯೋಜನೆಗಳ ಕೆಲಸಗಳು ಆಗುತ್ತಿವೆ, ಆದರೆ ಕೆಲಸಗಳು ನಿಗದಿಯಾದ ಕಾಲಕ್ಕೆ ಮುಗಿಯುತ್ತಿಲ್ಲ. ಅಲ್ಲಿಗೆ ಸಾಕಷ್ಟು ಸಿಬ್ಬಂದಿ ವರ್ಗ ಮತ್ತು ಯಂತ್ರೋಪಕರಣಗಳನ್ನು ಒದಗಿಸಿದ್ದರೂ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಒದಗಿಸದೇ ಇರುವುದ ರಿಂದ ಕೆಲಸ ಕಾರ್ಯಗಳು ನಡೆಯುವುದು ತಡವಾಗುತ್ತಿದ್ದು ನಾಲ್ಕು ವರ್ಷಗಳಲ್ಲಿ ಮುಗಿಯಬೇಕಾಗಿದ್ದ ಕೆಲಸವು ೮–೧೦ ವರ್ಷಗಳಾದರೂ ಮುಗಿಯಲಾರದ ಪರಿಸ್ಥಿತಿಗೆ ಬಂದು ಮುಟ್ಟುತ್ತಿವೆ. ಹೀಗಾಗಿ ಪ್ರತಿ ವರ್ಷ schedule of rates ಜಾಸ್ತಿಯಾಗಿ ಕೊನೆಗೆ ಅದರ ಹೊರೆ ಸರ್ಕಾರ ಮತ್ತು ರೈತರ ಮೇಲೆ ಬೀಳುತ್ತದೆ. ಈ ಯೋಜನೆಗಳಿಗೆ ಒದಗಿಸಲು ಸರ್ಕಾರದ ಬಳಿ ಹಣವಿಲ್ಲವೆಂದರೆ, ವಿಶ್ವ ಬ್ಯಾಂಕಿ ನಿಂದಾಗಲೀ ಅರಬ್ ದೇಶಗಳಿಂದಾಗಲೀ ಅಥವಾ ನಮ್ಮ ರಾಷ್ಟ್ರದ ಷೆಡ್ಯೂಲ್ಡ್ ಬ್ಯಾಂಕುಗಳಿಂದಾಗಲೀ ಹಣ ತಂದು, ಭಾರಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಒಂದು ಕಾರ್ಪೊರೇಷನ್ ಮಾಡಿ, ಕೆಲಸ ಗಳನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು, ಈಗ ತೆಗೆದುಕೊಂಡಿರುವ ಭಾರಿ ನೀರಾವರಿ ಯೋಜನೆಗಳ ಕೆಲಸದಲ್ಲಿ ಸಾಮಾನ್ಯವಾಗಿ ಕೇಳಿಬರುವ ದೋಷಾರೋಪಣೆ ಎಂದರೆ–ನೂರು ರೂಪಾಯಿ ಖರ್ಚು ಆದರೆ ಅದರಲ್ಲಿ ಕೇವಲ ೫೦–೬೦ ರೂಪಾಯಿಗಳು ಮಾತ್ರ ನ್ಯಾಯವಾಗಿ ಖರ್ಚಾಗುತ್ತದೆ. ಇನ್ನುಳಿದುದರಲ್ಲಿ ೨೦ ಭಾಗ ಕಂಟ್ರಾಕ್ಟರುಗಳಿಗೂ ಮತ್ತು ೨೦ ಭಾಗ ಇಂಜಿನಿಯರು ಗಳ ಜೇಬಿಗೂ ಹೋಗುತ್ತದೆಂದು ನಾನು ಕೇಳಿ ತಿಳಿದುಕೊಂಡಿದ್ದೇನೆ. ಯೋಗ್ಯರಾದ, ಉತ್ತಮವಾದ ಮತ್ತು ದಕ್ಷರಾದ ಇಂಜಿನಿಯರುಗಳು ಎಲ್ಲ ಇಲಾಖೆಗಳಲ್ಲೂ ಇರುತ್ತಾರೆ. ಇಂಥವರಿಗೆ ಪುರಸ್ಕಾರ ಕೊಡುವುದರ ಜೊತೆಗೆ ಯಾರು ಈ ರೀತಿ ಹಣವನ್ನು ಪೋಲಾಗುವುದಕ್ಕೆ ಕಾರಣ ಕರ್ತರಾಗಿದ್ದಾರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಇಲಾಖೆಗೆ ಬಂದಿರುವ ಕೆಟ್ಟ ಹೆಸರನ್ನು ಹೋಗ ಲಾಡಿಸಬೇಕೆಂದು ಹೇಳಬಯಸುತ್ತೇನೆ.

ಹೇಮಾವತಿ ಅಣೆಕಟ್ಟನ್ನು ಹಾಸನ ತಾಲ್ಲೂಕಿನಲ್ಲಿ ಕಟ್ಟಲಾಗುತ್ತಿದೆ. ಈ ಯೋಜನೆಗಾಗಿ, ಎಕರೆಗೆ ಸುಮಾರು ೧೫–೨೦ ಸಾವಿರ ರೂಪಾಯಿಗಳನ್ನು ಕೊಟ್ಟರೂ ಸಿಗದಂತಹ ಫಲವತ್ತಾದ ಸುಮಾರು ಮೂರು–ನಾಲ್ಕು ಸಾವಿರ ಎಕರೆ ಪ್ರದೇಶ ಮುಳುಗಡೆಯಾಗಿದೆ. ಬೇರೆ ಜನರ ಆರ್ಥಿಕ ಅಭಿವೃದ್ಧಿಗೋಸ್ಕರ ಭೂಮಿಯನ್ನು ಕಳೆದುಕೊಂಡು ತ್ಯಾಗ ಮಾಡಿದಂಥ ಜನ ಇಂದು ಬೀದಿ ಪಾಲಾಗಿ ದ್ದಾರೆ. ಅವರಿಗೆ ಪರ್ಯಾಯ ಜಾಗವಾಗಿ ಕೊಟ್ಟಿರುವ ಭೂಮಿಯು ನೀರಾವರಿ ಇಲ್ಲದೆ ಇರುವ ಜಾಗ ವಾಗಿದ್ದು ಅವರಿಗೆ ಬಹಳ ತೊಂದರೆಯಾಗಿದೆ. ಹಾಸನ ತಾಲ್ಲೂಕಿನಲ್ಲಿ ಹೇಮಾವತಿ ಅಣೆಕಟ್ಟಿನ ಪಕ್ಕದಲ್ಲೇ ಇರುವ ಕಟ್ಟಾಯ ಹೋಬಳಿಯಲ್ಲಿ, ಹೀಗೆ ಭೂಮಿಯನ್ನು ಕಳೆದುಕೊಂಡ ನೂರಾರು ಸಂಸಾರಗಳು ನೆಲಸಿವೆ. ಇವರ ಭೂಮಿಗೆ ಏತದ ನೀರಾವರಿ ಯೋಜನೆಯನ್ನು ಮಾಡಿ ಕೊಡಬೇಕೆಂದು ಅಲ್ಲಿನ ಜನ ಆಗಾಗ್ಗೆ ಸರ್ಕಾರಕ್ಕೆ ಮನವಿ ಕೊಟ್ಟು ಒತ್ತಾಯ ಮಾಡಿದ್ದಾರೆ, ಹಣವಸಹಳ್ಳಿ ಕಾವಲ್‌ನಲ್ಲಿ ಏತ ನೀರಾವರಿ ಯೋಜನೆ ಕೈಗೊಂಡರೆ ಭೂಮಿಯನ್ನು ಕಳೆದುಕೊಂಡು ಇಲ್ಲಿ ನೆಲಸಿರುವವರಿಗೆ ಪರಿಹಾರ ಸಿಕ್ಕಂತಾಗುತ್ತದೆಂದು ಸರ್ಕಾರದ ಗಮನಕ್ಕೆ ತಂದಾಗ ೧೯೭೭ರನೇ ಇಸವಿಯಲ್ಲಿ ಸರ್ಕಾರ ಒಂದು ನೀತಿ ನಿರೂಪಣೆಯನ್ನು ಮಾಡಿ, foreshore ನೀರಿನಲ್ಲಿ ಏತ ನೀರಾವರಿಯನ್ನು ಕೈಗೊಳ್ಳ ಕೂಡದೆಂದು ಆದೇಶ ಹೊರಡಿಸಿದೆ ಎಂದು ನನಗೆ ತಿಳಿದುಬಂದಿದೆ. ಇದು ಬಹಳ ಸಂಕಟದ ಸಂಗತಿ ಯಾಗಿದೆ. ಬೇರೆ ಜನರ ಆರ್ಥಿಕಾಭಿವೃದ್ಧಿಗಾಗಿ ತಮ್ಮ ಜಮೀನುಗಳನ್ನು ಕಳೆದುಕೊಂಡ ಜನರಿರುವ

ಕಡೆ ನಾಲ್ಕೈದು ಸಾವಿರ ಎಕರೆಗೆ ನೀರು ಕೊಡುವುದರಿಂದ ಸರ್ಕಾರದ ನೀತಿಯೇನೂ ತಲೆಕೆಳಕಾಗುವುದಿಲ್ಲ ಆದುದರಿಂದ, ಆ ನೀತಿಯನ್ನು ಪುನರ್ ಪರಿಶೀಲಿಸಿ, ಕಬನಿಯಾಗಲೀ ಕೃಷ್ಣ ಮೇಲ್ದಂಡೆಯಾಗಲೀ, ಹೇಮಾವತಿಯಾಗಲಿ–ಜಮೀನು ಮುಳುಗಡೆಯಿಂದಾಗಿ ಅಣೆಕಟ್ಟಿನ ಸಮೀಪ ಪುನರ್ವಸತಿ ಸೌಕರ್ಯ ಕಲ್ಪಿಸಿರುವ ಜನರಿಗೆ ನೀರಾವರಿ ಸೌಕರ್ಯ ಕಲ್ಪಿಸಿ ಕೊಡಲು fore shore water ನಿಂದ ಯಾತ ನೀರಾವರಿ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಸಣ್ಣ ನೀರಾವರಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯದಲ್ಲಿರುವ ನೂರಾರು ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ. ಕೆರೆಗಳನ್ನು ಹೊಸದಾಗಿ ಕಟ್ಟಿದಾಗ ಎಷ್ಟು ಎಕರೆಗೆ ನೀರನ್ನು ಒದಗಿಸಲಾಗುತ್ತಿತ್ತೋ ಅಷ್ಟು ಎಕರೆ ಪ್ರದೇಶಕ್ಕೆ ಇಂದು ನೀರನ್ನು ಒದಗಿಸಲು ಆಗದೆ ಇರುವುದಕ್ಕೆ ಆ ಕೆರೆಗಳಲ್ಲಿ ಹೂಳು ತುಂಬಿಕೊಂಡು ಕೆರೆಯ ನೀರು ಸಂಗ್ರಹಣಾ ಗಾತ್ರ ಮೊದಲಿಗಿಂತಲೂ ಇಂದು ಅರ್ಧ ಕಡಿಮೆಯಾಗಿರುವುದೇ ಕಾರಣವಾಗಿದೆ. ಆದುದರಿಂದ, ಕೆರೆಗಳಲ್ಲಿ ತುಂಬಿರುವ ಹೂಳನ್ನು ಹೊರತೆಗೆಯಬೇಕಾಗಿದೆ. ಆದರೆ, ಹೂಳನ್ನು ತೆಗೆಯಲು ಖರ್ಚು ಬಹಳವಾಗುತ್ತದೆನ್ನುವ ನಿಲುವನ್ನು ಸರ್ಕಾರ ತಾಳಿದೆ ಎಂದು ಗೊತ್ತಾಗಿದೆ. ಇದು ನಿಜವಾಗಿದ್ದರೆ, ಇದಕ್ಕಿಂತಲೂ ರೈತರ ವಿರುದ್ಧ ಕ್ರಮ ಇನ್ನೊಂದಿಲ್ಲವೆಂದು ಹೇಳಬೇಕಾಗಿದೆ, ನೀರಾವರಿ ಇಲ್ಲದೆ ಇರುವ ಪ್ರದೇಶದಲ್ಲಿ ಮತ್ತು ಹೆಚ್ಚು ಮಳೆಯಾಗದೆ ಇರುವ ಪ್ರದೇಶದಲ್ಲಿರುವ ಜನರಿಗೆ ಕೆರೆಕಟ್ಟೆಗಳೇ ವ್ಯವಸಾಯಕ್ಕೆ ಆಧಾರ. ಕೆರೆಗಳು ತುಂಬಿದರೆ ಮಾತ್ರ ಆ ಕೆರೆಗಳನ್ನಾಶ್ರಯಿಸಿದ ಭೂಮಿಯಲ್ಲಿ ವ್ಯವಸಾಯ ಮಾಡಲು ಸಾಧ್ಯ. ನಾವಿಂದು ಕುಡಿಯುವ ನೀರನ್ನು ಜನರಿಗೆ ಒದಗಿಸಲು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಕೊಳವೆ ಬಾವಿಗಳನ್ನು ತೋಡಿದರೂ, ತೋಡಿದ ಐದಾರು ತಿಂಗಳುಗಳಲ್ಲಿ ಅವುಗಳು ಒಣಗಿ ಹೋಗುವುದನ್ನು ನಾನು ಕೇಳಿದ್ದೇನೆ. ಇದಕ್ಕೆ ಕಾರಣ ಭೂಗರ್ಭದಲ್ಲಿ ಜಲಸಂಪತ್ತು ಇಲ್ಲದಿರುವುದು. ಮಳೆಯಾಗಿ ಬಿದ್ದ ನೀರು ಕೆರೆಕಟ್ಟೆಗಳಲ್ಲಿ ಸಂಗ್ರಹವಾಗುವುದರಿಂದ ಭೂಗರ್ಭದಲ್ಲಿ ಜಲಸಂಪತ್ತು ಹೆಚ್ಚುತ್ತದೆ ಆದರೆ, ಕೆರೆ ಕಟ್ಟೆಗಳಲ್ಲಿ ಸಾಕಷ್ಟು ನೀರು ಇಲ್ಲದೇ ಹೋದಾಗ ಭೂಗರ್ಭದ ಜಲಸಂಪತ್ತು ಕಡಿಮೆಯಾಗಿ ತನ್ಮೂಲಕ ಕುಡಿಯುವ ನೀರು ದೊರಕುವುದೂ ಸಹ ದುರ್ಲಭವಾಗುತ್ತದೆ. ಹೂಳು ತುಂಬಿಕೊಂಡಿರುವ ಕೆರೆಗಳನ್ನು ದುರಸ್ತು ಮಾಡಿಸುವುದಕ್ಕೆ ಹಣದ ಪ್ರಶ್ನೆ ಬರಬಹುದು. ಹಣ ಎಷ್ಟಾದರೂ ಖರ್ಚಾಗಲಿ. ಕೆರೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹವಾದರೆ ವ್ಯವಸಾಯಕ್ಕೆ ನೀರು ಸಿಗುವುದಲ್ಲದೆ ಕುಡಿಯುವ ನೀರಿನ ಸಮಸ್ಯೆಯೂ ತನ್ಮೂಲಕ ಬಗೆಹರಿಯುತ್ತದೆ. ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ೪೦–೫೦ ಅಡಿ ಆಳದ ಬಾವಿ ತೆಗೆದರೂ ಯಥೇಚ್ಛವಾಗಿ ನೀರು ಸಿಗುತ್ತಿತ್ತು. ಆದರೆ, ಇಂದು ನೂರಡಿಗಿಂತಲೂ ಆಳ ಹೋದರೂ ನೀರು ಸಿಗುತ್ತಿಲ್ಲ. ಕೊಳವೆ ಬಾವಿಗಳನ್ನು ತೆಗೆದರೂ ಅವು ಒಣಗುವ ಪರಿಸ್ಥಿತಿ ಬಂದಿದೆ. ಕೆರೆಗಳಲ್ಲಿರುವ ಹೂಳು ತೆಗೆದು ದುರಸ್ತು ಮಾಡುವ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳದೆ ಕಡೆಗಣಿಸಿದ ಫಲವೇ ಇಂದು ನಾವು ಕುಡಿಯುವ ನೀರಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಪರಿಸ್ಥಿತಿಗೆ ಬಂದಿರುವುದು. ಎಲ್ಲಿ ಕೆರೆಕಟ್ಟೆಗಳು ಹೆಚ್ಚು ಇರುತ್ತವೆ ಅಲ್ಲಿ ಭೂಗರ್ಭ ಸಂಪತ್ತು ಜಾಸ್ತಿ ಇರುತ್ತದೆ. ಮತ್ತು ಅಂತಹ ಕಡೆಗಳಲ್ಲಿ ಭೂಮಿಯು ಫಲವತ್ತಾಗಿ ತೆಂಗು ಮತ್ತು ಅಡಿಕೆ ಮರಗಳು ಸೊಂಪಾಗಿ ಬೆಳೆದು ಹೆಚ್ಚು ಫಲವನ್ನು ಕೊಡುತ್ತವೆ. ಆದರೆ, ಯಾವಾಗ ಕೆರೆಗಳಲ್ಲಿ ಸರಿಯಾದ ಪ್ರಮಾಣದಲ್ಲಿ ನೀರು ನಿಲ್ಲುವುದಿಲ್ಲ ಆಗ ಭೂಗರ್ಭ ಸಂಪತ್ತು ನಶಿಸಿ ಹೋಗಿ ಲಕ್ಷಾಂತರ ಎಕರೆ ಪ್ರದೇಶದಲ್ಲಿರುವ ತೆಂಗು ಮತ್ತು ಅಡಿಕೆ ಬೆಳೆಗಳು ಹಾಳಾಗುತ್ತವೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ ಆದುದರಿಂದ, ಸರ್ಕಾರ ತನ್ನ ನೀತಿಯನ್ನು ಬದಲಾವಣೆ ಮಾಡಿ, ಸಣ್ಣ ಪುಟ್ಟ ಕೆರೆಗಳಲ್ಲಿರುವ ಹೂಳನ್ನು ತೆಗೆಸಿ, ಅವುಗಳಲ್ಲಿ ಮೊದಲು ಸಂಗ್ರಹವಾಗುತ್ತಿದ್ದ ನೀರಿನ ಪ್ರಮಾಣವನ್ನು ಈಗಲೂ ಕಾಪಾಡಿಕೊಂಡು ಬರಬೇಕೆಂದು ಹೇಳುತ್ತೇನೆ. ಹೊರಗಡೆಯಿಂದ ಬರುವ ಹೂಳನ್ನು ತಪ್ಪಿಸಲು ಕೆರೆಗಳ ಹಿಂಭಾಗದಲ್ಲಿ ಗಿಡಗಳನ್ನು ನೆಡುವುದು ಒಳ್ಳೆಯದು. ಜೊತೆಗೆ ಕೆರೆಗೆ ನೀರು ಹರಿದು ಬರುವ ಜಾಗಗಳಲ್ಲಿ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಹಿಂದೆ ಕಟ್ಟುತ್ತಿದ್ದಂತೆ ಈಗಲೂ ಕಟ್ಟಿದರೆ, ಹೂಳು ಅಲ್ಲಿ ಸಂಗ್ರಹವಾಗುತ್ತದೆ ಮತ್ತು ಹಾಗೆ ಸಂಗ್ರಹವಾದ ಹೂಳನ್ನು ರೈತರು ತೆಗೆದುಕೊಂಡು ಹೋಗಿ ತೋಟಗಳಿಗೆ ಉಪಯೋಗಿಸಿಕೊಳ್ಳಬಹುದು. ಹೀಗೆ ಮಾಡಿದರೆ ಹೂಳು ಕೆರೆಗೆ ಹೋಗುವುದು ತಪ್ಪುತ್ತದೆ. ಇದಕ್ಕೆ ಜಾಸ್ತಿ ಹಣವೇನೂ ಖರ್ಚಾಗುವುದಿಲ್ಲ.

ಆದ್ದರಿಂದ ಪುನಃ ಕೆರೆಗಳಲ್ಲಿ ಹೂಳು ಎತ್ತುವಂತ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಯಗಚಿ ನದಿ ನಾಲಾ ಯೋಜನೆಯ ಅಡಿಯಲ್ಲಿ ಬರತಕ್ಕ ಏತ ನೀರಾವರಿ ಯೋಜನೆಗಳನ್ನು ಆದಷ್ಟು ಜಾಗ್ರತೆ ಪ್ರಾರಂಭ ಮಾಡಬೇಕೆಂದು ನಾನು ಮನವಿ ಮಾಡಿಕೊಂಡಿದ್ದೆ. ರೈತರು ಬೆಳೆ ನಾಟಿ ಮಾಡುವುದಕ್ಕೆ ಮುನ್ನ ಮಳೆಗಾಲ ಸರಿಯಾದ ಸಮಯದಲ್ಲಿ ಆಗದೇ ಇದ್ದಾಗ, ಮತ್ತೆ ನಾಟಿ ಮಾಡಿ ಬೆಳೆ ಕೈಗೆ ಬರುವ ಸಮಯದಲ್ಲಿ ಮಳೆ ಬಾರದೇ ಇದ್ದಾಗ ಈ ಏತ ನೀರಾವರಿ ಯೋಜನೆಯಿಂದ ರೈತರಿಗೆ ನೀರಿನ ಸೌಕರ್ಯವನ್ನು ಒದಗಿಸಿದರೆ, ಬೆಳೆ ನಾಶವಾಗುವುದನ್ನು ತಪ್ಪಿಸಿದಂತಾಗುತ್ತದೆ. ಸೆಟ್ಟಿಹಳ್ಳಿಯಲ್ಲಿ ೭ ಲಕ್ಷ ರೂಪಾಯಿ ಅಂದಾಜಿನಲ್ಲಿ ಏತ ನಿರಾವರಿಯನ್ನು ಮಾಡಿದರೆ ಸುಮಾರು ೧೨೦೮ ಎಕರೆ ನೀರಾವರಿಗೆ ಒಳಪಡುತ್ತೆ, ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕಳುಹಿಸಿದ್ದೇವೆಂದು ಇಲಾಖೆಯವರು ತಿಳಿಸಿದರು. ಆದರೆ, ವರದಿಯಲ್ಲಿ ಏನೂ ಕಾಣುತ್ತಿಲ್ಲ. ಮತ್ತೆ, ನೇಮನಹಳ್ಳಿ ಹತ್ತಿರ ಸುಮಾರು ಒಂದುವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ಏತನೀರಾವರಿ ಕೆಲಸವನ್ನು ಕೈಗೊಂಡರೆ, ಸುಮಾರು ೩೫೦–೪೦೦ ಎಕರೆ ನೀರಾವರಿಯಾಗತಕ್ಕ ಜಮೀನು ಇದೆ. ಇದರ ಬಗ್ಗೆ ಕೂಡ ಬರೆದು ಕಳುಹಿಸಿದ್ದೇನೆಂದು ತಿಳಿಸಿದರು, ಅದೂ ಕೂಡ ವರದಿಯಲ್ಲಿ ಇಲ್ಲ. ಇನ್ನೊಂದು ಮುಳವಾಡಿ ಹತ್ತಿರ ಸುಮಾರು ಎರಡೂವರೆ ಲಕ್ಷ ರೂಪಾಯಿನಲ್ಲಿ ಏತ ನೀರಾವರಿ ಯೋಜನೆಯನ್ನು ಕೈಗೊಂಡರೆ, ಅಲ್ಲೂ ಕೂಡ ೩೦೦–೪೦೦ ಎಕರೆ ನೀರಾವರಿಗೆ ಒಳಪಡುತ್ತೆ. ಅದನ್ನು ಕೂಡ ತೆಗೆದುಕೊಂಡಿಲ್ಲ, ನಾನು ಮಾನ್ಯ ಸಚಿವರಲ್ಲಿ ಈ ಮೂರು ಪ್ರಾಜೆಕ್ಟ್‌ಗಳನ್ನು ಈ ಸಾಲಿನಲ್ಲಿಯೇ ತೆಗೆದುಕೊಳ್ಳಬೇಕೆಂದು ಬಹಳ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಮೊದಲನೆ ಹೇಳಿದಂತೆ, ಈ ಯೋಜನೆಗಳನ್ನು ಮಾಡುವುದರಿಂದ ನದಿಯಲ್ಲಿ ನೀರು ಇಲ್ಲದೇ ಇರುವ ಸಂದರ್ಭದಲ್ಲಿ ಏತ ನೀರಾವರಿಯಿಂದ ಬೆಳೆಗಳಿಗೆ ೨–೩ ಹದ ನೀರು ಕೊಡುವ ವ್ಯವಸ್ಥೆ ಮಾಡಿದರೆ, ರೈತರ ಸಮಸ್ಯೆಯೂ ಪರಿಹಾರವಾಗುತ್ತದೆ. ರೈತರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅವಕಾಶವಾಗುವುದರಿಂದ ಈ ಮೂರು ಯೋಜನೆಗಳನ್ನು ಮಾನ್ಯ ಸಚಿವರು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಹಿಂದೆ ಕೆರೆಗಳ ನೀರನ್ನು ನೋಡಿಕೊಳ್ಳುವರು ಸಲುವಾಗಿ ನೀರಗಂಟಿಗಳನ್ನು ನೇಮಕ ಮಾಡಿದ್ದರು. ಆತನ ಕೆಲಸ ಬೆಳಿಗ್ಗೆ ಹೋಗಿ ತೂಬು ಎತ್ತಿ ಯಾರ ಯಾರ ಜಮೀನಿಗೆ ನೀರು ಬೇಕು ಅವರಿಗೆ ಬಿಟ್ಟು ಮತ್ತೆ ತೂಬಿಗೆ ಬೀಗ ಹಾಕಿಕೊಂಡು ಬರುತ್ತಿದ್ದ, ನೀರೂ ಕೂಡ ಪೋಲಾಗುವುದಕ್ಕೆ ಅವಕಾಶವಾಗುತ್ತಾ ಇರಲಿಲ್ಲ. ಒಂದು ಬಡ ಕುಟುಂಬಕ್ಕೆ ಕೆಲಸವೂ ಸಿಗುತ್ತಿತ್ತು. ಈ ನೀರಗಂಟಿ ಕೆಲಸವನ್ನು ಇದ್ದಕ್ಕಿದ್ದ ಹಾಗೆ ತೆಗೆದುಬಿಟ್ಟರು. ಸ್ವಾಮಿ, ಕೆರೆಗಳಲ್ಲಿರತಕ್ಕ ನೀರನ್ನು ನೋಡುವವರಿಲ್ಲದೆ, ನೀರು ಪೋಲಾಗುತ್ತಿರುವುದು ಸರ್ವೆ ಸಾಮಾನ್ಯವಾಗಿದೆ. ಆದ್ದರಿಂದ ಈ ನೀರಗಂಟಿ ಹುದ್ದೆಗಳನ್ನು ಪುನಃ ನಿರ್ಮಾಣ ಮಾಡಿ, ಗ್ರಾಮಾಂತರ ಪ್ರದೇಶಗಳಲ್ಲಿ ಯಾವನೋ ಒಬ್ಬ ನಿರ್ಭಾಗ್ಯ ವ್ಯಕ್ತಿಗೆ ಕೆಲಸ ಕೊಡುವಂತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಹಾಸನ ಮೈಸೂರಿಗೆ ಹೋಗತಕ್ಕ ಕೌಶಿಕ್ ಹಳ್ಳಿಯ ಹತ್ತಿರ ಒಂದು ರೈಲ್ವೆಗೇಟ್ ಇದೆ. ಅಲ್ಲಿರತಕ್ಕ ರೈಲ್ವೆಗೇಟ್ ಮ್ಯಾನ್ ಬೆಳಿಗ್ಗೆ ೭ ಘಂಟೆಯಿಂದ ಸಂಜೆ ೫ ಗಂಟೆಯವರೆಗೆ ಕೆಲಸದ ಮೇಲಿರುತ್ತಾನೆ. ಸಂಜೆ ೫ ಗಂಟೆಯಾದ ಮೇಲೆ ಗೇಟ್ ಬಾಗಿಲು ಹಾಕಿಕೊಂಡು ಹೋಗುತ್ತಾನೆ. ರಾತ್ರಿ ವೇಳೆಯಲ್ಲಿ ಓಡಾಡತಕ್ಕ ಗಾಡಿ ಮತ್ತಿತರ ವಾಹನಗಳಿಗೆ ತೊಂದರೆಯಾಗಿರುವುದನ್ನು ಕಳೆದ ೧೦–೧೫ ವರ್ಷಗಳಿಂದ ಸರ್ಕಾರದ ಗಮನಕ್ಕೆ ತಂದರೂ ಕೂಡ ಇದುವರೆವಿಗೂ ಏನು ಕ್ರಮ ತೆಗೆದುಕೊಂಡಿಲ್ಲ. ಒಂದು ಗಾಡಿಗೆ ಎರಡು ರೂಪಾಯಿನಂತೆ ರಾತ್ರಿಯೆಲ್ಲಾ ವಸೂಲು ಮಾಡುತ್ತಾನೆ. ಹಣ ಕೊಡದಿದ್ದರೆ ಗೇಟ್ ತೆಗೆಯುವುದಿಲ್ಲ. ಒಂದು ದಿವಸಕ್ಕೆ ಕನಿಷ್ಟ ೩೦೦–೪೦೦ ರೂಪಾಯಿ ಮೇಲ್ಪಟ್ಟು ವಸೂಲು ಮಾಡುತ್ತಾನೆ ಇಲ್ಲಿ ಬರತಕ್ಕ ಹಣದಲ್ಲಿ ರೈಲ್ವೆ ಇನ್ಸ್‌ಪೆಕ್ಟರಿಗೂ ಇವನಿಗೂ ಷೇರು ಇದೆಯೆಂದು ಹೇಳುತ್ತಾರೆ. ಕಳೆದ ೧೦ ವರ್ಷಗಳಿಂದ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರಕ್ಕೆ ಬರೆದರೂ ಏನೇನು ಪ್ರಯೋಜನವಾಗಿಲ್ಲ. ಆ ಗೇಟ್‌ನಿಂದ ಏನೂ ಆಗಬೇಕಾಗಿಲ್ಲ, ಅದನ್ನು ಕಿತ್ತು ಒಗೆಯಿರಿ. ಅಲ್ಲ ಸ್ವಾಮಿ ಪ್ರಜಾಪ್ರಭುತ್ವ ಎಂದು ಹೇಳಿಕೊಂಡು ಜನರಿಂದ ಓಟುಗಳನ್ನು ಪಡೆದುಕೊಂಡು ಬಂದು ಒಬ್ಬ ಅಧಿಕಾರಿಯನ್ನು ಏನೂ ಮಾಡುವುದಕ್ಕಾಗಲಿಲ್ಲ ಎಂದರೆ ನಾವು ಶಾಸಕರಾಗಿ ಏತಕ್ಕೆ ಇರಬೇಕು? ಈ ವಿಚಾರದಲ್ಲಿ ಪ್ರಶ್ನೆ ಕೇಳಿದ್ದೇನೆ, ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಕೇಂದ್ರ ಸರ್ಕಾರಕ್ಕೆ ಕಾಗದಬರೆದಿದ್ದೇನೆ, ನಾನು ರೈಲ್ವೆ ಮಂಡಳಿಯಲ್ಲಿ ಸದಸ್ಯನಾಗಿ ಮೂರು ತಿಂಗಳು ಇದ್ದೆ, ಆ ಸಂದರ್ಭದಲ್ಲಿ ಕೂಡ ಈ ರೈಲ್ವೆಗೇಟ್ ವಿಚಾರವನ್ನು ತಿಳಿಸಿದರೂ ಏನು ಮಾಡುವುದಕ್ಕಾಗಿಲ್ಲ. ನಾನು ಇವತ್ತು ಆ ಹಳ್ಳಿಗೆ ಹೋಗುವುದನ್ನೇ ಬಿಟ್ಟಿದ್ದೇನೆ.

ಜೊತೆಗೆ ಕರ್ನಾಟಕ ಹೈನುಗಾರಿಕೆ ನಿಗಮದವರು ೪–೫ ಸೊಸೈಟಿಗಳನ್ನು ಆ ಭಾಗದಲ್ಲಿ ಕೊಟ್ಟಿದ್ದರು. ಶೇಖರಣೆ ಮಾಡಿದ ಹಾಲನ್ನು ಈ ಗೇಟಿನ ಮೂಲಕವೇ ತರಬೇಕಾಗಿತ್ತು, ಒಂದು ಲಾರಿಗೆ ೫ ರೂಪಾಯಿ ಕೇಳಿದ್ದಾನೆ. ಇದನ್ನು ಕೊಡುವುದಕ್ಕಾಗುವುದಿಲ್ಲವೆಂದು, ಹೈನುಗಾರಿಕೆ ನಿಗಮದವರು ಸೊಸೈಟಿಗಳನ್ನು ರದ್ದು ಮಾಡಿದರು, ಇವತ್ತು ರೈತರಿಗೆ ಆಗತಕ್ಕ ಅನುಕೂಲ ತಪ್ಪಿ ಹೋಯಿತಲ್ಲ, ಇದಕ್ಕೆ ಹೊಣೆ ಯಾರು? ಹೈನುಗಾರಿಕೆ ನಿಗಮದವರು ಕೂಡ ಪತ್ರ ಬರೆದಿದ್ದಾರೆ. ಲೋಕೋಪಯೋಗಿ ರಸ್ತೆ ಕಳೆದ ಮೂವತ್ತು ವರ್ಷಗಳಿಂದ ಇದೆ. ೧೦ ನಿಮಿಷ ಲೇಟಾದರೆ ಇಂಥ ಅವ್ಯವಹಾರ ಅಲ್ಲಿ ನಡೆಯುತ್ತೆ. ಇದನ್ನು ಸರಿಪಡಿಸುವುದಕ್ಕೆ ಆಗಿಲ್ಲ ಲೋಕೋಪಯೋಗಿ ಕಾರ್ಯದರ್ಶಿಯವರಿಗೆ ೩–೪ ಸಾರಿ ಹೋಗಿ ಹೇಳಿದ್ದೇನೆ. ರಾತ್ರಿ ಹೊತ್ತು ಇನ್ನೊಬ್ಬನನ್ನು ನೇಮಕ ಮಾಡಿ ಆಗತಕ್ಕ ತೊಂದರೆಯನ್ನು ತಪ್ಪಿಸಿ ಎಂದು ಕೇಳಿಕೊಂಡಿದ್ದೇನೆ, ಯಾವುದೂ ಆಗಿಲ್ಲ. ದಿವಸಕ್ಕೆ ೫೦೦–೬೦೦ ರೂಪಾಯಿ ದೋಚತಕ್ಕವನ್ನು ಏನೂ ಮಾಡುವುದಕ್ಕೆ ಆಗಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅವನ ಕಡೆಯುವರು ಯಾರಾದರೂ ಇರಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಇಬ್ಬರು ಮೂರು ಜನ ಗಿರಾಕಿಗಳನ್ನು ಬಿಡುತ್ತಾನೆ. ಮಂಗಳವಾರ ಹಾಸನದ ಸಂತೆ, ನೂರಾರು ಗಾಡಿಗಳು ಬರುತ್ತವೆ. ಪ್ರತಿ ಗಾಡಿಗೆ ೫ ರೂಪಾಯಿ ವಸೂಲು ಮಾಡುತ್ತಾನೆ, ಸುಮಾರು ೪೦–೫೦ ಹಳ್ಳಿಗರಿಗೆ ಇದರಿಂದ ತೊಂದರೆಯಾಗಿದೆ, ಇದನ್ನು ತಪ್ಪಿಸಿ ಎಂದು ಮಾನ್ಯ ತಿಮ್ಮಪ್ಪನವರನ್ನು ಕೇಳಿದ್ದಕ್ಕೆ ಹನುಮೇಗೌಡರೇ ಅವನನ್ನು ಬಲಿ ಹಾಕುತ್ತೇನೆಂದು ಹೇಳಿದರು ಆದರೆ ಏನೂ ಆಗಿಲ್ಲ. ಇಷ್ಟೆಲ್ಲಾ ಗಲಾಟೆಯಾದ ಮೇಲೆ ೫ ರೂಪಾಯಿ ಮಾಡಿದ್ದಾನೆ. ೫ ರೂಪಾಯಿ ಕೊಟ್ಟರೆ ಗೇಟ್ ಬಾಗಿಲು ತೆಗೆಯುತ್ತೇನೆ, ಇಲ್ಲದೇ ಇದ್ದರೆ ತೆಗೆಯುವುದಿಲ್ಲವೆಂದು ಹೇಳುತ್ತಾನೆ. ಸ್ವಾಮಿ, ನಾವು ಇಲ್ಲಿ ಬ್ಯೂರೋಕ್ರಸಿ ಎಂದು ಹೇಳುತ್ತೇವೆ ನನಗೆ ಒಂದೊಂದು ಸಾರಿ ರೇಗುತ್ತೆ ನಾನು ಬರೆದಿರುವ ಕಾಗದಗಳು ಇಷ್ಟು ದೊಡ್ಡ ಫೈಲು ಇದೆ. ಲೋಕೋಪಯೋಗಿ ಕಾರ್ಯದರ್ಶಿಗಳು ಬರೆದುಕೊಡಿ ನೋಡುತ್ತೇನೆಂದು ಹೇಳಿದರು. ನಾನು ತಿಮ್ಮಪ್ಪನವರನ್ನು ಕೇಳುವುದಿಷ್ಟೆ, ರೈಲ್ವೆ ಗೇಟನ್ನು ತೆಗೆದು ಬಿಸಾಕಿ, ಅಲ್ಲಿ ಯಾರೂ ಸತ್ತಿಲ್ಲ, ಇಲ್ಲದೇ ಹೋದರೆ ಇನ್ನೊಬ್ಬ ಗೇಟ್ ಮ್ಯಾನ್ ರಾತ್ರಿ ಹೊತ್ತಿಗೆ ಅಪಾಯಿಂಟ್ ಮಾಡಿಸಿ.

ಅಧ್ಯಕ್ಷರೆ, ಯಾರೋ ಒಬ್ಬರ ಟೈಮ್ ಕ್ಲೋಸ್ ಆಗುತ್ತದೆ ಎಂದರೆ ಇನ್ನೊಬ್ಬ ವ್ಯಕ್ತಿ ಅಪಾಯಿಂಟ್ ಮಾಡಿದರೆ ಆಯಿತು. ಸುಮಾರು ಹತ್ತು ಹದಿನೈದು ವರ್ಷಗಳಿಂದಲೂ ಅಲ್ಲಿ ಸುಲಿಗೆ ಆಗುತ್ತಿದೆ, ನಾನು ಅದು ಸುಳ್ಳೋ ಏನೋ ಎಂದು ಒಂದು ಸಾರಿ ಅಲ್ಲಿಗೆ ಹೋಗಿ ನೋಡಲಿಕ್ಕೆ ಹೋದರೆ, ಹತ್ತು ರೂಪಾಯಿ ಕೊಡಬೇಕಾಗಿ ಬಂತು, ಇಲ್ಲದೇ ಇದ್ದರೆ ಅಲ್ಲಿಯೇ ಮಲಗಿಕೊಳ್ಳಬೇಕಾಗಿತ್ತು. ಅನಂತರ ಅಲ್ಲೆಲ್ಲಾ ಗಲಾಟೆಯಾಗಿ ನಾನು ಎಂ.ಎಲ್.ಎ ಎಂದು ಗೊತ್ತಾಗಿ, ರಾತ್ರಿ ಒಂದು ಗಂಟೆಯ ಮೇಲೆ ವಾಪಾಸ್ಸು ಬಂದೆ. ಡ್ಯಾಮ್‌ಗಳ ವಿಚಾರವಾಗಿ ನಾನು ಬೇಕಾದಷ್ಟು ಕೇಳಿಕೊಂಡಿದ್ದೇನೆ. ಅದನ್ನೆಲ್ಲಾ ನಿಧಾನವಾಗಿ ಮಾಡಿದರೂ ಪರವಾಯಿಲ್ಲ. ಈ ಒಬ್ಬ ಗ್ಯಾಂಗ್‌ಮೆನ್, ಅಲ್ಲಿರತಕ್ಕ ರೈಲ್ವೆ ಇನ್ಸ್‌ಪೆಕ್ಟರ್ ನಮ್ಮ ಜನರನ್ನು ದರೋಡೆ ಮಾಡುತ್ತಿದ್ದಾರೆ, ಕಳೆದ ಹದಿನೈದು ವರ್ಷದಿಂದಲ್ಲೂ ಇದು ನಡೆಯುತ್ತಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಕಡೆಯಿಂದ ಭಾಷಣ ಮಾಡಿದ್ದನ್ನು ಕೇಳಿದ್ದೇನೆ. ಅವರು ಏನು ಹೇಳುತ್ತಿದ್ದರು ಅಂಥಾದ್ದನ್ನು ಮಾಡುವ ಅವಕಾಶವನ್ನು ದೇವರು ಕೊಟ್ಟಿದ್ದಾನೆ. ತಮ್ಮ ಪೌರುಷ, ಸಾಮರ್ಥ್ಯ ಏನಿದೆ ಅದನ್ನು ಉಪಯೋಗಿಸಿಕೊಂಡು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ನಮ್ಮ ಇಲಾಖೆಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಿದ್ದಾರೆ. ಬಲಿ ಹಾಕಿ ಬಿಡುತ್ತೇನೆ ಎನ್ನುವ ಮಾತನ್ನು ಹೇಳಲಿಕ್ಕೆ ಹೋಗುವುದಿಲ್ಲ. ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದು ಆದರೆ ಬಲಿ ಹಾಕಬಹುದು. ಅದು ರೈಲ್ವೆ ಇಲಾಖೆಗೆ ಸಂಬಂಧಪಟ್ಟಿರತಕ್ಕದು. ಮಾನ್ಯ ಸದಸ್ಯರು ರೈಲ್ವೆ ಬೋರ್ಡ್ ಸದಸ್ಯರಾಗಿದ್ದಾಗ ಸಂಬಂಧಪಟ್ಟವರಿಗೆ ಬರೆದು ಪ್ರಯತ್ನ ಪಟ್ಟಿದ್ದೀರಿ. ನಾವು ನಿಮ್ಮ ಹಾಗೆ ರೈಲ್ವೆ ಇಲಾಖೆಗೆ ಬರೆಯಬೇಕು. ಅವರ ಮುಖಾಂತರ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ.—ರೈಲ್ವೆ ಇಲಾಖೆ ಪಾಕಿಸ್ತಾನಕ್ಕೆ ಸೇರಿದೆಯೇ ? ಈ ರೀತಿ ಹೇಳಿದರೆ ನಾನು ಏನು ಹೇಳಬೇಕು. ಸ್ಟೇಟ್ ಗವರ್ನ್‌ಮೆಂಟ್‌ನವರು ಹೇಳಿದರೆ ಒಪ್ಪಿಕೊಳ್ಳುತ್ತಾರೆ, ನಾಲ್ಕನೇ ಒಂದು ಭಾಗ ಅಥವಾ ಎರಡನೇ ಒಂದು ಭಾಗ ದುಡ್ಡು ಕೊಡಬೇಕಾಗುತ್ತದೆಂದು ಹೇಳು

ತ್ತಾರೆ. ಅದು ಸಾಧ್ಯವಾಗದೇ ಹೋದರೆ ಅಲ್ಲಿ ಗೇಟ್ ಅವಶ್ಯಕತೆಯಿಲ್ಲ ಎಂದು ತೆಗೆದು ಬಿಸಾಕಿ, ಎರಡರಲ್ಲಿ ಏನೂ ಮಾಡಲಿಕ್ಕೆ ಆಗುವುದಿಲ್ಲ ಎಂದರೆ ನಾವು ಏನು ಮಾಡಬೇಕು. ಇವೊತ್ತು ಕೋಟಿ ಗಟ್ಟಲೆ ಹಣ ಖರ್ಚು ಮಾಡಿ ಚಂದ್ರಲೋಕಕ್ಕೆ ಹೋಗಿ ಓಡಾಡಿ ಬಂದಿದ್ದೀರಿ. ತಾವು ಪಿ.ಡಬ್ಲ್ಯೂ.ಡಿ ಮಂತ್ರಿಯಾಗಿ ಒಂದು ಗೇಟ್ ತೆಗೆದುಹಾಕಿಸಲಿಕ್ಕೆ ಆಗುವುದಿಲ್ಲ ಎಂದರೆ ಅರ್ಥ ಏನು ಸ್ವಾಮಿ. ಇವೊತ್ತು ಆ ರೈಲ್ವೆ ಗೇಟ್ ಕರ್ನಾಟಕದಲ್ಲಿಯೋ ಅಥವಾ ಇನ್ನೆಲ್ಲಿಯಾದರೂ ಇದೆಯೋ ? ತಮಗೆ ಇನ್ನು ಒಂದು ಕೆಲಸ ಮಾಡಬೇಕಾಗಿದೆ. ಅದು ಏನಪ್ಪ ಅಂದರೆ ಒಂದು ದಿನ ಫಂಕ್ಷನ್ ಫಿಕ್ಸ್ ಮಾಡಿ ರಾತ್ರಿ ಹತ್ತು ಗಂಟೆಗೆ ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುವುದು ಒಂದು ಬಾಕಿ ಉಳಿದಿದೆ, ಮಾನ್ಯ ತಿಮ್ಮಪ್ಪ ನವರಿಗೆ ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ. ಮಾನವೀಯತೆಯ ದೃಷ್ಟಿಯಿಂದ, ಬಡಪಾಯಿ ರೈತರ ದೃಷ್ಟಿಯಿಂದ ಹೇಳಬೇಕಾಗಿದೆ. ಒಂದು ಸಂದರ್ಭದಲ್ಲಿ ಗರ್ಭಿಣಿ ಹೆಂಗಸು ಆಸ್ಪತ್ರೆಗೆ ಹೋಗುವ ಸಂದರ್ಭದಲ್ಲಿ ಅಲ್ಲಿ ತಡೆಹಾಕಿದ್ದಾರೆ. ನಾನು ಕೆಲವು ಪದಗಳನ್ನು ಉಪಯೋಗಿಸಿದಾಗ ಅದನ್ನು ಮಾತ ನಾಡಬೇಡಿ ಎಂದು ಹೇಳಿದರು. ನಾನು ಇನ್ನು ಯಾವ ಪದಗಳನ್ನು ಉಪಯೋಗಿಸಬೇಕೋ ಗೊತ್ತಿಲ್ಲ. ನನ್ನ ಕೈಯಲ್ಲಿ ಇದ್ದರೆ ನಾನು ಮಾಡುತ್ತೇನೆ ಎಂದು ಹೇಳಬಹುದಿತ್ತು. ಈಗ ನನ್ನ ಕೈಯಲ್ಲಿ ಏನೂ ಇಲ್ಲದೇ ಇರುವುದರಿಂದ, ಅವನಿಗೆ ಏನಾದರೂ ಮಾಡಿ ಆರು ತಿಂಗಳು ಜೈಲಿಗೆ ಹೋಗಲು ಮಾನ್ಯ ಮಂತ್ರಿಗಳು ತಿಳಿಸಬೇಕು. ಸರ್ಕಾರ ಮಾಡುವ ಹಾಗೆ ಇಲ್ಲ, ಯಾರೂ ಮಾಡುವ ಹಾಗೆ ಇಲ್ಲ ಎಂದರೆ ನಾನು ಏನು ಮಾಡಬೇಕು. ಕೆ.ಡಿ.ಡಿ.ಸಿ.ಗೆ ೧೫-೨೦ ಹಳ್ಳಿಯಿಂದ ಬರತಕ್ಕದ್ದು, ನಾಲ್ಕೈದು ಸೊಸೈಟಿ ಗಳಿಂದ ಬರತಕ್ಕದ್ದು ಹಾಲು ನಿಂತುಹೋಯಿತು. ಇವೊತ್ತು ತಾವು ಸಮಾಜ ಸುಧಾರಣೆಯಾಗಬೇಕೆಂದು ಹೇಳುತ್ತೀರಾ ? ರೈತರು ಉತ್ಪತ್ತಿ ಮಾಡಿದಂಥ ಹಾಲು ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಆಗಿಲ್ಲ. ಎಲ್ಲಾ ಕಡೆಗಳಲ್ಲಿ ಪಿ.ಡಬ್ಲ್ಯೂ.ಡಿ. ರಸ್ತೆ ಇದೆ. ಇವೊತ್ತು ಆ ರೋಡ್‌ನಲ್ಲಿ ಬಸ್ಸುಗಳನ್ನು ಬಿಡಲಿಕ್ಕೆ ಅವಕಾಶ ಆಗದೇ ಇದ್ದರೆ ನಿಮ್ಮ ರೋಡ್ ಕಟ್ಟಿಕೊಂಡು ಮಣ್ಣು ಹೊಯ್ದುಕೊಳ್ಳಬೇಕೇನು. ರೈಲ್ವೆಗೆ ಅದು ಸೇರಿದೆ ಅಂದರೆ ಅದು ಯಾರಿಗೆ ಸೇರಿರಲಿ. ಸರ್ಕಾರ ನಿರ್ವೀರ್ಯವೆ? *** ಹಾಗಾದರೆ ಏನೂ ಏನಾದರೂ ಮಾಡಿ ಇದೊಂದನ್ನು ಮಾತ್ರ ಮಾನ್ಯ ಮಂತ್ರಿಗಳು ಮಾಡಿಕೊಡಲೇಬೇಕು,

ಶ್ರೀ ಕೆ. ಭಾಸ್ಕರನಾಯ್ಡು.—ಅಧ್ಯಕ್ಷರೇ, ಮಾನ್ಯ ಸದಸ್ಯರು ಸರ್ಕಾರದ ಬಗ್ಗೆ ಹೇಳಿದ್ದು ಬಂದಿದೆ.

ಛೇರ್ಮನ್.—ದಯವಿಟ್ಟು ಸಭೆಯ ಗಂಭೀರತೆಯನ್ನು ಉಳಿಸಬೇಕು.

ಶ್ರೀ ಭಾಸ್ಕರನಾಯ್ಡು.—ಅಧ್ಯಕ್ಷರೇ, ಅದು ರೆಕಾರ್ಡ್‌ನಲ್ಲಿ ಬಂದಿದೆ.

ಛೇರ್ಮನ್,—ಅದನ್ನು ತೆಗೆಸೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಇಲ್ಲದ ಅರ್ಥವನ್ನು ದಯವಿಟ್ಟು ಕಲ್ಪಿಸಬೇಡಿ. ನಿಮ್ಮ ಅಧಿಕಾರಕ್ಕೆ ನಿಮ್ಮ ಕುರ್ಚಿಗೆ ಶಕ್ತಿ ಇಲ್ಲವೇ ಅಂತ ಹೇಳಿದೆ. ಇನ್ನು ಯಾವುದೇ ಅರ್ಥದಿಂದ ಹೇಳಲಿಲ್ಲ. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸು ತ್ತೇನೆ.

†ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಸನ್ಮಾನ್ಯ ಅಧ್ಯಕ್ಷರೆ, ಈ ಇರಿಗೇಷನ್ ಮತ್ತು ಪಿ.ಡಬ್ಲ್ಯೂ.ಡಿ. ವಿಚಾರದಲ್ಲಿ ಮಾತನಾಡಬೇಕೆಂದು ತಮ್ಮ ಅಪ್ಪಣೆ ಬಂದಮೇಲೆ ಒಂದೆರಡು ಮಾತು ಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಮೊದಲು ಈ ಡಿಪಾರ್ಟ್‌ಮೆಂಟ್ ಏನಿದೆ ಇದರ ಬಗ್ಗೆ ಮಾತನಾಡಬೇಕೆಂದು ಅಭಿಪ್ರಾಯ ಇಟ್ಟುಕೊಂಡು ನಾವು ಇಲ್ಲಿಗೆ ಬಂದಿರಲಿಲ್ಲ. ಏಕೆಂದರೆ ನಾವು ಈ ಮನೆ ಯಿಂದ ಹೊರದೂಡಲ್ಪಟ್ಟಿದ್ದು, ನೆನ್ನೆ, ಮೊನ್ನೆ ತಾನೇ ಈ ಮನೆಗೆ ಬಂದಿದ್ದೇವೆ. ಇವೊತ್ತು ಕೂಡ ನಾವು ಹೋಗಬೇಕೋ ಅಥವಾ ಬೇಡವೋ ಎನ್ನುವ ಬಗ್ಗೆ ವಿಚಾರ ವಿನಿಮಯ ನಡೆದು, ಹೋಗಬೇಕು ಎಂದು ತೀರ್ಮಾನವಾದ ಮೇಲೆ ಬಂದಿದ್ದೇವೆ. ನಾನು ಈ ಮನೆಗೆ ಬಂದ ಮೇಲೆ ನಮ್ಮ ನೆಚ್ಚಿನ ನಾಯಕರು ಇವೊತ್ತು ಈ ವಿಚಾರದ ಬಗ್ಗೆ ಅಲ್ಪ ಸ್ವಲ್ಪ ಮಾತನಾಡಿ ಎಂದು ಹೇಳಿದ ಮೇಲೆ ನಾನು ಮಾತನಾಡಲಿಕ್ಕೆ ಪ್ರಯತ್ನಪಡುತ್ತಿದ್ದೇನೆ. ಈ ಸಂದರ್ಭದಲ್ಲಿ ಮೊದಲನೆಯದಾಗಿ ಹೇಳಬೇಕು.

*** As ordered by the chair the words are expunged

ಎಂದರೆ ಈ ಪಿ.ಡಬ್ಲ್ಯೂ.ಡಿ. ರೋಡ್ಸ್ ಮತ್ತು ಬಿಲ್ಡಿಂಗ್ ವಿಚಾರವಾಗಿ ಹೇಳಲಿಕ್ಕೆ ಅಭಿಪ್ರಾಯಪಡುತ್ತೇನೆ. ಪರ್‌ಫಾರ್‌ಮೆನ್ಸ್ ಬಡ್ಜೆಟ್ ಓದಿದ ಸಂದರ್ಭದಲ್ಲಿ ಒಂದು ಒಳ್ಳೆಯ ವಿಚಾರವನ್ನು ನಾನು ಓದಿದೆ. ಪ್ರಿಫೇಸ್‌ನಲ್ಲಿ ಸೆಕ್ರೆಟರಿಯವರು ಒಂದು ಮಾತು ಬರೆದಿದ್ದಾರೆ. The basic merit of this performance budget lie in the fact that it would serve as a valuable guide to both priority planning and long-term planning of the development programme. ಹಾಗೆ ಅಂತ ಒಳ್ಳೆಯ ಮಾತನ್ನು ಬರೆದಿದ್ದಾರೆ, ಅನಂತರ ಇಂಟ್ರೊಡಕ್ಷನಲ್ಲಿ ಹೀಗೆ ಬರೆದಿದ್ದಾರೆ. "Roads are essential for all forms of development. They are the basic means for rapid industrial and agricultural development and provide for the necessary infrastructure for bringing the majority of the people who are living in far off villages into the mainstream of life by connecting them with the rest of the country." ಇದು ಬಹಳ ಮಹತ್ತರವಾದ ಮಾತು ಎನ್ನತಕ್ಕದ್ದನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಹಳ್ಳಿಗಾಡಿನ ಚಿತ್ರ ಮುಂದೆ ಬಂದಾಗ ನಾವು ನೋಡತಕ್ಕ, ಅನುಭವಿಸತಕ್ಕ ಚಿತ್ರ ಏನು ಎನ್ನುವುದನ್ನು ಇಲ್ಲಿ ಸ್ವಲ್ಪ ಕೂಲಂಕುಷವಾಗಿ ಹೇಳದಿದ್ದರೂ ಕೂಡ ಒಂದು ಶಾರ್ಟ್ ಟೈಮ್‌ನಲ್ಲಿ ಹೇಳಬೇಕು ಅಂತ ಬಯಸುತ್ತೇನೆ.

೫-೩೦ ಪಿ.ಎಂ.

ಸ್ವಾಮಿ, ನಾನು ಒಬ್ಬ ಹಳ್ಳಿಗ. ಹಳ್ಳಿಯಲ್ಲಿ ಹುಟ್ಟಿ ಬೆಳೆದವನು. ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡಿದವನು. ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಸುಮಾರು ೮ ವರ್ಷಗಳ ಕಾಲ ಸೇವೆ ಮಾಡಿದ್ದೇನೆ. ನಾನು ಈ ಸಂದರ್ಭದಲ್ಲಿ ನಮ್ಮ ಹಳ್ಳಿಗಾಡಿನ ಚಿತ್ರವನು ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಂಡು ಹಳ್ಳಿಯ ಜೀವನಕ್ಕೂ ಮತ್ತು ಪಟ್ಟಣದ ಜೀವನಕ್ಕೂ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ, ಒಂದು ತಾಲೂಕು ಹೆಡ್‌ಕ್ವಾರ್ಟರ್ಸ್‌ನಿಂದ ಇನ್ನೊಂದು ಹೋಬಳಿ ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕಾದರೆ ರಸ್ತೆಯ ದುರಸ್ಥಿತಿಯನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲಿರತಕ್ಕ ರೋಡುಗಳು ರಿಪೇರಿಯಾಗಿ ಹತ್ತಾರು ವರ್ಷಗಳಾಗಿರುತ್ತದೆ. ಸ್ವಾಮಿ, ಅಷ್ಟೇ ಏಕೆ ಇವತ್ತು ಒಂದು ಮೋರಿ ಮಾಡಿಸಬೇಕೆಂದರೆ ಸೂಪರಿಂಟ್‌ಡೆಂಟ್ ಇಂಜಿನಿಯರ್‌ರವರ ಹತ್ತಿರವೇ ಅಲ್ಲ ಚೀಫ್ ಇಂಜಿನಿಯರ್‌ರವರ ಹತ್ತಿರ ಹೋದರೂ ಕೂಡ ನಾವು ಒಂದು ಮೋರಿಗೆ ಅಜ್ಞೆ ಮಾಡಿಸಿಕೊಂಡು ಬರುವುದಕ್ಕೆ ಸಾಧ್ಯವಿಲ್ಲ. ಯಾವ ಅಧಿಕಾರಿಯ ಹತ್ತಿರ ಹೋದರೂ ಕೂಡ, ಯಾವ ಸಚಿವರ ಹತ್ತಿರ ಹೋದರೂ ಕೂಡ ನಮಗೆ ಅವರಿಂದ ಸಿಕ್ಕುವುದು ಒಂದೇ ಉತ್ತರ. ಅದು ಏನೆಂದರೆ ನಮಗೆ ಗ್ರಾಂಟ್ ಇಲ್ಲ ಎಂಬುದು ಇದೊಂದೇ ಅವರ ಮಾತು. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇಂಥ ಸಂದರ್ಭದಲ್ಲಿ ನಮ್ಮ ಹಳ್ಳಿಗಾಡಿನ ಜೀವನಕ್ಕೂ, ಪಟ್ಟಣದ ಜೀವನಕ್ಕೂ ಹೋಲಿಸಿಕೊಂಡಾಗ ಈ ಪುಸ್ತಕದ ಇಂಟ್ರಡಕ್ಷನ್‌ನಲ್ಲಿ ಏನು ಪದಗಳನ್ನು ಬರೆದಿದ್ದೀರಿ ಆ ಪದಗಳಿಗೆ ಅರ್ಥವೇ ಇಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ನಾನು ಇದೇ ಮೊದಲನೆಯದಾಗಿ ಈ ಸಭೆಗೆ ಚುನಾಯಿತನಾಗಿ ಬಂದಿರತಕ್ಕದ್ದು. ಪ್ರತಿದಿವಸ ನಾವು ಹಳ್ಳಿಗಾಡಿನ ಜೀವನವನ್ನು ಅನುಭವಿಸುತ್ತಿದ್ದೇವೆ. ಹಳ್ಳಿಗಾಡಿನಲ್ಲಿ ನಡೆಯತಕ್ಕ ಯಾವುದೇ ಕೆಲಸಕಾರ್ಯಗಳಾಗಲಿ ಅದು ನೀರಾವರಿ ಇರಬಹುದು, ರಸ್ತೆ ಇರಬಹುದು, ಕಟ್ಟಡದ ಕೆಲಸ ಇರಬಹುದು, ಅಥವಾ ಇನ್ನು ಬೇರೆ ಯಾವುದೇ ಕೆಲಸ ಇರಬಹುದು ಅದರಲ್ಲಿ ವ್ಯತ್ಯಾಸವನ್ನು ಕಂಡಾಗ ನಮ್ಮ ಮನಸ್ಸಿಗೆ ಬಹಳ ಖೇದವಾಗುತ್ತದೆ. ಅಂದರೆ ಪಟ್ಟಣದಲ್ಲಿರತಕ್ಕ ಕಟ್ಟಡಗಳನ್ನು ನೋಡಿ. ಅಥವಾ ರಸ್ತೆಗಳನ್ನು ನೋಡಿ ನಾನು ಹೊಟ್ಟೆಕಿಚ್ಚು ಪಟ್ಟುಕೊಂಡು ಮಾತನಾಡುತ್ತಿಲ್ಲ. ಆದರೆ ನಾವು ನಮ್ಮ ಹಳ್ಳಿಯ ಜನಗಳ ಹತ್ತಿರ ಹೋಗಿ ನಿಮಗೆ ನಾವು ಅನಾದರಣೆ ಮಾಡುವುದಿಲ್ಲ, ನಿಮಗೆ ಎಲ್ಲ ಸೌಕರ್ಯವನ್ನೂ ಕೊಡುತ್ತೇವೆಂದು ಪ್ಲಾಟ್‌ಫಾರಂ ಮೇಲೆ ನಿಂತುಕೊಂಡು ಹೇಳಿಬರುತ್ತೇವೆ. ಆದರೆ ಇವತ್ತು ಹಳ್ಳಿಯಲ್ಲಿರತಕ್ಕ ರೈತರು ತಾವು ಬೆಳೆದ ಬೆಳೆಯನ್ನು ಸಲೀಸಾಗಿ ತಮ್ಮ ಮನೆಗಳಿಗೆ ಸಾಗಿಸುವುದಕ್ಕೆ ಸರಿಯಾದ ರಸ್ತೆ ಇಲ್ಲ. ಮಳೆಗಾಲದಲ್ಲಿ ದನಕರುಗಳನ್ನು ಹಿಡಿದುಕೊಂಡು

ಹೋಗುವುದಕ್ಕಾಗುವುದಿಲ್ಲ. ದಾರಿಯಲ್ಲಿ ಬರತಕ್ಕ ಹಳ್ಳಿಗಳನ್ನು ದಾಟುವುದಕ್ಕೆ ಅಗತ್ಯವಾಗಿ ಬೇಕಾದ ಸೇತುವೆಗಳಿಲ್ಲ. ಶೇಕಡ ೮೦ ರಷ್ಟು ಇರತಕ್ಕ ಹಳ್ಳಿಗಾಡಿನ ಜನರಿಗೆ ಅನುಕೂಲವಾಗುವಂತೆ ಸರ್ಕಾರ ಎಷ್ಟು ಹಣವನ್ನು ಖರ್ಚುಮಾಡುತ್ತಿದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ಸರ್ಕಾರ ದಿಂದ ಹಳ್ಳಿಯ ಜನರಿಗೆ ಏನೇನೂ ಸಹಾಯವಾಗುತ್ತಿಲ್ಲ, ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಪರಿಸ್ಥಿತಿ ಕೇವಲ ನನ್ನ ಕ್ಷೇತ್ರದಲ್ಲೇ ಅಲ್ಲ, ರಾಜ್ಯದ ಪ್ರತಿಯೊಂದು ಕ್ಷೇತ್ರದಲ್ಲೂ ಇದೇ ಪರಿಸ್ಥಿತಿ ಇದೆ. ರಸ್ತೆಗಳು ಬಹಳ ಕುಲಗೆಟ್ಟು ಹೋಗಿವೆ ಎನ್ನುವ ಮಾತನ್ನು ನಾನು ಬಹಳ ಖೇದದಿಂದ ಹೇಳಬೇಕಾಗಿದೆ. ಇದನ್ನು ದಯವಿಟ್ಟು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ಹೇಳುವುದಾದರೆ ನನ್ನ ತಾಲೂಕಿನ ಒಂದು ಉದಾಹರಣೆಯನ್ನೇ ಹೇಳ ಬೇಕೆಂದರೂ ನನ್ನ ಮನಸ್ಸಿಗೆ ಬಹಳ ಖೇದವಾಗುತ್ತದೆ. ನನ್ನ ತಾಲೂಕಿನಲ್ಲಿ ಒಂದು ಅಗ್ರಿಕಲ್ಚರಲ್ ಸ್ಕೂಲ್ ೧೯೭೫ ರಲ್ಲಿ ಮಂಜೂರಾಯಿತು. ಇದಕ್ಕೆ ಸುಮಾರು ೫೦ ಎಕರೆ ಭೂಮಿಯನ್ನೂ ಸ್ವಾಧೀನ ಮಾಡಿಕೊಂಡು ಅಲ್ಲಿ ಶಾಲಾ ಕಟ್ಟಡ ಕಟ್ಟಬೇಕೆಂದು ಮಾಡಿದರು. ಆದರೆ ೫-೬ ವರ್ಷವಾದರೂ ಇದು ವರೆಗೂ ಆ ಶಾಲಾ ಕಟ್ಟಡ ಆಗಲಿಲ್ಲ. ಏತಕ್ಕೆ ಇದು ಆಗಲಿಲ್ಲವೆಂದು ಕೇಳಿದರೆ ಸಿಮೆಂಟ್ ಇಲ್ಲವೆಂದು ಹೇಳುತ್ತಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು, ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರೂ ಬಹಳ ದಕ್ಷತೆಯಿಂದ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ನಮ್ಮ ಹಾಸನ ಡಿವಿಜನ್‌ಗೆ ೨೦೦-೩೦೦ ಮೂಟೆ ಮಾತ್ರ ಸಿಮೆಂಟ್ ಬರುತ್ತದೆ. ಅಷ್ಟರಲ್ಲಿ ನಾವು ಏನು ಮಾಡುವುದಕ್ಕಾಗುತ್ತದೆಂದು ಹೇಳುತ್ತಾರೆ. ಆದರೆ ಅದೇ ಚನ್ನರಾಯಪಟ್ಟಣ ಡಿವಿಜನ್‌ನಲ್ಲಿ, ಮೈಸೂರು ಡಿವಿಜನ್‌ನಲ್ಲಿ, ಕೆ. ಆರ್. ನಗರ ಡಿವಿಜನ್‌ನಲ್ಲಿ ಹಾಗೂ ಇನ್ನೂ ಕೆಲವು ಡಿವಿಜನ್‌ಗಳಲ್ಲಿ ಸಾವಿರಾರು ಮೂಟೆ ಸಿಮೆಂಟ್ ಬಹಳ ದಿವಸಗಳಿಂದ ಉಳಿದು ಕಲ್ಲಿನಂತಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ನಮ್ಮ ಜಿಲ್ಲೆಗೆ ಏತಕ್ಕೆ ಸಿಮೆಂಟ್ ಬರುವುದಿಲ್ಲವೆಂದು ನಾನು ಸರ್ಕಾರವನ್ನು ಕೇಳಬೇಕಾಗುತ್ತದೆ. ಅದೇ ರೀತಿ ನಮ್ಮ ತಾಲೂಕಿನ ಹೆಡ್‌ಕ್ವಾರ್ಟರ್ಸ್‌ನಲ್ಲಿ ಎನ್ ಆರ್.ಡಬ್ಲ್ಯೂ. ಸ್ಕೀಂ ನಡೆಯುತ್ತಿದೆ. ಅದಕ್ಕೂ ಕೂಡ ಸಿಮೆಂಟ್ ಇಲ್ಲವೆಂದು ಸುಮಾರು ೨ ವರ್ಷದಿಂದ ಅಲ್ಲಿ ಕೆಲಸ ನಿಲ್ಲಿಸಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ವಿರೋಧ ಪಕ್ಷದ ಎಂ.ಎಲ್.ಎ ಆಗಲಿ, ಅಥವಾ ಆಡಳಿತ ಪಕ್ಷದ ಎಂ ಎಲ್.ಎ. ಆಗಲಿ ಯಾರಿಗೂ ಕೂಡ ತಾವು ಈ ರೀತಿ ತಾರತಮ್ಯ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಎಂ. ಶೀರ್‍ನಾಳಿ ಚಂದ್ರಶೇಖರ್.—ಸರ್ಕಾರದ ದೃಷ್ಟಿಯಲ್ಲಿ ಎಲ್ಲ ಎಂ.ಎಲ್.ಎ.ಗಳು ಒಂದೇ,

ಶ್ರೀ ಟಿ.ಬಿ. ಮಲ್ಲಪ್ಪ.—ತಮಗೆ ನಮ್ಮ ಬಗ್ಗೆ ಬಹಳ ಅಭಿಮಾನವಿದೆ. ಆದ್ದರಿಂದ ಸರ್ಕಾರದ ಪರವಾಗಿ ತಾವೇ ಉತ್ತರ ಕೊಡುತ್ತಿದ್ದೀರಿ.

ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನನ್ನ ಕ್ಷೇತ್ರದಲ್ಲಿ ಎಲ್ಲ ಕೆಲಸಗಳೂ ಸ್ಥಗಿತ ವಾಗಿವೆ, ಕಾರಣ ಗೊತ್ತೇ ಇದೆ. ಸಿಮೆಂಟ್ ಇದ್ದರೆ ದುಡ್ಡಿಲ್ಲ, ದುಡ್ಡಿದ್ದರೆ ಸಿಮೆಂಟ್ ಇಲ್ಲ. ಇದು ಏತಕ್ಕೆ ಹೀಗೆ ಆಗುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದರ ಬಗ್ಗೆ ಸರ್ಕಾರ ಗಮನಕೊಡ ಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಹಾರಂಗಿ ಮತ್ತು ಹೇಮಾವತಿ ಪ್ರಾಜೆಕ್ಟ್‌ಗಳಿವೆ. ಇದರಿಂದಾಗಿ ಹತ್ತಾರು ಹಳ್ಳಿಗಳು ಪೂರ್ತಿಯಾಗಿ ಮುಳುಗಡೆಯಾಗಿವೆ, ಮತ್ತೆ ಕೆಲವು ಹಳ್ಳಿಗಳು ಅರ್ಧ ಮಾತ್ರ ಮುಳುಗಡೆಯಾಗಿವೆ. ಕೆಲವು ರೈತರು ಹಳ್ಳವಸಿ ಭೂಮಿಯಿಂದ ಮೇಲ್ಭಾಗದಲ್ಲಿರತಕ್ಕ ಖುಷ್ಕಿ ಜಮೀನಿನಲ್ಲಿ ಅಂದರೆ ದಿಬ್ಬದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಆದರೆ ಜಮೀನು ಮುಳುಗಡೆಯಾಗಿರತಕ್ಕ ರೈತರಿಗೆ ಇದುವರೆಗೂ ಪರಿಹಾರವನ್ನೇ ಕೊಟ್ಟಿಲ್ಲ. ನಾನು ಈ ಸದನಕ್ಕೆ ಬಂದ ಹೊಸದರಲ್ಲಿ ಮಾನ್ಯ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಹಾಕಿ ಎಲ್ಲೆಲ್ಲಿ ೧೦೦-೨೦೦ ಎಕರೆ ಭೂಮಿ ಇರಿಗೇಷನ್‌ಗೆ ಬರುತ್ತದೆ ಅಂಥ ಕಡೆ ಲಿಫ್ಟ್ ಇರಿಗೇಷನ್ ಹಾಕಿಸಿಕೊಟ್ಟರೆ ಭೂಮಿಯನ್ನು ಕಳೆದುಕೊಂಡ ಖುಷ್ಕಿ ಜಮೀನನ್ನ

ನಂಬಿಕೊಂಡಿರತಕ್ಕ ಜನರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಗಮನದಲ್ಲಿಟ್ಟು ಕೊಂಡು ರಸ್ತೆ ಪಕ್ಕದಲ್ಲೇ ಲಿಫ್ಟ್ ಇರಿಗೇಷನ್‌ಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ ಕೊಂಡಿದ್ದೆ. ಆಗ ಈ ವಿಚಾರವನ್ನು ಪರಿಶೀಲಿಸುತ್ತೇನೆಂದು ಹೇಳಿದ್ದರು,

ಈ ಸಂದರ್ಭದಲ್ಲಿ ಅವರೂ ಕೂಡ ಎಕ್ಸಾಮಿನ್ ಮಾಡಿ ತೋರಿಸುತ್ತೇವೆಂದು ಹೇಳಿದರು, ಅದರ ಬಗ್ಗೆ ಈವತ್ತಿನವರೆಗೆ ಕೂಡ ಕಾರ್ಯರೂಪಕ್ಕೆ ತರಲಿಲ್ಲ. ಮಾನ್ಯ ಮಂತ್ರಿಗಳನ್ನು ಅದನ್ನು ಎಕ್ಸಾಮಿನ್ ಮಾಡಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ಅಲ್ಲಿರತಕ್ಕಂಥ ಲಿಫ್ಟ್ ಇರಿಗೇಷನ್ ಪ್ರಾರಂಭದಲ್ಲಿ ಅಂದರೆ ಹಲವಾರು ಪ್ರಾಜೆಕ್ಟ್‌ಗಳು ಬಂದುದರಿಂದ ಹತ್ತಾರು ಹಳ್ಳಿಗಳು ಮುಳಗಿಹೋದವು. ಹೀಗೆ ಮುಳುಗಡೆಯಾದಾಗ ಅರ್ಧಭಾಗ ಮುಳುಗಡೆಯಾಗಿ ಅರ್ಧಭಾಗ ಮುಳಗಡೆಯಾಗದೆ ಎತ್ತರ ಪ್ರದೇಶ ದಲ್ಲಿದ್ದಂಥ ಕುಷ್ಕಿ ಜಮೀನು ಉಳಿದುಕೊಂಡವರು ಅಲ್ಲೆ ಮನೆಯನ್ನು ಮಾಡಿಕೊಂಡು ವಾಸ ಮಾಡು ತ್ತಿರುತ್ತಾರೆ. ಅವರಿಗೆ ಒಂದು ಲಿಫ್ಟ್ ಇರಿಗೇಷನ್ ಮಾಡಿಕೊಟ್ಟರೆ ಅವರು ಜಮೀನು ಸಾಗುವಳಿ ಮಾಡಿಕೊಂಡು ಅಲ್ಲಿಯೇ ಇರುವುದಕ್ಕೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಅವರಿಗೆ ಪುನಃ ಜಮೀನು ಕೊಡಬೇಕಾಗುತ್ತದೆ, ಶಿಫ್ಟ್ ಮಾಡಿಸಬೇಕಾಗುತ್ತದೆ, ಅಲ್ಲದೆ ಅವರಿಗೆ ಒಳ್ಳೆಯ ಜಮೀನನ್ನು ಕೊಡ ಬೇಕೆಂದರೆ ಬಹಳ ಕಷ್ಟದ ಕೆಲಸವೂ ಆಗುತ್ತದೆ. ಆದ್ದರಿಂದ ಈ ಲಿಫ್ಟ್ ಇರಿಗೇಷನ್‌ಗೆ ಮಾಡಿಕೊಟ್ಟರೆ ಅವರಿಗೆ ಪರಿಹಾರವನ್ನು ಕೊಡುವುದು ಕೂಡ ಉಳಿತಾಯ ಮಾಡಿದಂತಾಗುತ್ತದೆ. ಇಂಥದ್ದು ೨-೩-೪ ಸ್ಕೀಮ್ ನನ್ನ ಕಾನ್‌ಸ್ಟಿಟ್ಯುಯನ್ಸಿಯಲ್ಲಿ ಬರುತ್ತದೆ. ಅದನ್ನು ಮಾಡಿಸಿಕೊಡಬೇಕೆಂದು ಹಿಂದೆ ಕೇಳಿದ್ದೆ. ಅದನ್ನು ಎಕ್ಸಾಮಿನ್ ಮಾಡಿ ಪರಿಶೀಲನೆ ಮಾಡುತ್ತೀರೆಂದು ನಂಬಿದ್ದೇನೆ. ಶ್ರೀಮಾನ್ ತಿಮ್ಮೇಗೌಡರೂ ಕೂಡ ಮಾತನಾಡುತ್ತಾ ಹೇಳಿದರು ಈ ಚಾನಲ್ ಎಕ್ಸವೇಷನ್ ಬಗ್ಗೆ ಹೇಳುವುದಾದರೆ ಇದು ಒಂದು ದೊಡ್ಡ ಕಥೆ ಇದ್ದಹಾಗೆ. ಶ್ರೀಮಾನ್ ಅರಕೇರಿಯವರಿಗೆ ಗೊತ್ತಾಗುವುದಿಲ್ಲ. ಅವರು ಸುಮ್ಮನೆ ಮಧ್ಯೆ ಮಧ್ಯೆ ಮಾತನಾಡುತ್ತಿರುತ್ತಾರೆ. ಇದರಲ್ಲಿ ಏನಾಗಿದೆ ಎಂದರೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಕತೆ ಕೇಳಬೇಕು ಹೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಕತೆ ಹೇಳುತ್ತೇನೆ, ಸ್ವಲ್ಪ ಸೀರಿಯಸ್ ಆಗೆ ಹೇಳುತ್ತೇನೆ, ತಾವು ಸಮಾಧಾನದಿಂದ ಕುಳಿತುಕೊಂಡು ಕೇಳಬೇಕು. ಈಗ ಚಾನಲ್ಸ್ ತೆಗೆದಿದ್ದಾರಲ್ಲ. ಈ ಚಾನಲ್ಸ್‌ನ್ನು ಮುಂದೆ ತೆಗೆದುಕೊಂಡು ಹೋಗುತ್ತಿದ್ದರೆ ಹಿಂದುಗಡೆ ಸಿಲ್ಟ್ ಕುಸಿದು ಮಣ್ಣು ಮುಚ್ಚಿಕೊಂಡು ಬರುತ್ತಲೇ ಇರುತ್ತದೆ. ಇದಕ್ಕಾಗಿ ರಿವಿಟ್‌ಮೆಂಟ್ ಎಂದು ಸಿಮೆಂಟ್‌ನಿಂದ ಕಟ್ಟುತ್ತಾರೆ. ಇದು ಮತ್ತೆ ಮಣ್ಣು ಸಮೇತ ಕುಸಿದುಬಿದ್ದು ಹೋಗುತ್ತಿರುತ್ತದೆ. ಮತ್ತೆ ಅದಕ್ಕೆ ಲೈನಿಂಗ್ ಎಂದು ಮಾಡುತ್ತಾರೆ, ಅದು ಕೂಡ ಪದೇ ಪದೇ ಕುಸಿದು ಬಿದ್ದು ಹೋಗುತ್ತಿರುತ್ತದೆ. ಹೀಗೆ ಒಂದೇ ಕೆಲಸ ವನ್ನು ಹಲವು ಬಾರಿ ಮಾಡುತ್ತಿರುವುದರಿಂದ ಹಣವೆಲ್ಲ ಖರ್ಚಾಗುತ್ತಿರುತ್ತದೆ. ಹಣವನ್ನು ಈ ರೀತಿ ಖರ್ಚು ಮಾಡುತ್ತಿದ್ದರೆ ಎಲ್ಲಿಂದ ಬರುತ್ತದೆ. ಹಿಂದೆ ಹಾರಂಗಿ ಪ್ರಾಜೆಕ್ಟ್‌ಗೆ ಎಸ್ಟಿಮೇಟ್ ಮಾಡಿದ್ದು ೧೧ ಕೋಟಿ ಚಿಲ್ಲರೆ ರೂಪಾಯಿಗಳಿಗೆ ಈವತ್ತು ಅದಕ್ಕೆ ೮೫ ಕೋಟಿ ರೂಪಾಯಿಗಳು ಆಗಿರುತ್ತದೆಂದರೆ ೧೧ ಕೋಟಿ ಎಲ್ಲಿ ೮೫ ಕೋಟಿ ರೂಪಾಯಿ ಎಲ್ಲಿ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವೆಚ್ಚವಾಗ ಬೇಕಾದರೆ ಇಂಥ ಅವ್ಯವಹಾರಗಳಿಂದಲೇ ಆಗಿರುತ್ತದೆಂದು ಹೇಳಿದರೆ ತಪ್ಪಾಗಲಾರದು. ವರ್ಷ ವರ್ಷವೂ ಸಿಲ್ಟ್ ಬೀಳುತ್ತಲೇ ಇರುತ್ತದೆಂದು ಬಿಲ್ ಮಾಡುತ್ತಲೇ ಇರುತ್ತಾರೆ. ನೀರನ್ನೇ ಬಿಡ ದಿದ್ದರೂ ಸಿಲ್ಟ್ ತೆಗೆಯುವ ಅವಶ್ಯಕತೆಯಾದರೂ ಏನು ಇದೆ ಎಂದು ಅದನ್ನು ಕೇಳಿದರೆ ಏನು ಉತ್ತರ ಹೇಳುವುದೇ ಇಲ್ಲ.

ಮತ್ತೆ ಚಾನಲ್ಸ್ ಎಂದು ಏನು ತೋಡಿರುತ್ತಾರೆ ಇದಕ್ಕೆ ಫೀಲ್ಡ್ ಚಾನಲ್ಸ್ ಎಂದು ಮಾಡಿರು ತ್ತಾರೆ, ರೈತರ ಜಮೀನಿಗೆ ನೀರು ಹೋಗದಿದ್ದರೆ ಈ ರೀತಿ ಫೀಲ್ಡ್ ಚಾನಲ್ಸ್ ಎಂದು ಮಾಡುತ್ತಾರೆ. ಅದನ್ನು ಏನು ಮಾಡುತ್ತಾರೆಂದರೆ ರೈತರು ತಮ್ಮ ಭೂಮಿಗೆ ಮೇಲ್ಭಾಗದ ಭೂಮಿಯ ಹೆಚ್ಚು ನೀರು ಬಂದು ತಮ್ಮ ಭೂಮಿಯ ಸಾರವನ್ನೆಲ್ಲ ಕೊಚ್ಚಿಕೊಂಡು ಹೋಗಿಬಿಡುತ್ತಾರೆಂದು ಹೇಳಿ ಅಲ್ಲಲ್ಲೇ ಈ ಚಾನಲ್ಸ್‌ಗಳನ್ನು ಚಚ್ಚಿ ಕಲ್ಲುಗಳನ್ನು ಕಟ್ಟಿಕೊಂಡಿರುತ್ತಾರೆ. ಇದನ್ನು ತೆಗೆಯಲು ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳ ವೆಚ್ಚವನ್ನು ಮಾಡುತ್ತಿರುವುದನ್ನು ನೋಡಿದರೆ ಸಂಕಟವಾಗುತ್ತದೆ. ದೇಶದ ದುಡ್ಡು, ಬಡಜನರ ದುಡ್ಡು ಈ ರೀತಿಯಾಗಿ ಹಾಳಾಗುತ್ತಿದೆ ಇಲ್ಲಿ ನೋಡಿದರೆ ಒಂದು ರೋಡ್ ಮಾಡು ವುದಕ್ಕೆ ಹಣವಿಲ್ಲ, ಒಂದು ಸ್ಕೂಲ್ ಬಿಲ್ಡಿಂಗ್ ಬೇಕು ಎಂದು ಹಣವಿಲ್ಲವೆಂದು ಹೇಳುತ್ತಿರುತ್ತಾರೆ.

ನನ್ನ ಕ್ಷೇತ್ರದ ಬಸವಪಟ್ಟಣದಲ್ಲಿ ಒಂದು ಹೈಸ್ಕೂಲ್ ಬಿಲ್ಡಿಂಗ್‌ಗೆ ಒಂದು ರೂಮ್ ಕಟ್ಟಿಸಿಕೊಡಲಿಕ್ಕೆ ಸರ್ಕಾರದಿಂದ ಸಾಧ್ಯವಾಗಲಿಲ್ಲ. ನಾನು ಹಿಂದೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಒಂದು ರೂಮು ಕಟ್ಟಿಸಿಕೊಟ್ಟಿದ್ದು ಇದುವರೆಗೆ ಆ ಸ್ಕೂಲನ್ನು ವಿಸ್ತರಿಸಬೇಕೆಂದು ಎಷ್ಟೋ ವೇಳೆ ಅರ್ಜಿಗಳನ್ನು ಸಲ್ಲಿಸಿದರೂ ಯಾರು ಕೂಡ ತಲೆಹಾಕಲಿಲ್ಲ. ಒಂದು ಸಂದರ್ಭದಲ್ಲಿ ಒಂದು ರೂಮ್‌ನ್ನು ಕಟ್ಟಿಸಿಕೊಡಬೇಕೆಂದು ಹೇಳಿ ಮಾನ್ಯ ಪಿ.ಡಬ್ಲ್ಯೂ.ಡಿ.ಮಂತ್ರಿಗಳಿಗೆ ಅರ್ಜಿ ಕೊಟ್ಟು ಹೇಳಿದೆ. ಸ್ವಾಮಿ ಅರ್ಜಿಗಳನ್ನು ಕೊಟ್ಟು ಕೊಟ್ಟು ಸಾಕಾಗಿದೆ, ನೀವು ಏನಾದರೂ ಕಟ್ಟಿಸಿಕೊಡುತ್ತೇವೆಂದು ಬರವಸೆಯನ್ನು ಕೊಟ್ಟರೆ ಅರ್ಜಿಯನ್ನು ಕೊಡುತ್ತೇನೆ, ಆ ಸಂದರ್ಭದಲ್ಲಿ ಮಾನ್ಯ ಲಕ್ಷ್ಮಣಯ್ಯನವರು ಇದ್ದರೂ, ಅರ್ಜಿಯನ್ನು ಕೊಟ್ಟೆ, ಅರ್ಜಿಗೆ ಏಂಡಾರ್ಸ್‌ಮೆಂಟ್ ಹಾಕಿ ಕಳುಹಿಸಿದರು. ಅದು ಎಲ್ಲಿಗೆ ಹೋಯಿತು ಏನಾಯಿತು ಎನ್ನುವುದು ಗೊತ್ತಾಗಲಿಲ್ಲ ಇಂಥ ಕೆಲಸ ಕಾರ್ಯಗಳಿಗೆ ಸರ್ಕಾರದಲ್ಲಿ ದುಡ್ಡು ಇರುವುದಿಲ್ಲ. ಆದರೆ ಅವಶ್ಯಕತೆ ಇಲ್ಲದುದಕ್ಕೆ ಒಂದಕ್ಕೆ ನಾಲ್ಕರಷ್ಟು ಹತ್ತರಷ್ಟು ಹಣವನ್ನು ಖರ್ಚು ಮಾಡುತ್ತಿರುತ್ತಾರೆ. ನಾನು ಇನ್ನೂ ಹಲವಾರು ವಿಚಾರಗಳನ್ನು ಹೇಳಬೇಕೆಂದು ಇದ್ದೆ. ಕಾಲವಕಾಶವಿಲ್ಲದುದರಿಂದ ನಾನು ಸ್ವಂತವಾಗಿ ನೋಡಿದ್ದು ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಮಾನ್ಯ ಸಚಿವರು ಇವೆಲ್ಲವನ್ನು ಕೂಲಂಕುಶವಾಗಿ ಯೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಮಾನ್ಯ ಅಧ್ಯಕ್ಷರೇ ಈವತ್ತಿನ ದಿವಸ ನಮ್ಮ ಮುಂದಿರುವ ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಇರಿಗೇಷನ್ ವಿಚಾರವಾಗಿ ಹೇಳುವುದಾದರೆ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ತುಂಗಭದ್ರಾ ಪ್ರಾಜೆಕ್ಟ್ ತೆಗೆದುಕೊಂಡರೆ. ತುಂಗಭದ್ರಾ ಪ್ರಾಜೆಕ್ಟ್ ಮುಗಿದದ್ದು ೧೯೫೭ರಲ್ಲಿ. ಬಳ್ಳಾರಿ ಕರ್ನಾಟಕ ಜಿಲ್ಲೆಗೆ ೧–೧–೧೯೫೩ರಲ್ಲಿ ಹಳೆ ಮೈಸೂರು ಇದ್ದಾಗ ಸೇರಿಸಲ್ಪಟ್ಟಿತು. ಆಗ ತುಂಗಭದ್ರಾ ಬೋರ್ಡ್ ಎಂದು ಹೇಳಿ ಲೆಜಿಸ್ಲೇಶನ್ ತಂದು ಸುಮಾರು ೨೮ ವರ್ಷಗಳಾಯಿತು. ಇದನ್ನು ಸ್ಥಾಪನೆ ಮಾಡಿದ ಉದ್ದೇಶವೇನೆಂದರೆ ಆಂಧ್ರ ಮತ್ತು ಕರ್ನಾಟಕದಲ್ಲಿ ತುಂಗಭದ್ರಾ ಕ್ಯಾನಲ್ ವರ್ಕ್ಸ್ ಎಂದು ಏನು ಇದೆ ಅದನ್ನು ಮುಗಿಸಬೇಕು ಎನ್ನುವ ಉದ್ದೇಶದಿಂದ ಆಂಧ್ರದವರು ಮತ್ತು ಕರ್ನಾಟಕದವರು ಬೋರ್ಡ್‌ನಲ್ಲಿ ಇರತಕ್ಕಂಥದ್ದು ಎಂದು ಹೇಳಿ ಸ್ಥಾಪನೆ ಮಾಡಿದರು. ಇದನ್ನು ೧೯೫೩ರಲ್ಲಿ ಅಸ್ತಿತ್ವಕ್ಕೆ ತಂದಿದ್ದರೂ ಕೂಡಾ ಇನ್ನೂ ರದ್ದು ಮಾಡಿಲ್ಲ. ೨೮ ವರ್ಷ ಕಳೆದರೂ ಕೂಡಾ ಇನ್ನೂ ರದ್ದು ಆಗಿಲ್ಲ ಎಂದು ನಾನು ವ್ಯಸನದಿಂದ ಹೇಳಬೇಕಾಗಿದೆ. ಸಭೆಯಲ್ಲಿ ಎಷ್ಟೋ ಸಾರಿ ತಿದ್ದುಪಡಿಗಳನ್ನು ತರುತ್ತೀರಿ. ರೈತರ ಸಲುವಾಗಿ ಈ ಒಂದು ವಿಷಯದ ಬಗ್ಗೆ ತಿದ್ದುಪಡಿಯನ್ನು ತನ್ನಿ ಎಂದು ಹೇಳುತ್ತೇನೆ. ಈ ಒಂದು ಬೋರ್ಡ್ ಇರುವುದರಿಂದ ಕರ್ನಾಟಕದ ರೈತರಿಗೆ ಬಹಳ ತೊಂದರೆಯಾಗಿದೆ. ಇದರಿಂದ ನ್ಯಾಯಕ್ಕಿಂತ ಅನ್ಯಾಯವೇ ಜಾಸ್ತಿ ಆಗಿದೆ. ಅಲ್ಲಿಯ ಬೋರ್ಡ್‌ನಲ್ಲಿ ಮೂರನೇ ಎರಡು ಭಾಗದಲ್ಲಿ ಆಂಧ್ರ ಪ್ರದೇಶದ ಅಧಿಕಾರಿಗಳು ಇದ್ದು ಕರ್ನಾಟಕದವರು ಕೇವಲ ಮೂರನೇ ಒಂದು ಭಾಗ ಇದ್ದಾರೆ. ಅಲ್ಲಿನ ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ಆಂಧ್ರದಿಂದ ಬಂದಂತಹವರಾಗಿದ್ದಾರೆ. ಆ ಬೋರ್ಡ್ ಇವರ ಅಧೀನದಲ್ಲಿದೆ. ಅಲ್ಲಿ ನಮ್ಮವರು ಒಬ್ಬರು ಚೀಫ್ ಎಂಜಿನಿಯರ್ ಇದ್ದಾರೆ; ಅವರನ್ನು ಏನಾದರೂ ಕೇಳಿದರೆ ಇಲ್ಲಿ ನಮ್ಮ ಮಾತು ಏನೂ ನಡೆಯುವುದಿಲ್ಲ, ಆಂಧ್ರದವರೇ ಇಲ್ಲಿ ಹೆಚ್ಚು ಇರುವುದರಿಂದ ಅವರ ಮಾತೇ ನಡೆಯುತ್ತದೆ, ನಮ್ಮದೇನೂ ನಡೆಯುವುದಿಲ್ಲ ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದ ಜಾಯಿಂಟ್ ಸೆಕ್ರೆಟರಿಯವರು ಅಲ್ಲಿಯ ಚೇರ್ಮನ್ ಆಗಿದ್ದಾರೆ. ಇವರು ಬೋರ್ಡ್ ಮೀಟಿಂಗ್ ಇದ್ದಾಗ ಮಾತ್ರ ಹೈದರಾಬಾದ್‌ನಲ್ಲೋ, ಡೆಲ್ಲಿಯಲ್ಲೋ, ಬೆಂಗಳೂರಿನಲ್ಲೋ ಬಂದು ಮೀಟಿಂಗ್ ಅಟೆಂಡ್ ಮಾಡಿ ಹೋಗುತ್ತಾರೆ. ಅಲ್ಲಿ ಇರತಕ್ಕಂತಹ ಸೆಕ್ರೇಟರಿಯವರು ಐ.ಎ.ಎಸ್.ನವರು ಇದ್ದಾರೆ. ಈ ತುಂಗಭದ್ರಾ ಅಣೆಕಟ್ಟಿನ ಕೆಲಸ ಕಾರ್ಯಗಳು ಜಾಗ್ರತೆಯಾಗಬೇಕು ಎನ್ನುವ ಉದ್ದೇಶದಿಂದ ಈ ಒಂದು ಬೋರ್ಡನ್ನು ಸ್ಥಾಪನೆ ಮಾಡಲಾಯಿತು. ಆ ಬಗ್ಗೆ ಎಲ್ಲ ಕೆಲಸ ಕಾರ್ಯಗಳು ಆಗಿದ್ದರೂ ಸಹಾ ಕೇಂದ್ರ ಸರ್ಕಾರದವರು ಏಕೆ ಈ ಬೋರ್ಡನ್ನು ರದ್ದು ಮಾಡಿಲ್ಲವೋ ಗೊತ್ತಾಗುತ್ತಾ ಇಲ್ಲ. ಈ ಒಂದು ಬೋರ್ಡ್‌ನಿಂದ ಕೋಟ್ಯಾಂತರ ರೂಪಾಯಿ ಹಣ ಪೋಲಾಗುತ್ತಿದೆ. ಇದು ಒಂದು ಬಿಳಿ ಆನೆ ಇದ್ದ ಹಾಗೆ ಇದೆ. ಈಗ ಈ ಬೋರ್ಡಿನಲ್ಲಿ ಇರುವ ಕೆಲಸ ಏನೆಂದರೆ, ಆಂಧ್ರಕ್ಕೆ ಎಷ್ಟು ನೀರು ಹೋಗುತ್ತದೆ, ಹಾಗೂ ಎಷ್ಟು ನೀರು ಕೊಡಬೇಕು ಎಂಬುದನ್ನು ನೋಡಿಕೊಳ್ಳುವುದಷ್ಟೇ

ಇಲ್ಲಿರತಕ್ಕಂತಹ ಅಷ್ಟೊಂದು ಅಧಿಕಾರ ವರ್ಗಕ್ಕೆ ಈ ಒಂದು ಸಣ್ಣ ವಿಷಯಕ್ಕಾಗಿ ಖರ್ಚು ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಹಣ ಇದೆ, ಆದರೆ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ, ರಿಪೇರಿ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಹಣ ಇಲ್ಲ ಎಂದರೆ ಏನು ಅರ್ಥ? ಈ ತುಂಗಭದ್ರಾ ನೀರಿನಲ್ಲಿ ಮೂರನೇ ಒಂದು ಭಾಗ ಕರ್ನಾಟಕಕ್ಕೂ ಹಾಗೂ ಮೂರನೇ ಎರಡು ಭಾಗ ಆಂಧ್ರ ಪ್ರದೇಶಕ್ಕೂ ಹೋಗುವುದು ಇದೆ. ಈ ಒಂದು ಬೋರ್ಡ್ ಕರ್ನಾಟಕ ಬೋರ್ಡ್ ಅಲ್ಲ, ಆಂಧ್ರ ಬೋರ್ಡ್ ಎಂದು ಹೇಳಿದರೆ ತಪ್ಪಾಗಲಾರದು ಇಲ್ಲಿಯ ದೊಡ್ಡ ಅಧಿಕಾರಿಗಳು ಆಂಧ್ರದವರೇ ಆಗಿದ್ದು ಅವರು ಇದನ್ನು ಕಂಟ್ರೋಲ್ ಮಾಡುತ್ತಿದ್ದಾರೆ. The Superintending Engineer appointed by the government of Andhra Pradesh is whole and sole there He is the monarch of the administration there. ಇಲ್ಲಿ ನಮಗೆ ಬರತಕ್ಕ ನೀರಿನ ಮೇಲೆ ಸರಿಯಾದ ಹತೋಟಿ ಇಲ್ಲದೇ ನಮ್ಮ ರೈತರಿಗೆ ಬಹಳ ಅನ್ಯಾಯವಾಗಿದೆ. ಅವರಿಗೆ ಬೇಕಾದ ರೀತಿ, ತಮಗೆ ಸರಿಬಂದ ರೀತಿ ಆಂಧ್ರ ಪ್ರದೇಶದ ಅಧಿಕಾರಿಗಳು ನಡೆದುಕೊಳ್ಳುತ್ತಿದ್ದಾರೆ. ಅದು ಏನೇ ಇರಲಿ, ಈ ಒಂದು ಬೋರ್ಡಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುವುದು ಅನ್ಯಾಯ ಎಂದು ನಾನು ಹೇಳುತ್ತಿದ್ದೇನೆ. ಈ ಒಂದು ಬೋರ್ಡ್ ಬಗ್ಗೆ, ಇರಿಗೇಷನ್ ಅಡ್ವೈಸರಿ ಬೋರ್ಡಿನ ಚೇರ್ಮನ್ ಅವರು ಕೂಡಾ ೧೧-೩-೧೯೮೧ರಂದು ಮೀಟಿಂಗ್ ಮಾಡಿ ಎಂದು ಸರ್ಕಾರಕ್ಕೆ ರೆಕಮೆಂಡ್ ಮಾಡಿದ್ದಾರೆ.

> "The Board is of the view that there is no necessity of having such a high power Board and the same to be replaced by some control body to just oversee the water management and to ensure supply of water to Andhra Pradesh in terms of Krishna Award. This question may please be taken up with Government of India and see that this Tungabhadra Board is replaced by some other control body"

ಈ ರೀತಿ ಅವರು ರೆಕಮೆಂಡ್ ಮಾಡಿದ್ದಾರೆ. ನೀರನ್ನು ಎಷ್ಟು ಬಿಡಬೇಕು ಎನ್ನುವ ಬಗ್ಗೆ ಕೋಟ್ಯಾಂತರ ರೂಪಾಯಿಯನ್ನು ಖರ್ಚು ಮಾಡತಕ್ಕದ್ದೇನು? ನಮ್ಮ ರೈತರಿಗೆ ಅನ್ಯಾಯ ಮಾಡತಕ್ಕದ್ದು ಏನು ಎಂದು ನಾನು ಸರ್ಕಾರಕ್ಕೆ ಕೇಳುತ್ತೇನೆ. ಸುಮಾರು ೨೮ ವರ್ಷಗಳಿಂದ ಪ್ರತಿಯೊಂದು ಶಾಸನ ಸಭೆಯಲ್ಲೂ ಪ್ರತಿಯೊಂದು ವೇದಿಕೆಯಲ್ಲಿಯೂ ಈ ವಿಷಯ ಬರುತ್ತದೆ. ಈ ಬಗ್ಗೆ ಸೆಂಟ್ರಲ್ ಆಕ್ಟ್‌ನಲ್ಲಿ ತಿದ್ದುಪಡಿ ತಂದು ಈ ಒಂದು ಬೋರ್ಡ್‌ನ್ನು ರದ್ದು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಎರಡನೆಯದಾಗಿ, ಆಂಧ್ರ ಪ್ರದೇಶಕ್ಕೆ ಎಷ್ಟು ಪ್ರಮಾಣದಲ್ಲಿ ನೀರನ್ನು ಬಿಡಬೇಕು ಇದೆ ಆ ಬಗ್ಗೆ ಬಾರ್ಡರ್‌ನಲ್ಲಿ ಒಬ್ಬ ಹೆಚ್. ಯು. ಡಿ. ಅಧಿಕಾರಿ ಇದ್ದರೆ ಅವರು ನಮ್ಮ ಬಾರ್ಡರ್‌ಗೆ ಎಷ್ಟು ನೀರು ಹೋಗುತ್ತದೆ ಹಾಗೂ ಅವರಿಗೆ ಎಷ್ಟು ನೀರು ಹೋಗುತ್ತದೆ ಎಂಬುದನ್ನು ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ೨೮ ವರ್ಷ ಆಗಿದ್ದರೂ ಈ ಬಗ್ಗೆ ನಮ್ಮ ಸರ್ಕಾರ ಏನೂ ಪ್ರಯತ್ನ ಮಾಡಿಲ್ಲ ಈಗಾದರೂ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಾಯ ತಂದು ಈ ಒಂದು ಬೋರ್ಡನ್ನು ರದ್ದುಪಡಿಸಬೇಕೆಂದು ನಾನು ಹೇಳುತ್ತೇನೆ. ಕೃಷ್ಣ ಪ್ರಾಜೆಕ್ಟ್‌ನಲ್ಲಿ ೯೦ ಭಾಗ ನೀರು ಅವರಿಗೆ ಹೋಗಿ ೧೦ ಭಾಗ ನಮಗೆ ನೀರು ಬಂದರೂ ಸಹ ಅಲ್ಲಿನ ಮ್ಯಾನೇಜ್‌ಮೆಂಟ್ ನಮ್ಮದೇ ಇದೆ. ಆ ಪ್ರಕಾರ ಈ ಒಂದು ಬೋರ್ಡನ್ನು ರದ್ದು ಮಾಡಿ ಎಷ್ಟು ಪ್ರಮಾಣದಲ್ಲಿ ನೀರು ಬಿಡಬೇಕು ಎನ್ನುವುದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಬೋರ್ಡನ್ನು ಇಟ್ಟುಕೊಳ್ಳುವುದು ಬೇಡ ಎಂದು ನಾನು ಹೇಳುತ್ತೇನೆ. ಇನ್ನು ತುಂಗಭದ್ರಾ ಪ್ರಾಜೆಕ್ಟ್ ಕೆಳಗೆ ಅನಧಿಕೃತ ಸಾಗುವಳಿ ಜಾಸ್ತಿಯಾಗಿದೆ. ಇದರಿಂದ ಅಧಿಕೃತ ಸಾಗುವಳಿದಾರರಿಗೆ ನೀರು ಸಿಗುವುದೇ ಇಲ್ಲ. ಇನ್ನು ಟೈಲ್ ಎಂಡರ್ ಪರಿಸ್ಥಿತಿ ಬಹಳ ಗಂಭೀರ ಇದೆ. ಆದ್ದರಿಂದ ಈ ಅನಧಿಕೃತ ಸಾಗುವಳಿದಾರರು ಯಾರಿದ್ದಾರೆ ಅವರು ಸಾಗುವಳಿಯನ್ನು ನಿಲ್ಲಿಸಿದರೂ ಸಹಾ ಟೈಲ್ ಎಂಡರ್ಸ್‌ಗೆ ನೀರು ಸಿಗುವುದು ಕಷ್ಟ ಇದೆ. ಈಗ ಅನಧಿಕೃತ ಸಾಗುವಳಿದಾರರಿಗೆ ೫೦-೬೦ ಪಟ್ಟು ಪೆನಾಲ್ಟಿಯನ್ನು ಹಾಕಲಾಗುತ್ತದೆ ಎಂಬ ಕಾನೂನು ಇದೆ. ಈ ಒಂದು ಪೆನಾಲ್ಟಿ ಎನ್ನುವುದು ಬರೀ ಪುಸ್ತಕದಲ್ಲಿ ಇದೆಯೋ ಹೊರತು ಅದು ಸರಿಯಾಗಿ ಜಾರಿಗೆ ಬಂದಿಲ್ಲ ಹೀಗಾದರೆ ಈ ಅನಧಿಕೃತ ಸಾಗುವಳಿಯನ್ನು ಇಂಡೈರೆಕ್ಟಾಗಿ ಎನ್‌ಕರೇಜ್ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ಯಾರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ ಅವರಿಗೆ ಕಾನೂನಿ

ನಲ್ಲಿ ತಿದ್ದುಪಡಿ ತಂದು ಕಾನೂನು ರೀತ್ಯ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ದೊಡ್ಡ ಮನಸ್ಸು ಮಾಡಿ ಏನು ಬೆಟರ್‌ಮೆಂಟ್ ಲೆವಿಯನ್ನು ರದ್ದು ಮಾಡಿದ್ದಾರೆ ಅದರಿಂದ ರೈತರಿಗೆ ಬಹಳ ಅನುಕೂಲವಾಗಿರುವುದರಿಂದ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ.

ಇನ್ನು ೧೯೫೮ರಲ್ಲಿ ಅಲ್ಲಿನ ಆಯುಕಟ್ಟು ರಸ್ತೆಗಳ ನಿರ್ಮಾಣಕ್ಕಾಗಿ ೫೮ ಲಕ್ಷ ರೂಪಾಯಿಗಳನ್ನು ಆಗಿನ ಸರ್ಕಾರ ಸ್ಯಾಂಕ್ಷನ್ ಮಾಡಿತ್ತು. ಆ ೧೩೩ ಮೈಲಿಯ ರಸ್ತೆ ಇನ್ನೂ ಸಹಾ ಪೂರ್ಣಗೊಂಡಿರುವುದಿಲ್ಲ. ಅಲ್ಲಲ್ಲಿ ಚೂರು ಚೂರು ರಸ್ತೆಗಳು ಹಾಗೇ ಉಳಿದಿವೆ. ಆಗ ಏನು ೫೮ ಲಕ್ಷದಲ್ಲಿ ಈ ರಸ್ತೆಗಳನ್ನು ತೆಗೆದುಕೊಳ್ಳಲಾಯಿತು ಅವನ್ನು ಈಗ ತೆಗೆದುಕೊಂಡಿದ್ದರೆ ಸುಮಾರು ೨ ಕೋಟಿ ರೂಪಾಯಿ ಬೇಕಾಗುತ್ತಿತ್ತು. ಈ ಆಯುಕಟ್ಟು ರಸ್ತೆಗಳು ಮುಖ್ಯವಾದ ಆಯುಕಟ್ಟಿನಲ್ಲಿ ಪೂರ್ಣಗೊಂಡಿಲ್ಲ. ಈ ಅಪೂರ್ಣ ರಸ್ತೆಗಳು ಏನಿವೆ ಇವನ್ನು ಪೂರ್ಣಗೊಳಿಸಬೇಕೆಂದು ನಾನು ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಹಾಗೂ ಈ ಒಂದು ರಸ್ತೆಗಳಿಗೆ ಮೇಂಟೆನೆನ್ಸ್ ಗ್ರಾಂಟ್ ಇಲ್ಲ. ಪಿ.ಡಬ್ಲ್ಯೂ.ಡಿ. ರಸ್ತೆಗಳಿಗೆ ಇರುವಂತೆ ಈ ರಸ್ತೆಗಳಿಗೆ ರಿಪೇರಿ ಮಗದೊಂದಕ್ಕೆ ಮೇಂಟೆನೆನ್ಸ್ ಗ್ರಾಂಟ್ ಕೊಡಬೇಕೆಂದು ನಾನು ಈ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇನ್ನು ಹಂಗೇರಿಯಲ್ಲಿ ಅಕ್ವಡೆಟಾ ಕಳೆದ ೫ ವರ್ಷಗಳಿಂದ ನಡೆಯುತ್ತಿದೆ. ಅದು ಇನ್ನೂ ಮುಗಿದಿಲ್ಲ. ಈ ಕೆಲಸ ನಿಧಾನವಾಗಿ, ಎಸ್ಟಿಮೇಟ್ ರಿವೈಸ್ ಆದಾಗ ಅದು ಮಂಜೂರಾತಿಗಾಗಿ ಸರ್ಕಾರಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಇದು ಆದಷ್ಟು ಬೇಗ ಪೂರ್ಣಗೊಳ್ಳಬೇಕೆಂದು ಹೇಳುತ್ತೇನೆ. ಅಲ್ಲಿನ ಕಂಟ್ರಾಕ್ಟರ್ ಬೇಕಂತಲೇ ನಿಧಾನ ಮಾಡುತ್ತಿದ್ದಾರೆ. ಈ ಬಗ್ಗೆ ರೊಕ್ಕ ಬಡ್ಜೆಟ್‌ನಲ್ಲಿ ಇದ್ದರೂ ಸಹಾ ೫ ವರ್ಷದಿಂದ ಇದು ಕಂಪ್ಲೀಟ್ ಆಗಿಲ್ಲ. ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

೬-೦೦ ಪಿ. ಎಂ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾತನಾಡಬೇಕಾಗಿದೆ. ಮಂತ್ರಿಗಳು ದಕ್ಷ ಆಡಳಿತಗಾರರು ಅನಿಸಿದ್ದಾರೆ, ಆದರೆ ಸುಮಾರು ನಾನು ೧೯೫೭ನೇ ಇಸವಿಯಿಂದಲೂ ವಾರ್ಷಿಕ ವರದಿಯನ್ನು ನೋಡುತ್ತಾ ಹೋದರೆ ಮಾಸ್ಟರ್‌ಪ್ಲಾನ್ ತಯಾರು ಮಾಡುತ್ತಿದ್ದೇವೆ, ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸೌಕರ್ಯ ಮಾಡುತ್ತೇವೆಂದು ಸ್ವಾತಂತ್ರ್ಯ ಬಂದು ೩೫ ವರ್ಷಗಳಾದರೂ ಇದೇ ರೀತಿ ಬರುತ್ತಿದೆ. ನಮ್ಮ ಕರ್ನಾಟಕರಾಜ್ಯದಲ್ಲಿ ೧೦೦ಕ್ಕೆ ೭೫ ಭಾಗ ಜನರು ಹಳ್ಳಿಗಾಡುಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದಾರೆ. ನಗರಗಳಲ್ಲಿ ಒಂದು ಗಂಟೆ ನೀರು ತಡವಾಗಿ ಬಂದರೆ ಈ ಸದನದಲ್ಲಿ ಎಷ್ಟೆಷ್ಟು ಗಲಾಟೆ ಮಾಡುತ್ತೇವೆ. ಇವತ್ತು ಸ್ವಾತಂತ್ರ್ಯ ಬಂದು ೩೫ ವರ್ಷಗಳಾದರೂ ಕುಡಿಯುವುದಕ್ಕೆ ನೀರು ಇಲ್ಲದೆ, ಓಡಾಡುವುದಕ್ಕೆ ರಸ್ತೆಗಳಿಲ್ಲದೆ ಜನ ತೊಂದರೆ ಪಡುತ್ತಿದ್ದಾರೆ. ಅವರು ಇನ್ನೇನು ಕೇಳುತ್ತಾರೆ, ಕುಡಿಯುವುದಕ್ಕೆ ನೀರು ಓಡಾಡುವುದಕ್ಕೆ ರಸ್ತೆ ಅವರು ಬೇರೆ ಇನ್ನೇನನ್ನು ಕೇಳುವುದಿಲ್ಲ. ಇವತ್ತಿನವರೆಗೂ ಸರಿಯಾದ ರಸ್ತೆಗಳನ್ನು ಗ್ರಾಮಾಂತರ ಜನಗಳಿಗೆ ಒದಗಿಸಿಲ್ಲ. ಮಾಸ್ಟರ್‌ಪ್ಲಾನನ್ನು ಪುಸ್ತಕದಲ್ಲಿ ನೋಡುತ್ತಿದ್ದೇವೆ, ಅದು ಕನ್ನಡಿಯೊಳಗಿನ ಗಂಟಿನಂತೆ ನಮಗೆ ಕಾಣುತ್ತಿದೆ. ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಸಚಿವರಾಗಿದ್ದಾಗ ಮಾಸ್ಟರ್ ಪ್ಲಾನನ್ನು ತಯಾರು ಮಾಡಿದರು. ಆ ಮಾಸ್ಟರ್ ಪ್ಲಾನ್ ಎಲ್ಲಿ ಇದೆಯೋ ಹೇಗಿದೆಯೊ ನನಗೆ ಅರ್ಥವಾಗುವುದಿಲ್ಲ. ೩೫ ವರ್ಷಗಳಿಂದಲೂ ಮಾಸ್ಟರ್‌ಪ್ಲಾನ್ ನೋಡುತ್ತಿದ್ದೇವೆ, ೫, ೪, ೫ನೇ ಪಂಚ ವಾರ್ಷಿಕ ಯೋಜನೆಗಳಾಯಿತು ಈಗ ೬ನೆಯ ಪಂಚವಾರ್ಷಿಕ ಯೋಜನೆಯನ್ನು ನೋಡುತ್ತಿದ್ದೇವೆ ಈಗಲಾದರೂ ಇದನ್ನು ಮಾಡುವುದಕ್ಕೆ ಶಕ್ಯವಾಗಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ೨೬,೮೦೦ ಗ್ರಾಮಗಳಲ್ಲಿ ೭,೩೨೯ ಗ್ರಾಮಗಳಿಗೆ ಆಲ್‌ವೆದರ್ ರೋಡ್ಸ್ ಇವೆಯೋ ? ಇನ್ನು ೧೮, ೧೯ ಸಾವಿರ ಗ್ರಾಮಗಳಿಗೆ ರಸ್ತೆಗಳಿಲ್ಲ ಅನ್ನತಕ್ಕದ್ದನ್ನು ಕಾಣುತ್ತಿದ್ದೇವೆ. ಬೆಂಗಳೂರಿನಲ್ಲಿ ಸಿಮೆಂಟ್ ರಸ್ತೆ. ಡಾಮರು ರಸ್ತೆ ಇದ್ದರೆ ಗ್ರಾಮಗಳಿಗೆ ಮಣ್ಣಿನ ರಸ್ತೆಗಳಾದರೂ ಬೇಡವೆ ಎಂದು ಕೇಳಬೇಕಾಗಿದೆ. ನಾನು ಸರ್ಕಾರವನ್ನು ಕೇಳುವುದಿಷ್ಟೆ ಮಾಸ್ಟರ್‌ಪ್ಲಾನ್ ತಯಾರು ಮಾಡಿದರೆ ಆ ಪ್ಲಾನನ್ನು ಕಾರ್ಯಗತ ಮಾಡುವುದಕ್ಕೆ ಮಾನ್ಯಮಂತ್ರಿಗಳು ಶೀಘ್ರಗಮನ ಕೊಟ್ಟು ೧೮ ಸಾವಿರ ಗ್ರಾಮಗಳಿಗೆ ರಸ್ತೆಗಳ ಸೌಕರ್ಯ ಏರ್ಪಾಡು ಮಾಡಬೇಕೆಂದು ನಾನು ಮಂತ್ರಿಗಳನ್ನು ಕೇಳುತ್ತಿದ್ದೇನೆ. ಬೇರೆ ರಾಜ್ಯಗಳಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳಿಗೂ ನಮ್ಮ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳಿಗೂ ಹೋಲಿಸಿದರೆ

ನಮ್ಮ ರಾಜ್ಯದ ರಾಷ್ಟ್ರೀಯ ಹೆದ್ದಾರಿಗಳು ಬಹಳ ಕಡಿಮೆ ಇವೆ. ಮಾನ್ಯ ಮಂತ್ರಿಗಳು ವಿರೋಧ ಪಕ್ಷದಲ್ಲಿದ್ದಾಗ ಈ ವಿಷಯವನ್ನು ಅವರೇ ಪ್ರಸ್ತಾಪ ಮಾಡಿದ್ದಾರೆ. ಕೇಂದ್ರಸರ್ಕಾರ ಕರ್ನಾಟಕಕ್ಕೆ ಇದರ ಬಗ್ಗೆ ಗಮನಕೊಟ್ಟಿಲ್ಲ. ಕೇಂದ್ರ ಸರ್ಕಾರದಲ್ಲಿ ನಮ್ಮವರೇ ಮಂತ್ರಿಗಳಾಗಿರುವುದರಿಂದ ಈಗ ನಾವು ಪ್ರಯತ್ನಪಟ್ಟರೆ ನಮಗೆ ಅನುಕೂಲವಾಗುತ್ತದೆ. ನೂರು ರಸ್ತೆಗಳನ್ನು ಮಾಡುವುದರಿಂದ ಬಹಳ ವ್ಯತ್ಯಾಸವಾಗುತ್ತದೆ, ಮಾಡತಕ್ಕ ದೊಡ್ಡ ರಸ್ತೆ ಇದೆ, ಮುಖ್ಯವಾಗಿ ಈ ರಸ್ತೆ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಮಾನ್ಯ ಮಂತ್ರಿಗಳು ಯೋಚನೆಮಾಡಿ ಈ ರಸ್ತೆಯನ್ನು ಬೇಗ ಮಾಡಿಸಿ ಕೊಡಬೇಕು. ಮೈಸೂರಿನಿಂದ–ಬೀದರ್ ಮಯಾ ಮಂಡ್ಯಾ, ನಾಗಮಂಗಲ, ಬಳ್ಳಾರಿ, ಸಿಂಧನೂರು, ಗುಲ್ಬರ್ಗಾ ಬೀದರ್‌ವರೆಗೆ ಸುಮಾರು ೬೨೮ ಕಿಲೋಮೀಟರ್ ಆಗುತ್ತದೆ. ಮುಂಚೆ ಇದ್ದ ಸರ್ಕಾರಗಳು ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಗೆ ಕನ್‌ವರ್ಟ್ ಮಾಡುತ್ತೇವೆಂದು ಹೇಳಿದ್ದರು. ಈ ರಸ್ತೆ ಮಾಡುವುದರಿಂದ ೮ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಕೇಂದ್ರಸರ್ಕಾರಕ್ಕೆ ಒತ್ತಾಯ ತರುತ್ತೇವೆ, ಆಕ್ಷನ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಇವತ್ತಿನವರೆಗೂ ಈ ರಸ್ತೆ ಸ್ಟೇಟ್‌ವೇ ನ್ಯಾಷನಲ್‌ವೇಗೆ ಪರಿವರ್ತನೆಯಾಗಿಲ್ಲ. ಇದು ೯ ಜಿಲ್ಲೆಗಳಿಗೆ ಅನುಕೂಲವಾಗುವುದರ ಜೊತೆಗೆ ೮೦ ತಾಲ್ಲೂಕುಗಳ ಮುಖಾಂತರ ಹಾದುಹೋಗುತ್ತದೆ. ಹಿಂದುಳಿದಿರುವ ಜಿಲ್ಲೆಯಾದ ಗುಲ್ಬರ್ಗಾ ಜಿಲ್ಲೆಗೆ ಬಹಳ ಅನುಕೂಲವಾಗುತ್ತದೆ. ಯಾವುದೇ ರೀತಿಯಲ್ಲಿ ಹಿಂದುಳಿದಿರುವ ಜಿಲ್ಲೆ ಎಂಬುದು ಅಂಕಿ ಅಂಶಗಳಿಂದ ಗೊತ್ತಿದೆ. ಆದ್ದರಿಂದ ಇದನ್ನು ಟಾಪ್ ಪ್ರಿಯಾರಿಟಿಯ ಮೇಲೆ ತೆಗೆದುಕೊಂಡು ಕೇಂದ್ರಸರ್ಕಾರಕ್ಕೆ ಒತ್ತಾಯ ತಂದರೆ, ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಿದರೆ ನಮ್ಮ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತದೆ. ಮೇಂಟೆನೆನ್ಸ್ ರಿಪೇರಿಗಾಗಿ ಎಷ್ಟು ಖರ್ಚು ಮಾಡುತ್ತಿದ್ದೇವೆ, ೧೦, ೧೫, ೫೦ ಮತ್ತು ೧೦೦ ಮೈಲಿ ರಸ್ತೆಗಳನ್ನು ಏನು ತೆಗೆದುಕೊಳ್ಳುತ್ತಿದ್ದೇವೆ ಈ ಹಣ ಉಳಿಯುತ್ತದೆ. ಕೋಟ್ಯಾಂತರ ರೂಪಾಯಿಗಳಷ್ಟು ಹಣ ಉಳಿದು ಬೇರೆ ರಸ್ತೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಮ್ಮ ಮಂತ್ರಿಗಳು ಈ ವಿಷಯದಲ್ಲಿ ಬಹಳ ಮುಖ್ಯವಾಗಿ ಈ ರಸ್ತೆಯನ್ನು ಜಾಗ್ರತೆಯಾಗಿ ಮತ್ತೆ ತೀರ್ಮಾನ ತೆಗೆದುಕೊಂಡು ೬೨೮ ಕಿಲೋಮೀಟರ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆ ಮಾಡಿದರೆ ೯ ಜಿಲ್ಲೆಗಳ ಜನರಿಗೆ ಅನುಕೂಲವಾಗುತ್ತದೆ, ಹಣ ಉಳಿಯುತ್ತದೆ, ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ರೆಕಮಂಡ್ ಮಾಡುತ್ತಾರೆಂದು ನನಗೆ ಭರವಸೆ ಇದೆ.

ಇನ್ನು ರೈಲ್ವೆ ಮಾರ್ಗದ ವಿಷಯದಲ್ಲಿ ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಬಹಳ ಕಡಿಮೆ ರೈಲ್ವೆ ಲೈನು ಇದೆ. ಅದಕ್ಕೋಸ್ಕರ ದಯಮಾಡಿ ಸುದೈವದಿಂದ ಕೇಂದ್ರದಲ್ಲಿ ರಾಜ್ಯ ರೈಲ್ವೆ ಮಂತ್ರಿಗಳು ನಮ್ಮವರೇ ಇದ್ದಾರೆ. ನಮ್ಮ ಕರ್ನಾಟಕದ ಬಗ್ಗೆ ಅವರಿಗೆ ತುಂಬಾ ಅಭಿಮಾನವಿದೆ, ನಮ್ಮ ರಾಜ್ಯದಲ್ಲಿ ಆದಷ್ಟು ರೈಲ್ವೆ ಮಾರ್ಗಗಳನ್ನು ಮಾಡಬೇಕೆನ್ನುವ ಒಂದು ಅಭಿಪ್ರಾಯ ಅವರಲ್ಲಿ ಇದೆ, ಅದಕ್ಕೆ ತಕ್ಕಂತೆ ಕರ್ನಾಟಕ ರಾಜ್ಯಸರ್ಕಾರದವರು ಅವಶ್ಯಕವಾದ ರೈಲ್ವೆ ಮಾರ್ಗಗಳನ್ನು ಹಾಕುವ ಬಗ್ಗೆ ಅನುವು ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಬಳ್ಳಾರಿ ಗುಲ್ಬರ್ಗಾ ರೈಲ್ವೆ ಮಾರ್ಗ ಮಾಡಬೇಕಾಗಿದೆ. ಇದು ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ತುಂಗಭದ್ರಾ ಪ್ರಾಜೆಕ್ಟ್‌ಗಳ ಮುಖಾಂತರ ಹಾದುಹೋಗುವುದರಿಂದ ಆ ಭಾಗದ ಜನಗಳಿಗೆ ಮತ್ತು ಹಿಂದುಳಿದಿರುವ ಜಿಲ್ಲೆಯಾದ ಗುಲ್ಬರ್ಗಾಕ್ಕೆ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಹೊಸಪೇಟೆ–ಹುಬ್ಬಳ್ಳಿ ರೈಲ್ವೆ ಮಾರ್ಗ ಮೀಟರ್‌ಗೇಜ್ ಇರುವುದನ್ನು ಬ್ರಾಡ್‌ಗೇಜ್ ಆಗಿ ಪರಿವರ್ತನೆ ಮಾಡಿದ್ದಾರೆ. ಬೆಂಗಳೂರು–ಗುಂತಕಲ್ ಬ್ರಾಡ್‌ಗೇಜ್ ಕೆಲಸ ನಡೆಯುತ್ತಿದೆ. ಅದೇ ಪ್ರಕಾರ ಹುಬ್ಬಳ್ಳಿಯವರೆಗೂ ಎಕ್ಸ್‌ಟೆಂಡ್ ಮಾಡಿದ್ದೆ ಆದರೆ ಬೆಂಗಳೂರು ಮದ್ರಾಸ್ ಎಲ್ಲಾ ಕಡೆಗೂ ಅನುಕೂಲವಾಗುತ್ತದೆ. ಹೊಸಪೇಟೆ-ಹುಬ್ಬಳ್ಳಿ ಮೀಟರ್‌ಗೇಜ್‌ನ್ನು ಬ್ರಾಡ್‌ಗೇಜಾಗಿ ಪರಿವರ್ತನೆ ಮಾಡಿ ಕೇಂದ್ರಸರ್ಕಾರಕ್ಕೆ ಒತ್ತಾಯ ತರಬೇಕೆಂದು ಕೇಳಿಕೊಳ್ಳುತ್ತೇನೆ, ಕೊಟ್ಟೂರು–ಹರಿಹರಕ್ಕೆ ೩೦ ವರ್ಷಗಳಿಂದಲೂ ರೈಲ್ವೆ ಮಾರ್ಗ ಬೇಕೆಂದು ಕೇಳುತ್ತಿದ್ದೇವೆ. ದೂರ ೩೦ ಮೈಲಿ ಇದೆ, ಆಗಲೇ ಸರ್ವೆ ಕೆಲಸ ಆಗಿದೆ. ಬಳ್ಳಾರಿ–ಹರಿಹರಕ್ಕೂ ಅನುಕೂಲವಾಗುತ್ತದೆ ಸರ್ವೆ ಕೆಲಸ ನಡೆದಿದೆ ಇದರ ಬಗ್ಗೆ ಕೇಂದ್ರಸರ್ಕಾರಕ್ಕೆ ಒತ್ತಾಯ ತರಬೇಕೆಂದು ಹೇಳುತ್ತಿದ್ದೇನೆ. ಕಾರವಾರದಲ್ಲಿ ಹಡಗು ಬಂದರು ನಿರ್ಮಾಣ ಆಗಿರುವ

ದರಿಂದ, ಕಬ್ಬಿಣದ ಅದಿರು ಹೊರದೇಶಗಳಿಗೆ ಹೋಗಬೇಕಾದರೆ ಮದ್ರಾಸ್, ಬೊಂಬಾಯಿ ಮೂಲಕ ಕಳುಹಿಸಿಕೊಡಬೇಕಾಗಿತ್ತು. ಈಗ ಬಂದರು ನಮ್ಮಲ್ಲೇ ಇರುವುದರಿಂದ ಕೋಟ್ಯಾಂತರ ರೂಪಾಯಿ ಹಣ ಬೇರೆ ರಾಜ್ಯಗಳಿಗೆ ಹೋಗುತ್ತಿತ್ತು. ಅದು ಈಗ ಉಳಿತಾಯವಾಗುತ್ತಿದೆ. ಆದಷ್ಟು ಬೇಗ ಹುಬ್ಬಳ್ಳಿ–ಕಾರವಾರ ಹೊಸ ರೈಲ್ವೆ ಮಾರ್ಗ ಏರ್ಪಾಡು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಎಲ್ಲಾ ರಾಜ್ಯಗಳಿಂದಲೂ ಪ್ರತಿನಿತ್ಯ ದೆಹಲಿಗೆ ರೈಲ್ವೆ ಎಕ್ಸ್‌ಪ್ರೆಸ್‌ಗಳು ಇವೆ. ನಮ್ಮಲ್ಲಿ ದುರ್ದೈವ, ಒಂದೇ ಒಂದು ಕೆ. ಕೆ. ಎಕ್ಸ್‌ಪ್ರೆಸ್ ವಾರಕ್ಕೆ ಎರಡು ದಿವಸ ಬಿಟ್ಟು ಓಡಾಡುತ್ತಿದೆ, ಅದಕ್ಕೆ ರಿಸರ್ವೇಷನ್ ಮಾಡಿಸಬೇಕಾದರೆ ಆ ಕಷ್ಟ ಬಿದ್ದವರಿಗೆ ಗೊತ್ತು ಅದರ ಅನುಭವ. ಮಾನ್ಯ ದಿವಂಗತ ಕೆಂಗಲ್ ಹನುಮಂತಯ್ಯನವರು ಕೇಂದ್ರ ರೈಲ್ವೆ ಮಂತ್ರಿಗಳಾಗಿದ್ದಾಗ ಬೆಂಗಳೂರಿನಿಂದ ದೆಹಲಿಗೆ ರೈಲು ಓಡಾಡುವಂತೆ ಏರ್ಪಾಡು ಮಾಡಿದ್ದರು. ಈವೊತ್ತಿನ ದಿವಸ ಬೆಂಗಳೂರಿನಿಂದ ಗುಂತಕಲ್‌ನವರೆಗೆ ಮೀಟರ್‌ಗೇಜ್ ಏನು ಇದೆ ಬ್ರಾಡ್‌ಗೇಜ್ ಆಗಿ ಪರಿವರ್ತನೆಯಾಗಬೇಕು ಎಂದು ಹೇಳುತ್ತೇನೆ. ಈಗಾಗಲೇ ಅದರ ವರ್ಕ್ ನಡೆಯುತ್ತಾ ಇದೆ. ಆದಷ್ಟು ಜಾಗ್ರತೆ ಆ ಕೆಲಸವನ್ನು ಮುಗಿಸಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಒತ್ತಾಯ ತರಬೇಕು ಎಂದು ಮತ್ತೊಮ್ಮೆ ಹೇಳಬಯಸುತ್ತೇನೆ. ಈಗ ನಮ್ಮ ಕರ್ನಾಟಕದಲ್ಲಿ ಕೆ. ಕೆ. ಎಕ್ಸ್‌ಪ್ರೆಸ್ ಮಾತ್ರ ಇದೆ, ಅದು ವಾರಕ್ಕೆರಡು ಸಾರಿ ಮಾತ್ರ ಡೆಲ್ಲಿಗೆ ಹೋಗುತ್ತದೆ. ಅದರಲ್ಲಿ ಡೆಲ್ಲಿಗೆ ಹೋಗಬೇಕಾದರೆ ೨½ ದಿವಸ ಹಿಡಿಯುತ್ತದೆ. ಪ್ರತಿದಿವಸವೂ ಡೆಲ್ಲಿಗೆ ಹೋಗಿ ಬರುವ ಹಾಗೆ ಟ್ರೈನ್ ಅವಕಾಶ ದೊರೆಯುವಂತೆ ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಚನೆ ಮಾಡಿ ತಮ್ಮ ಗಮನವನ್ನು ಹರಿಸಿ ಕರ್ನಾಟಕದ ರಾಜಧಾನಿಯಾದಂಥಾ ಬೆಂಗಳೂರಿನಿಂದ ಪ್ರತಿನಿತ್ಯ ಡೆಲ್ಲಿಗೆ ಹೋಗುವ ಹಾಗೆ ಟ್ರೈನಿನ ಫೆಸಿಲಿಟೀಸ್ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಈಗ ಹೋಗಬೇಕಾದರೆ ೩೬ ಗಂಟೆ ಹಿಡಿಯುತ್ತದೆ. ಗುಂತಕಲ್ ಮುಖಾಂತರ ಹೋದರೆ ೩೦ ಗಂಟೆ ಕಾಲ ಆಗಬಹುದು. ಪ್ರತಿನಿತ್ಯ ಇಲ್ಲಿಂದ ಡೆಲ್ಲಿಗೆ ಹೋಗುವ ಹಾಗೆ ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡಿಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಬಳ್ಳಾರಿಯಲ್ಲಿ ಒಂದು ಏರೋಡ್ರಾಂ ಇದೆ. ಅದು ಫುಲ್ಲಿ ಎಕ್ವಿಪ್ಡ್ ಏರೋಡ್ರಾಂ. ಅದು ಮಿಲಿಟ್ರಿ ಏರೋಡ್ರಾಂ. ಈಗ ಬೆಂಗಳೂರು ಬಿಟ್ಟರೆ ಮಂಗಳೂರು ಮತ್ತು ಬೆಳಗಾಂ ಈ ಎರಡು ಮಾತ್ರ ಏರೋಡ್ರಾಂ ನಮ್ಮ ರಾಜ್ಯದಲ್ಲಿ ಇದೆ. ಕೊನೇ ಪಕ್ಷ ಅತಿ ಕಡಿಮೆ ವೆಚ್ಚದಲ್ಲಾದರೂ ಕೂಡ ನಮ್ಮ ಬಳ್ಳಾರಿಯಲ್ಲಿ ಮಾಡಿಕೊಡುವ ಹಾಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು ಎಂದು ಹೇಳುತ್ತೇನೆ. ನಮ್ಮಲ್ಲಿ ಮುಂದೆ ವಿಜಯನಗರ ಸ್ಟೀಲ್ ಪ್ಲಾಂಟ್ ಬಂದಿದೆ, ಅದು ಮುಂದೆ ಬಹಳ ಅಭಿವೃದ್ಧಿ ಆಗಿಯೇ ಆಗುತ್ತದೆ. ಇದಕ್ಕೆ ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳು ಶಂಕುಸ್ಥಾಪನೆ ಹಾಕಿರುವುದರಿಂದ ಈ ವಿಜಯನಗರ ಸ್ಟೀಲ್ ಪ್ಲಾಂಟ್ ಬರುವ ಬಗ್ಗೆ ನಮಗೆ ಯಾವ ಅನುಮಾನವೂ ಇಲ್ಲ. ಅಲ್ಲದೆ ಇದಕ್ಕೆ ವರ್ಲ್ಡ್ ಬ್ಯಾಂಕ್ ಸಹಾಯ ಬೇರೆ ಸಿಕ್ಕುತ್ತದೆ. ಈ ವಿಜಯನಗರ ಸ್ಟೀಲ್ ಪ್ಲಾಂಟ್ ಮುಂದೆ ಪೂರ್ಣಗೊಂಡ ಮೇಲೆ ಆವಾಗ ಈ ಏರೋಡ್ರಾಂನ ಅವಶ್ಯಕತೆ, ಉಪಯೋಗ ತುಂಬಾ ಬೇಕಾಗುತ್ತದೆ. ಈ ಕಾರಣದಿಂದ ನಮ್ಮ ರಾಜ್ಯಸರ್ಕಾರದವರು ಕೇಂದ್ರಸರ್ಕಾರದವರ ಮೇಲೆ ಒತ್ತಾಯ ಹಾಕಿ ನಮ್ಮಲ್ಲಿ ಏರೋಡ್ರಾಂ ಬರುವ ಹಾಗೆ ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಮಾಡಿಕೊಡಬೇಕು ಎಂದು ಕೇಳುತ್ತೇನೆ. ಕೊನೆಯದಾಗಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

CHAIRMAN.—Discussion on the Demands will continue tomorrow. The House now stands adjourned to meet at 12-00 Noon, tomorrow.

The House adjourned at Thirteen minutes past Six of the Clock to meet again at Twelve of the Clock on Tuesday, the 21st July, 1981